# ಪ್ರಸಾದ

**ಸಂಪುಟ 28 ಸಂಚಿಕೆ 5** **ಸೆಪ್ಟೆಂಬರ್-ಅಕ್ಟೋಬರ್ 2013**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಮ.ಗು. ಸದಾನಂದಯ್ಯ
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾ ಶೇಖರ್
ಡಾ. ಎನ್. ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಪರಿವಿಡಿ


ಸಂಪಾದಕೀಯ 5

ಗುರುವಾಣಿ 8

ಸ್ಥಾನಾಚಾರ್ಯ ಪರಂಪರೆ ಮತ್ತು ಶೈವ ಮೀಮಾಂಸೆಯ ನೆಲೆಗಳು 10
**ಡಾ. ಎನ್.ಎಂ. ಗಿರಿಜಾಪತಿ**

ಬಸವಣ್ಣ ಮತ್ತು ಗುರುನಾನಕ್: ಒಂದು ತೌಲನಿಕ ನೋಟ 18
**ಡಾ. ತಿಪ್ಪೇಸ್ವಾಮಿ**

ಅಮರಕಲ್ಯಾಣದ ಸ್ಥಾಪಕ: ದಿಗ್ಗಿ ಸಂಗಮನಾಥ 28
**ಡಾ. ಕೆ. ರವೀಂದ್ರನಾಥ**

ಅಲ್ಲಮನ ವಚನಗಳಲ್ಲಿ ವೈಚಾರಿಕತೆ 36
**ಶ್ರೀ ಶಿಲ್ಪಿ**

ಸರ್ ಥಾಮಸ್ ಮೂರ್‌ನ 'ಯುಟೋಪಿಯಾ' ಹಾಗೂ ಬಸವಣ್ಣನವರ
'ಅನುಭವ ಮಂಟಪ' 41
**ಡಾ. ಎಸ್.ಆರ್.ಗುಂಜಾಳ**

ಕಾಲ 47
**ಎಂ.ಎಸ್. ಚಂದ್ರಶೇಖರ ಅಯ್ಯರ್**

ವಾರ್ತಾವಿಹಾರ 55


**ಮುಖಪುಟ ಚಿತ್ರ**

ಭಾರತದ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿಯವರು ಜೆಎಸ್‌ಎಸ್ ಆಸ್ಪತ್ರೆ ನೂತನ ಕಟ್ಟಡವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಕೇಂದ್ರ ಸಚಿವ ಶ್ರೀ ಆಸ್ಕರ್ ಫರ್ನಾಂಡಿಸ್, ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ, ರಾಜ್ಯಪಾಲ ಶ್ರೀ ಹನ್ಸ್‌ರಾಜ್ ಭಾರದ್ವಾಜ್, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್ ಮತ್ತು ಶ್ರೀ ಯು.ಟಿ. ಖಾದರ್ ಅವರು

## ಲೇಖಕರ ವಿಳಾಸ


**ಡಾ. ಎನ್.ಎಮ್. ಗಿರಿಜಾಪತಿ**
ಸಹಾಯಕ ಪ್ರಾಧ್ಯಾಪಕರು
ಜೆಎಸ್ಎಸ್ ಮಹಿಳಾ ಕಾಲೇಜು
ಚಾಮರಾಜನಗರ 571 313

**ಡಾ. ತಿಪ್ಪೇಸ್ವಾಮಿ**
ನಂ. 369, 'ಎ' ಮತ್ತು 'ಬಿ' ಬ್ಲಾಕ್
ಕುವೆಂಪುನಗರ
ಮೈಸೂರು 570 023

**ಡಾ. ಕೆ. ರವೀಂದ್ರನಾಥ**
ನಂ. 369, 'ಎ' ಮತ್ತು 'ಬಿ' ಬ್ಲಾಕ್
ಕುವೆಂಪುನಗರ
ಮೈಸೂರು 570 023

ಶ್ರೀ ಶಿಲ್ಪಿ
'ಶರೀಫಗಿರಿ'
ಜಯನಗರ
ದಾವಣಗೆರೆ

**ಡಾ. ಎಸ್.ಆರ್. ಗುಂಜಾಳ**
2ನೇ ಮಹಡಿ, ಸಂತೂಬಾಯಿ ಅಪಾರ್ಟಮೆಂಟ್
ಕೋರ್ಟ್‌ರೋಡ್, ಲೈನ್ ಬಜಾರ್
ಧಾರವಾಡ 580 001

**ಎಂ.ಎಸ್. ಚಂದ್ರಶೇಖರ ಅಯ್ಯರ್**
ಕಾಲಮಾನಶಾಸ್ತ್ರ ತಂತ್ರಜ್ಞ
ನಂ. 302, 3ನೇ ಮಹಡಿ, ಸಿ.ಎಚ್. 5
ನವರತ್ನ ಎನ್‌ಕ್ಲೇವ್
ಚಾಮರಾಜ ಬೂಲ್‌ವಾರ್ಡ್ ರಸ್ತೆ
ಚಾಮರಾಜಪುರಂ
ಮೈಸೂರು 570 005


## ಸಂಪಾದಕೀಯ

**ನ**ಮ್ಮ ನಡುವೆಯೇ ಇದ್ದ ಈ ಭಾಗದ ಜನಪ್ರಿಯ ರಾಜಕೀಯ ಮುತ್ಸದ್ದಿ ಶ್ರೀ ಅಬ್ದುಲ್ ನಜೀರ್ ಸಾಬ್ ಅವರ ಕೊನೆಯ ದಿನಗಳ ಒಂದು ಘಟನೆ, ಯಾವುದೇ ಜನಪ್ರತಿನಿಧಿಯಾದವರಿಗೆ ಒಂದು ನೀತಿಪಾಠವಾಗಬೇಕಿದೆ. ಅವರು ಶ್ವಾಸಕೋಶದ ಅರ್ಬುದ ರೋಗಕ್ಕೆ ತುತ್ತಾಗಿ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ದಾಖಲಾಗಿ ಅಂತಿಮ ದಿನಗಳನ್ನು ಎಣಿಸುತ್ತಿದ್ದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಆರ್. ಬೊಮ್ಮಾಯಿಯವರು ನಜೀರ್ ಸಾಬ್ ಅವರನ್ನು ನೋಡಲು ಆಸ್ಪತ್ರೆಗೆ ಬಂದರು. ತಮ್ಮ ಸಂಪುಟದ ಹಿರಿಯ ಸದಸ್ಯರಾಗಿ ಪಂಚಾಯತ್‌ರಾಜ್ ಇಲಾಖೆಯನ್ನು ದೇಶಕ್ಕೇ ಮಾದರಿಯಾಗುವಂತೆ ನಿರ್ವಹಿಸಿ ಖ್ಯಾತಿಯ ಉತ್ತುಂಗದಲ್ಲಿ ಇದ್ದ ನಜೀರ್‌ಸಾಬ್ ಜೀವಚ್ಛವವಾಗಿ ಮಲಗಿದ್ದರು. ಕೃತಕ ಉಸಿರಾಟದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಬೊಮ್ಮಾಯಿಯವರು ನಜೀರ್‌ಸಾಬ್ ಅವರ ಸನಿಹ ಕುಳಿತು ಸಾಂತ್ವನದ ಮಾತುಗಳನ್ನು ಆಡುತ್ತಲೇ, "ನಿಮ್ಮ ಮನೆಯದು ಏನಾದರೂ ಪ್ರಾಬ್ಲಂ ಇದ್ದರೆ ಹೇಳಿ....ನಾನು ಅದನ್ನು ಸರಿಪಡಿಸುತ್ತೇನೆ. ಅದಕ್ಕಾಗಿ ಚಿಂತೆ ಮಾಡಬೇಡಿ" ಎಂದು ಮೆಲುದನಿಯಲ್ಲಿ ನುಡಿದರು. ಐದು ವರ್ಷಗಳ ಕಾಲ (1983-88) ಪಂಚಾಯತ್‌ರಾಜ್‌ನಂತಹ ಇಲಾಖೆಯ ಮಂತ್ರಿಯಾಗಿದ್ದರೂ, ನಜೀರ್ ಅವರು ತಮ್ಮ ಕೈಗಳನ್ನು ಸ್ವಚ್ಛವಾಗಿ ಇರಿಸಿಕೊಂಡಿದ್ದವರು. ಅವರು ಆರ್ಥಿಕವಾಗಿ ಅಂತಹ ಸಬಲರೇನೂ ಆಗಿರಲಿಲ್ಲ. ಆ ಹಿನ್ನೆಲೆಯಲ್ಲಿ ಶ್ರೀ ಬೊಮ್ಮಾಯಿಯವರು ಹಾಗೆ ಹೇಳಿದ್ದರ ಹಿಂದೆ ಅವರ ಮಾನವೀಯ ಕಳಕಳಿ ಮೆಚ್ಚುವಂತದ್ದೇ ಆಗಿತ್ತು.

ಅದುವರೆವಿಗೆ ಮೌನವಾಗಿಯೇ ತಮ್ಮ ಉಸಿರಾಟದೊಡನೆಯೇ ಹೋರಾಡುತ್ತಿದ್ದ ನಜೀರ್‌ಸಾಬ್ ಅವರು, ತಮ್ಮ ಎಲ್ಲ ಶಕ್ತಿಯನ್ನು ಕ್ರೋಢೀಕರಿಸಿಕೊಂಡವರಂತೆ "ಸರ್, ನನಗೆ ನನ್ನ ಮನೆಯ ಸಮಸ್ಯೆ ಏನೂ ಇಲ್ಲ. ಅದರ ಬಗ್ಗೆ ಚಿಂತೆ ಬೇಡ. ಅದು ಹೇಗೋ ನಡೆಯುತ್ತದೆ. ನಾನು ಈಗಾಗಲೇ ಒಂದು ತಾಲ್ಲೂಕಿಗೆ ವರ್ಷಕ್ಕೆ ಬಡವರಿಗಾಗಿ ಒಂದು ಸಾವಿರ ಮನೆಗಳನ್ನು ನಿರ್ಮಿಸಿ ಹಂಚಬೇಕು ಎನ್ನುವ ಯೋಜನೆಯನ್ನು ಸಿದ್ಧಪಡಿಸಿದ್ದೇನೆ. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದರೆ ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ವಸತಿರಹಿತರೇ ಇರುವುದಿಲ್ಲ. ದಯವಿಟ್ಟು ಇದನ್ನು

ಆಗುಮಾಡಿ, ನಿಮ್ಮ ಸರ್ಕಾರಕ್ಕೆ ಪುಣ್ಯ ಬರುತ್ತದೆ. ನನ್ನ ಆತ್ಮಕ್ಕೂ ಶಾಂತಿ ಸಿಕ್ಕುತ್ತದೆ" ಎಂದು ನುಡಿದರು. ಇಹಲೋಕವನ್ನೇ ತ್ಯಜಿಸಲು ಸಿದ್ಧವಾಗುತ್ತಿರುವ ಸಮಯದಲ್ಲಿಯೂ ಒಂದು ಜೀವ, ತನ್ನ ದೈಹಿಕ ಹಾಗೂ ಸಾಂಸಾರಿಕ ಸಮಸ್ಯೆಗಳ ಬಗ್ಗೆ ಸ್ವಲ್ಪವೂ ಚಿಂತೆ ಮಾಡದೆ 'ಬಡವರಿಗೆ ಮನೆ ಕಟ್ಟಿಕೊಡಿ, ಅದೇ ಪುಣ್ಯದ ಕೆಲಸ' ಎಂದು ಹೇಳಿದ್ದು ಬೊಮ್ಮಾಯಿಯವರ ಸಾಕ್ಷೀಪ್ರಜ್ಞೆಯನ್ನು ಉದ್ದೀಪಿಸಿದಂತಾಯಿತು. ಅವರಿಗೆ ದುಃಖ ಒತ್ತರಿಸಿ ಬಂತು. ತನ್ನ ಸ್ಥಿತಿಗಾಗಿ ದುಃಖದಲ್ಲಿ ಮರುಗಬೇಕಾಗಿದ್ದ ನಜೀರ್ ಸಾಬ್ ಶಾಂತಚಿತ್ತರಾಗಿಯೇ ಇದ್ದರು; ಅವರ ಬಳಿಯಿದ್ದ ಬೊಮ್ಮಾಯಿಯವರು ದುಃಖಸಾಗರದಲ್ಲಿ ಮುಳುಗಿದ್ದರು.

ಅಬ್ದುಲ್ ನಜೀರ್ ಸಾಬ್ ಅವರ ಪೂರ್ವಜರು ತಮಿಳುನಾಡಿನವರು. ವ್ಯಾಪಾರದ ಕಾರಣಕ್ಕಾಗಿ ಗುಂಡ್ಲುಪೇಟೆಗೆ ಬಂದು ನೆಲೆಸಿದರು. ನಜೀರ್‌ರು ಬಾಲ್ಯದಲ್ಲಿ ಗುಂಡ್ಲುಪೇಟೆಯ ಕನ್ನಡ ಶಾಲೆಯಲ್ಲಿಯೇ ಓದಿದವರು. ಘನಪಾಠಿ ನಾರಾಯಣರಾಯರಂತಹ (ವಿಧಿ ಪುದಿದ ಗದೆ ಕದನಂ ಎನ್ನುವುದು ಇವರ ಒಂದು ಹಳೆಗನ್ನಡ ಕೃತಿ) ವಿದ್ವಾಂಸರ ಶಿಷ್ಯರಾಗಿದ್ದವರು. ಕನ್ನಡ ಭಾಷೆಯಲ್ಲಿ ತುಂಬಾ ಅದ್ಭುತವಾಗಿ ಮಾತನಾಡುತ್ತಿದ್ದರು. ವಿಧಾನ ಸಭಾಧ್ಯಕ್ಷೆಯಾಗಿದ್ದಂತಹ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಮಾನಸಪುತ್ರರೆಂದೇ ಬಿಂಬಿತರಾಗಿದ್ದ ನಜೀರ್ ಸದಾ ಅಧ್ಯಯನ ಶೀಲರಾಗಿದ್ದರು. ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳೆಂದರೆ ಅವರಿಗೆ ಬಲು ಪ್ರೀತಿ. ಯಾವ ಗುಂಪಿನಲ್ಲಿದ್ದರೂ ಎದ್ದು ಕಾಣುವಂತಹ ಎತ್ತರದ ನಿಲುವು. ಗುಂಡ್ಲುಪೇಟೆ ಭಾಗದ ಯಾವುದೇ ವ್ಯಕ್ತಿಯನ್ನು – ಅವರು ಎಂತಹ ಸಾಮಾನ್ಯರೇ ಇರಲಿ – ಹೆಸರು ಹಿಡಿದು ಕರೆಯುವಂಥ ಅಗಾಧ ನೆನಪಿನ ಶಕ್ತಿ. ಯಾವುದೇ ಊರಿಗೆ ಹೋದರೂ ಅಭಿಮಾನಿಗಳ ಮನೆಯ ಪಡಸಾಲೆಯಲ್ಲಿಯೇ ಕುಳಿತು, ಆ ಮನೆಯ ಮಹಿಳೆಯರನ್ನೂ ಹೆಸರು ಹಿಡಿದು ಕರೆದು ಟೀ, ಕಾಫಿ ಕೇಳಿ ಕುಡಿಯುವಷ್ಟು ಆತ್ಮೀಯತೆ. ರಾಜ್ಯದ ಪ್ರತಿಷ್ಠಿತ ಮಂತ್ರಿಯಾದರೂ, ತನ್ನ ಕ್ಷೇತ್ರಕ್ಕೆ ಬಂದಾಗಲಂತೂ, ಅದೇ (ಹಿಂದಿನ ಜಾವಾ ಮೋಟಾರ್ ಸೈಕಲ್‌ನಲ್ಲಿ ತಿರುಗಾಡುತಿದ್ದ ಕಾಲದ) ನಜೀರ್ ಸಾಬ್ ಆಗಿ ಎಲ್ಲರೊಡನೆ ಬೆರೆತುಹೋಗುತ್ತಿದ್ದರು. ಕಾರಿನಲ್ಲಿ ಕುಳಿತು ಬೆಂಗಳೂರಿಗೆ ಪ್ರಯಾಣಿಸುವಾಗಲಂತೂ, ಒಂದು ಪುಸ್ತಕದ ಮೇಲೆ ಕಣ್ಣು ಕೀಲಿಸಿದರೆ, ಬೆಂಗಳೂರಿಗೆ ಬಂದಾಗಲೇ ಅವರು ವಾಸ್ತವಕ್ಕೆ ಬರುತ್ತಿದ್ದುದು. ಅವರ ಕೊನೆಯ ದಿನಗಳಲ್ಲಂತೂ, ವೈದ್ಯರ ಸಲಹೆಯನ್ನೂ ಧಿಕ್ಕರಿಸಿ, ರಸ್ತೆ ಮೂಲಕ ಬರುವುದು ಸಾಧ್ಯವಾಗದಿದ್ದರೂ ಹೆಲಿಕಾಪ್ಟರ್‌ನಲ್ಲಿ ಗುಂಡ್ಲುಪೇಟೆಗೆ ಆಗಮಿಸಿ, ಕ್ಷೇತ್ರದ ಜನತೆಯನ್ನು ಕಂಡು ತಮ್ಮ ಕಣ್ಣುಗಳಿಗೆ ತುಂಬಿಕೊಂಡ ಪರಿ ಅಚ್ಚರಿ ಮೂಡಿಸುವಂಥದಾಗಿತ್ತು. ಹಾಗೆ ನೋಡಿದರೆ ಅವರು ಎಂದೂ ಆ ಕ್ಷೇತ್ರದಲ್ಲಿ ನೇರ ಚುನಾವಣೆಗೆ ನಿಂತು ಶಾಸಕರಾದವರಲ್ಲ!



ಆದರೂ ಅವರು ಎಲ್ಲ ಜನರ ಬಾಯಲ್ಲಿ 'ನಮ್ಮ ನಜೀರ್ ಸಾಬ್' ನಮ್ಮ ನೀರ್‌ಸಾಬರು ಆಗಿದ್ದರು!

ಬೊಮ್ಮಾಯಿ ಮತ್ತು ನಜೀರ್ ಸಾಬ್ ಭೇಟಿಯಾದ ಸಂದರ್ಭದಲ್ಲಿ ಇವರು ಯಾವ ಬೇಡಿಕೆಯನ್ನು ಇಟ್ಟಿದ್ದರೂ ಮುಖ್ಯಮಂತ್ರಿಗಳು ಅದನ್ನು ನೆರವೇರಿಸಲು ಸಿದ್ಧವಿದ್ದರು. ಆದರೆ ನಜೀರ್ ಅವರು ತನ್ನ ನಂತರ ತನ್ನ ಕುಟುಂಬಕ್ಕೆ ರಾಜಕೀಯ ಆಶ್ರಯ ಕಲ್ಪಿಸಿಕೊಡಿ ಎಂದಾಗಲೀ ಅಥವಾ ಯಾವುದಾದರೂ ಸವಲತ್ತುಗಳನ್ನು ಕೊಡಿ ಎಂದಾಗಲೀ ಕೇಳಲಿಲ್ಲ. ಅದಕ್ಕೆ ಬದಲು 'ಸರ್ಕಾರಕ್ಕೆ ಪುಣ್ಯ ಬರುವ ಯೋಜನೆಯೊಂದು ಕಾರ್ಯಗತವಾಗಲಿ' ಎನ್ನುವ ಸಮಾಜಮುಖಿಯಾದ ಆಶಯವನ್ನು ವ್ಯಕ್ತಪಡಿಸಿದರು. ಇದನ್ನು ಕಂಡಾಗ ಬಸವಣ್ಣನವರ ಒಂದು ವಚನ ಇಲ್ಲಿ ಉಲ್ಲೇಖಾರ್ಹ ಎನಿಸುತ್ತಿದೆ.

> ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
> ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ-ಮಕ್ಕಳಿಗೆಂದು
> ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!
> "ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ |
> ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ||
> ಎಂಬ ಶ್ರುತಿಯ ಬಸವಣ್ಣನೋದುವನು" ಎಂಬರು.
> "ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
> ಓಲೈಸಿಹನೆ"ಂದು ನುಡಿವರಯ್ಯಾ ಪ್ರಮಥರು.
> ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ !
> ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ,
> ಸಲೆ ಕೈಕೂಲಿಯ ಮಾಡಿಯಾದಡೆಯೂ,
> ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದಡೆ
> ತಲೆದಂಡ! ಕೂಡಲಸಂಗಮದೇವಾ.

ಬಸವಣ್ಣ ಹಾಗೂ ನಜೀರ್ ಇಬ್ಬರೂ ಒಂದು ರಾಜ್ಯದ ಮಂತ್ರಿಗಳಾಗಿದ್ದವರು. ಒಬ್ಬ ಜನಪ್ರತಿನಿದಿಯಾದವನ ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕು ಹೇಗಿರಬೇಕು ಎನ್ನುವುದಕ್ಕೆ ಈ ಈರ್ವರೂ ಒಂದು ಮಾದರಿಯಾಗಿ (ಈ ಹೋಲಿಕೆಯನ್ನು ಒಂದು ಮಿತಿಯಲ್ಲಿ ಸ್ವೀಕರಿಸಬೇಕು) ಕಂಡುಬರುತ್ತಾರೆ. ನಜೀರ್ ಸಾಬ್ ಲೌಕಿಕ ದೃಷ್ಟಿಯಿಂದ ಬಸವಪಂಥೀಯರಲ್ಲದಿದ್ದರೂ, ಆಚಾರ ವಿಚಾರಗಳ ದೃಷ್ಟಿಯಿಂದ ನಿಜವಾದ ಬಸವಾನುಯಾಯಿಗಳೆಂದರೆ ಅತಿಶಯೋಕ್ತಿಯಾಗಲಾರದು. ಇಂತಹವರ ಸಂತತಿ ರಾಜಕೀಯದಲ್ಲಿ ಇಂದು ಹೆಚ್ಚಾಗಿರಬೇಕಾದ ಅನಿವಾರ್ಯತೆಯ ಕಾರಣಕ್ಕಾಗಿ 'ನಜೀರ್'ರಂತಹ ಶರಣರು ಮತ್ತೆ ಮತ್ತೆ ನೆನಪಾಗುತ್ತಾರೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಮನುಷ್ಯ ಬೇರೆ ಪ್ರಾಣಿಗಳಿಗಿಂತ ಶ್ರೇಷ್ಠ ಎನಿಸಿಕೊಳ್ಳುವುದು ತನ್ನ ವಿಚಾರವಂತಿಕೆಯಿಂದ. ತಾನು ಮಾಡುವ ಯಾವುದೇ ಕ್ರಿಯೆಯ ಒಳಿತು ಕೆಡಕುಗಳನ್ನು ಚಿಂತಿಸಿ ಕಾರ್ಯಪ್ರವೃತ್ತವಾಗುವುದು ವಿಚಾರವಂತಿಕೆಯ ಮೂಲಧಾತು. ಆದ್ದರಿಂದಲೇ ಅದು ಕೇವಲ ಬುದ್ಧಿಗತ ಕ್ರಿಯೆ ಮಾತ್ರ ಆಗಿರದೆ, ಭಾವಸಂಬಂಧಿ ಕ್ರಿಯೆಯೂ ಆಗಿರುತ್ತದೆ. ಪರಿಶುದ್ಧಭಾವದ ನೆಲೆಗಟ್ಟಿಲ್ಲದ ಬರಿಯ ಬುದ್ಧಿಗತ ತರ್ಕಗಳು ಹಾಗೂ ಸಮರ್ಥನೆಗಳಿಗೆ ಅಷ್ಟಾಗಿ ಬೆಲೆ ಇರುವುದಿಲ್ಲ. ಚಿತ್ತಸಮತೆಯಿಂದ ಸತ್ಯದೊಡನೆ ಮಾಡುವ ಅನುಸಂಧಾನವೇ ಜ್ಞಾನ. ಜ್ಞಾನದ ಪರಮ ಗುರಿ ಕೇವಲ ಭೌತಿಕ ವಸ್ತುಗಳ ಸೂಕ್ಷ್ಮಾತಿಸೂಕ್ಷ್ಮ ಪರಿಜ್ಞಾನ ಅಥವಾ ಕೇವಲ ಮಾಹಿತಿಸಂಗ್ರಹ ಮಾತ್ರವಲ್ಲ. ಸತ್ಯಾನ್ವೇಷಣೆಯ ಬೇರೆಬೇರೆ ಸೋಪಾನಗಳು  ಪರಮಸತ್ಯದ ಶೃಂಗವನ್ನು ತಲುಪಲು ಇರುವ ಉಪಾಧಿಗಳು ಅಷ್ಟೆ. ಈ ಸೋಪಾನಗಳ ಒಂದೊಂದು ಮಜಲನ್ನಷ್ಟೆ ಸಾಧಿಸಿಕೊಂಡು ಅದೇ ಪರಮ ಜ್ಞಾನ ಎನ್ನುವ ಭ್ರಮಾತ್ಮಕ ಅಹಮಿಕೆಯ ದಾಸರಾಗಿ, ಅದರಾಚೆಗೂ ಅನಂತವಾಗಿ ಹರಡಿರುವ ಪರಮ ಸತ್ಯದ ಸ್ವರೂಪವನ್ನು ಮರೆತು ಮಲೆಯುವವರ ಉದಾಹರಣೆಗಳೂ ಸಾಕಷ್ಟು ಸಿಕ್ಕುತ್ತವೆ.

ವ್ಯಾಕರಣವನೋದಿದಲ್ಲಿ ಶಬ್ದಶುದ್ಧಿಯಲ್ಲದೆ
ಮನ ಶುದ್ಧವಾಗಿ ಜ್ಞಾನಶುದ್ಧಿಯಾಗದು.
ಛಂದಸ್ಸು ಸಾಧಿಸಿದಲ್ಲಿ ಕವಿತಾಶುದ್ಧಿಯಲ್ಲದೆ
ಕವಿತೆಯ ಸಾಧಿಸಿ, ವ್ಯಾಸನಂತೆ ಚಿರಂಜೀವಿಯಾಗನು
ಅಷ್ಟಾದಶಪುರಾಣವ ಸಾಧಿಸಿದಲ್ಲಿ ವಾಕ್‌ಶುದ್ಧಿಯಲ್ಲದೆ
ಕಪಿಲ ಸಿದ್ಧಮಲ್ಲಿಕಾರ್ಜುನ ಮಹಾದೇವಾ,
ದೇಹಸ್ವಭಾವ ಶುದ್ಧಿಯಾಗದು ನೋಡಾ

ಸಿದ್ಧರಾಮೇಶ್ವರರ ಈ ವಚನ ಶಾಸ್ತ್ರ-ಸಿದ್ಧಾಂತಗಳ ಪಾಂಡಿತ್ಯದ ಮಿತಿಯೆಷ್ಟು ಎನ್ನುವುದನ್ನು ಬಹಳ ಸರಳವಾಗಿ ನೇರವಾಗಿ ನಿರೂಪಿಸುತ್ತದೆ. ಮನಸ್ಸು ಶುದ್ಧಿಯಾಗುವುದಾಗಲೀ, ಪರಮ ಜ್ಞಾನ ಲಭಿಸುವುದಾಗಲೀ ಕೇವಲ ವ್ಯಾಕರಣಶುದ್ಧ ಭಾಷೆಯ ಮೇಲೆ ಪ್ರಭುತ್ವವನ್ನು ಸಾಧಿಸುವುದರಿಂದ ಸಾಧ್ಯವಿಲ್ಲ. ಛಂದಸ್ಸಿನಲ್ಲಿ ಪ್ರಕಾಂಡ ಪಾಂಡಿತ್ಯವನ್ನು ದಕ್ಕಿಸಿಕೊಳ್ಳುವುದರಿಂದ ವ್ಯಾಸರಂತೆ ಶ್ರೇಷ್ಠವಾದ ಮಹಾಕಾವ್ಯವನ್ನು ರಚಿಸಿ ಚಿರಂಜೀವಿಯಾಗಲು ಸಾಧ್ಯವಿಲ್ಲ. ಹಾಗೆಯೇ ಹದಿನೆಂಟು ಪುರಾಣಗಳ ನಿರಂತರ



ಪಠಣದಿಂದ ವಾಕ್‌ಶುದ್ಧಿ ಸಾಧಿತವಾಗುತ್ತದೆಯೇ ಹೊರತು ದೇಹದ ಸಹಜಸ್ವಭಾವ ಶುದ್ಧಿಯಾಗುವುದಿಲ್ಲ.

ಕಾವ್ಯಾಧ್ಯಯನ, ಶಾಸ್ತ್ರಪಾಂಡಿತ್ಯ ಇತ್ಯಾದಿ ಎಲ್ಲವುಗಳೊಡನೆ ನಡೆಸುವ ಅನುಸಂಧಾನ, ರಸಾಸ್ವಾದನೆಯ ಜೊತೆಗೆ ಜೀವಭಾವವನ್ನು ಕಳೆದುಕೊಂಡು, ದೇವಭಾವವನ್ನು ಉದ್ದೀಪಿಸಿಕೊಳ್ಳುವುದಕ್ಕಾಗಿ ಎನ್ನುವುದು ಒಪ್ಪಿತ ಸತ್ಯ. ಇಂತಹ ಸಂಕಲ್ಪವೇ ಇರದ ಕೇವಲ ಬಾಹ್ಯವಾದ, ಬುದ್ಧಿಗತ ಪ್ರಕ್ರಿಯೆಗಳು 'ಕೊಟ್ಟಣ ಕುಟ್ಟುವ ತೌಡು ಕಾಣಿಭೋ' ಎನ್ನುತ್ತಾರೆ ಶರಣರು. ಮನುಷ್ಯಸ್ವಭಾವ ಪರಿಶುದ್ಧವಾಗಿ ಬೆಳಗಬೇಕಾದರೆ, ಅರಿತ ಜ್ಞಾನ ಆಚರಣೆಯಲ್ಲಿ ಅನುರಣಿತವಾಗಬೇಕು. ಆಚಾರದಲ್ಲಿ ಮೂರ್ತರೂಪ ಕಂಡುಕೊಳ್ಳದ ಯಾವುದೇ 'ಜ್ಞಾನ', ಅದು ಜ್ಞಾನವಲ್ಲ. ಅರಿತೆನೆಂಬ ಅರೆಮರುಳುತನ. ಈ ಅರೆಮರುಳುತನ ಆತ್ಮನಾಶಕ ಸ್ಥಿತಿಯ ಮೊದಲ ಮೆಟ್ಟಿಲು. ಅಂಗಪ್ರಜ್ಞೆಯ ಜ್ಞಾನ, ಲಿಂಗಪ್ರಜ್ಞೆಗೆ ವಿಸ್ತರಿಸಬೇಕು. ಈ ಲಿಂಗಪ್ರಜ್ಞೆ ಎನ್ನುವುದು ಅಣು ಮತ್ತು ಮಹತ್ತನ್ನು ಏಕಕಾಲದಲ್ಲಿ ಆವಾಹಿಸಿಕೊಳ್ಳುವಂತಹ ಧೀಶಕ್ತಿ. ಅಂತಹ ಶಕ್ತಿ 'ನನೆಯೊಳಗಿನ ಪರಿಮಳದಂತೆ' ಸಹಜವಾಗಿ ವಿಕಾಸಗೊಂಡು ತಾನೂ ಘಮಘಮಿಸುತ್ತಾ, ತನ್ನ ಪರಿಸರವನ್ನೂ ಪರಿಮಳಯುಕ್ತವಾಗಿ ಮಾಡುವಂತಹದು. ನಮ್ಮ ಎಲ್ಲ ಶರಣರ ಬದುಕೂ ಹೀಗೆ ಪರಿಮಳಿಸಿದ ಕಾರಣಕ್ಕಾಗಿ ಎಂಟು ನೂರು ವರ್ಷಗಳು ಸಂದುಹೋದರೂ ಹಾಗೆಯೇ ಎಲ್ಲರ ಒಳಹೊರಗನ್ನು ಇಂದಿಗೂ ಬೆಳಗುತ್ತಿದೆ. ಇಂತಹ ಘನಶರಣರ ಆಡುಂಬೊಲವಾದ ಈ ನೆಲದ ಜನತೆ ಜ್ಞಾನಪೂರ್ಣವಾದ ಆಚಾರಗಳನ್ನು ಪೋಷಿಸಿಕೊಂಡು ಹೋಗಬೇಕು. ಹಾಗೆಯೇ ಅಜ್ಞಾನದಿಂದ ಸ್ಫುರಿಸುವ ಜಡಕಂದಾಚಾರಗಳನ್ನು, ಮೂಢನಂಬಿಕೆಗಳನ್ನು ತಿರಸ್ಕರಿಸುವುದರ ಮೂಲಕ ನಾಳಿನ ಜನತೆಗೆ ವಿಚಾರಪಥಗಳನ್ನು ನಿರ್ಮಾಣ ಮಾಡಬೇಕು.

ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಕಿರಿಯರು ನಡೆಯಬೇಕು ಎಂದು ಬಯಸುವ ಪ್ರತಿಯೊಬ್ಬರೂ, ಹಿರಿದಾದ ಮಾರ್ಗ ಯಾವುದು ಎನ್ನುವುದನ್ನು ಮೊದಲು ರೂಪಿಸಬೇಕು. ಅದು ರಜೋಗುಣದ ಮಾರ್ಗವಾಗಿರದೆ, ಶರಣ ಸಿದ್ಧರಾಮೇಶ್ವರರ ವಚನದ ಸೂಚನೆಯಂತೆ ಯಾವತ್ತೂ ರಾಜಮಾರ್ಗವಾಗಿರಬೇಕು.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸ್ಥಾನಾಚಾರ್ಯ ಪರಂಪರೆ ಮತ್ತು ಶೈವ ಮೀಮಾಂಸೆಯ ನೆಲೆಗಳು

ಡಾ. ಎಸ್.ಎಂ. ಗಿರಿಜಾಪತಿ

**ನಾ**ವಿರುವ ಈಗಿನ ಭಾರತದಲ್ಲಿ ಆಚರಣೆಯಲ್ಲಿರುವ ಮತ-ಧರ್ಮಗಳನ್ನು ಪ್ರಮುಖವಾಗಿ ಎರಡು ನೆಲೆಗಳಲ್ಲಿ ಗುರತಿಸಬಹುದಾಗಿದೆ. ಮೊದಲನೆಯದಾಗಿ ಭಾರತದಲ್ಲಿಯೇ ಬೆಳಕಿಗೆ ಬಂದು ಭಾರತದಾಚೆಯೂ ಅಸ್ತಿತ್ವ ಕಂಡುಕೊಂಡಿರುವಂತಹ ಧರ್ಮಗಳು. ಇದರಲ್ಲಿ ವಿಶೇಷವಾಗಿ ಬೌದ್ಧ ಧರ್ಮವನ್ನು ಗುರುತಿಸಬಹುದಾಗಿದೆ. ಇನ್ನುಳಿದಂತೆ ವೈದಿಕ, ವೈದಿಕ ವಿರೋಧಿ ತಂತ್ರಗಳನ್ನೊಳಗೊಂಡ ಶೈವ ಯಾ ವೀರಶೈವ, ವೈಷ್ಣವ, ಜೈನ, ಸಿಖ್ ಧರ್ಮಗಳು ಇಲ್ಲಿಯೇ ಉಗಮಗೊಂಡಿರುವುದರ ವ್ಯಾಪ್ತಿಯಲ್ಲಿ ಬರುತ್ತವೆ.

ಭಾರತದಾಚೆ ಬೆಳಕನ್ನು ಕಂಡು ಭಾರತದಲ್ಲಿಯೂ ಪ್ರಚಲಿತವಾಗಿರುವ ಮತ-ಧರ್ಮಗಳು; ಅದರಲ್ಲಿ ಸಂಖ್ಯಾ ಬಾಹುಳ್ಯದಿಂದ ಹೇಳುವುದಾದಲ್ಲಿ ಕ್ರೈಸ್ತ, ಇಸ್ಲಾಂಗಳು. ಇವುಗಳ ಪಾರಂಪರಿಕ ಇತಿಹಾಸ ಕುರಿತ ಅಧ್ಯಯನಕ್ಕೆ ಆಯಾ ಮತಧರ್ಮಗಳು ನೆಲೆಕಂಡ ಪ್ರದೇಶ ಅಲ್ಲಿನ ಭಾಷಾಸಂಪತ್ತಿನಲ್ಲಿ ರಚನೆಗೊಂಡಿರುವ ಸಾಹಿತ್ಯ ಕೃತಿಗಳನ್ನು ಮುಖ್ಯವಾಗಿ ಅನುಲಕ್ಷಿಸಬೇಕಾಗುತ್ತದೆ. ಭಾರತದ ಸಂದರ್ಭದಲ್ಲಿ ಈ ಲಕ್ಷ್ಯವನ್ನು ಏಕರೂಪವಾಗಿ ಗ್ರಹಿಸುವಲ್ಲಿ ಅನೇಕ ತೊಡಕುಗಳಿವೆ. ಕಾರಣ ನಮ್ಮಲ್ಲಿ ಇತಿಹಾಸ ರಚನೆ ಕುರಿತಂತೆ ಬೆಳೆದುಬಂದಿರುವ ಅವಜ್ಞೆ ಹಾಗೂ ಅನಾಸಕ್ತ ಧೋರಣೆಗಳು. ಪಾಶ್ಚಾತ್ಯ ಮಾದರಿಯ ಇತಿಹಾಸದ ಪರಿಕಲ್ಪನೆಗೆ ನಮ್ಮಲ್ಲಿ ಅಷ್ಟಾಗಿ ಜಾಗವಿಲ್ಲ? ಪುರಾಣ, ಐತಿಹ್ಯಗಳಲ್ಲಿ ಕಳೆದುಹೋಗಿರುವ ಯಾ ಉಳಿದುಬಂದಿರುವ ಭಾರತದ ಧಾರ್ಮಿಕವೂ ಸೇರಿದಂತೆ ಇಲ್ಲಿನ ರಾಜಮನೆತನಗಳ ಚರಿತ್ರೆ ಮತ್ತು ಐತಿಹಾಸಿಕ ಸಂಗತಿಗಳನ್ನು ಇದಮಿತ್ಥಂ ಎಂದು ಹೇಳುವುದು ಸಂಶೋಧಕರಿಗೂ, ಇತಿಹಾಸ ತಜ್ಞರಿಗೂ, ವಿದ್ವಾಂಸರಿಗೂ ಅತ್ಯಂತ ಕಷ್ಟಕರವಾದ ಕೆಲಸ.

ಭಾರತದಲ್ಲಿನ ಮೂಲ ಧರ್ಮ ಯಾವುದು? ಎಂಬುದರ ಪ್ರಶ್ನೆಯ ಜೊತೆ ಜೊತೆಗೆ ಭಾರತದ ಮೂಲ ನಿವಾಸಿಗಳು ಯಾರು? ಅವರು ಅನುಸರಿಸುತ್ತಿದ್ದ



ಧರ್ಮಾಚರಣೆಗಳು ಯಾವುವು? ವಿಚಾರಗಳು ಏನಾಗಿದ್ದವು? ಇತ್ಯಾದಿ ಪ್ರಶ್ನಾಸರಣಿಗಳು ನಮಗೆ ಇದಿರಾಗುತ್ತವೆ. ಆರ್ಯರು ಮಧ್ಯ ಏಷಿಯಾದಿಂದ ಬಂದವರೆಂದು, ದ್ರಾವಿಡರು ಭಾರತದ ಮೂಲ ನಿವಾಸಿಗಳೆಂದು, ಆರ್ಯರ ಆಕ್ರಮಣಗಳಿಂದ ದಕ್ಷಿಣದ ಕಡೆಗೆ ಸೇರಿದ ದ್ರಾವಿಡರು ಮೂಲತಃ ಶಿವೋಪಾಸಕರಾಗಿದ್ದರೆಂಬ ಕುರುಹನ್ನು ಇತಿಹಾಸ ತನ್ನೊಡಲಲ್ಲಿಟ್ಟುಕೊಂಡಿರುವುದನ್ನು ನಾವು ಉಪೇಕ್ಷಿಸಿ ಮುನ್ನಡೆಯಲು ಬರುವುದಿಲ್ಲ. ಹಾಗಾಗಿ ಭಾರತೀಯ ಧಾರ್ಮಿಕ ಚರಿತ್ರೆ ಮತ್ತು ಧರ್ಮಾಚರಣೆ ಕುರಿತ ಆರಂಭದ ಚರಿತ್ರೆ ಎಂದರೆ ಅದು ಶೈವ ಚಿಂತನೆ ಹಾಗೂ ಶಿವಾರಾಧನೆಯ ಚರಿತ್ರೆ ಆಗಿದೆ. ಇಲ್ಲಿ ಪ್ರಚುರತೆ ಕಂಡ ಮೊದಲ ಧಾರ್ಮಿಕ ಸಿದ್ಧಾಂತ ಅದು ಶಿವ ಸಿದ್ಧಾಂತ ಅಥವಾ ಶಿವನನ್ನು ಕೇಂದ್ರೀಕರಿಸಿಕೊಂಡ ಶೈವ ಸಿದ್ಧಾಂತವಾಗಿದೆ.

ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ಮತ ಧರ್ಮಗಳ ಉಗಮದ ಚರಿತೆ ಎನ್ನುವುದು ಪೌರಾಣಿಕ ಸಂವಿಧಾನದ ಪರಿಕಲ್ಪನೆಯಲ್ಲಿ ರೂಪತಳೆದಿರುತ್ತವೆ. ಇವರು ಸ್ವಯಂ ದೈವ ಜೊತೆಗೆ ಇವರಿದ್ದ ಕಾಲವನ್ನು ವಿಶ್ವ ಸೃಷ್ಟಿಯ ಕಾಲದೊಂದಿಗೆ ಅವುಗಳಲ್ಲಿನ ತಾತ್ವಿಕ ಆಯಾಮಗಳೊಂದಿಗೆ ಸಂಬಂಧವನ್ನು ಸಂಸ್ಥಾಪಿಸಿಕೊಂಡಿವೆ. ಭಾರತದಲ್ಲಿ ಈ ಸಂಬಂಧವು ಧರ್ಮದ ಮೂಲ ಸಂವಿಧಾನವೆಂದು ನಿರೂಪಿತಗೊಂಡಿರುತ್ತದೆ. ಹಾಗಾಗಿ ಇವರ ಬೋಧನೆಗಳನ್ನೊಳಗೊಂಡ ಕೃತಿಗಳು ಸಹ ಅಪೌರುಷೇಯವಾದವು (ಮನುಷ್ಯಮಾತ್ರದಲ್ಲದವರು ಸ್ವಯಂ ದೇವರಿಂದ ರೂಪಗೊಂಡಿರುವಂಥವು) ಈ ಕೃತಿಗಳು ಆಕೃತಿಗೊಂಡ ಭಾಷೆ ಅದು ದೇವಭಾಷೆ ಎನಿಸಿದ ಸಂಸ್ಕೃತ. ಹಾಗಾಗಿ ಇಲ್ಲಿನ ವೇದಗಳು, ಉಪನಿಷತ್ತುಗಳು, ಶ್ರುತಿಗಳು, ಆಗಮಗಳು, ವಿವಿಧ ಭಾಷ್ಯಗಳು ಮೊದಲಾದ ಧರ್ಮ ಮತ್ತು ಆಧ್ಯಾತ್ಮಸಂಬಂಧೀ ಜ್ಞಾನವೆಲ್ಲ ನಮ್ಮಲ್ಲಿ ಸಂಸ್ಕೃತ ವಾಚಿಕೆಯಲ್ಲಿ ಮೊದಲಿಗೆ ರೂಪ ತಳೆದಿವೆ. ಆ ನಂತರದಲ್ಲಿ ಇಲ್ಲಿನ ಪ್ರಾದೇಶಿಕ ಭಾಷೆಗಳಲ್ಲಿನ ಚಿಂತಕರಿಂದ, ದಾರ್ಶನಿಕರಿಂದ, ಜಿಜ್ಞಾಸುಗಳಿಂದ, ಕ್ರಾಂತಿಕಾರಿಗಳಿಂದ, ವಿದ್ವಾಂಸರಿಂದ ಆಯಾ ದೇಸೀ ಭಾಷೆಗಳಿಗೆ ಅನುವಾದಗೊಂಡಿವೆ. ಅಥವಾ ವಿಭಿನ್ನ ತಿರುವು ಪಡೆದು ಮುನ್ನಡೆ ಕಂಡಿವೆ. ಜೊತೆಗೆ ಅಲ್ಲಿನ ಪ್ರೇರಣೆಗಳಿಂದ ಈ ಬಗೆಯ ಸಾಹಿತ್ಯ ಸೃಷ್ಟಿ ಸಹ ನಡೆದಿರುವುದನ್ನು ನಾವು ಕಾಣಬಹುದಾಗಿದೆ. (ಇದಕ್ಕೆ ಪ್ರಮುಖ ಉದಾಹರಣೆಯೆಂದರೆ ಶೈವ ಕುರಿತ ಸಂಸ್ಕೃತ ಸಾಹಿತ್ಯ ಆ ಶೈವದ ದೇಸೀ ರೂಪದ ಧ್ವನಿಯಾಗಿ ನಡೆದ ವಚನಕಾರರ ಆಂದೋಳನ ಮತ್ತು ಆ ಚಳುವಳಿಯ ಉಪೋತ್ಪನ್ನವೆನಿಸುವ ವಚನಗಳು).

ಈ ಎಲ್ಲ ಹಿನ್ನೆಲೆಗಳಲ್ಲಿ ನಮಗೆ ವೈದಿಕ ವಿರೋಧಿ ಅಥವಾ ಅವೈದಿಕ ಎನ್ನಲಾಗುವ ಶೈವ ಯಾ ವೀರಶೈವ ಮೀಮಾಂಸೆಗಳು ನಮಗೆ ಮುಖ್ಯವಾಗಿ ಮತ್ತು ಪ್ರಧಾನವಾಗಿ

ಕಾಣಸಿಗುವುದು ಸಂಸ್ಕೃತ ಭಾಷಾವಲಯದಲ್ಲಿ, ಹಾಗೆಯೇ ಜೈನವು ಪ್ರಾಕೃತ, ಬೌದ್ಧವು ಪಾಳೀ, ಏಸುವಿನ ವಿಚಾರಗಳು ಹೀಬ್ರೂ, ಸಿಖ್‌ರ ಚಿಂತನೆಗಳು ಪಂಜಾಬೀ ಮತ್ತು ಪೈಗಂಬರರ ವಿಚಾರಗಳು ಅರಬ್ಬೀಯಲ್ಲಿ ದೊರೆಯುತ್ತವೆ ಎನ್ನುವುದು ನಮ್ಮ ಲಕ್ಷ್ಯದಲ್ಲಿರಬೇಕಾದ ಬಹು ಮುಖ್ಯ ಸಂಗತಿಯಾಗಿದೆ. ಇಂದು ನಮ್ಮಲ್ಲಿನ ಸಂವಿಧಾನಬದ್ಧ ಭಾಷೆಗಳಲ್ಲಿ ಮತ ಧರ್ಮ ಕುರಿತ ಕೃತಿಗಳು ರಚನೆಗೊಂಡಿದ್ದರು ಮೂಲ ಪಠ್ಯಗಳೆಂಬ ಗೌರವ ಸಂಸ್ಕೃತ, ಪ್ರಾಕೃತ ಹಾಗೂ ಪಾಳೀಗಳಿಗೆ ಮಾತ್ರ ಸಲ್ಲುತ್ತದೆ. ಹಾಗಾಗಿ ಪ್ರಾದೇಶಿಕ ಭಾಷೆಗಳಲ್ಲಿನ ಅಧ್ಯಯನ ಅದು ಅಪೂರ್ಣವೆನಿಸುತ್ತದೆ. ಇದಕ್ಕಿಂತಲೂ ಅಪಾಯಕಾರಿ ಎಂದರೆ ಪ್ರಾದೇಶಿಕ ಭಾಷೆಗಳಲ್ಲಿನ ರಚನೆಗಳನ್ನು ಪ್ರಧಾನವೆಂದು ಇಲ್ಲಿನ ಪ್ರಮುಖ ನೇತಾರರನ್ನು ಆ ಮತ - ಧರ್ಮದ ಸಂಸ್ಥಾಪಕರೆಂದು ಸಮರ್ಥಿಸುವ ಚಿಂತನೆಗಳಿಗೆ ವಿನಾಕಾರಣ ಆದ್ಯತೆ ನೀಡುವುದು. (ವೀರಶೈವದ ಸಂದರ್ಭದಲ್ಲಿ ಈ ಮಾತು ಬಹು ಮುಖ್ಯವಾಗಿ ಅನ್ವಯವಾಗುತ್ತದೆ)

ಈ ಕುರಿತು ಇತ್ತೀಚೆಗೆ ನಮ್ಮನ್ನಗಲಿದ ಪ್ರಸಿದ್ಧ ಸಂಶೋಧಕ ಮತ್ತು ವಿಮರ್ಶಕ ಡಿ.ಆರ್. ನಾಗರಾಜರ ತಮ್ಮ ಅಲ್ಲಮ ಮತ್ತು ಶೈವ ಮೀಮಾಂಸೆ ಕೃತಿಯಲ್ಲಿ ಉಲ್ಲೇಖಿಸಿರುವ ಮಾತುಗಳು ಗಮನಾರ್ಹ. ನಾನು ವೀರಶೈವ ದರ್ಶನದ ಚಾರಿತ್ರಿಕ ಪ್ರಶ್ನೆಯನ್ನು ತಾತ್ವಿಕ ಆಕಾಶದ (Theoritical space) ಪ್ರಶ್ನೆಯನ್ನಾಗಿ ಪರಿವರ್ತಿಸುತ್ತೇನೆ. ಅಂದರೆ ತತ್ವಶಃ ವೀರಶೈವ ದಾರ್ಶನಿಕತೆ ಹನ್ನೆರಡನೆಯ ಶತಮಾನದ ಹಿಂದಿನ ಸಂಸ್ಕೃತ ದಾರ್ಶನಿಕ ಗರ್ಭದಿಂದಲೇ ಮೂಡಿದೆ ಎಂಬ ವಾದವನ್ನು ಚಾರಿತ್ರಿಕ ತರ್ಕದ ಆಧಾರದಿಂದ ತಳ್ಳಿಹಾಕುತ್ತಿಲ್ಲ. ವೀರಶೈವದ ಚಾರಿತ್ರಿಕ ಪ್ರಶ್ನೆಗಳಿಗೆ ಉತ್ತರ ಪಡೆಯಲು ಸಂಸ್ಕೃತದೊಳಗೆ ಪ್ರವೇಶ ಪಡೆಯದೆ ಪಡೆಯಲಾಗದು. ಈ ಶೈವ ಧರ್ಮದ ಸಂಸ್ಥಾಪಕರು ಯಾರು? ಅದನ್ನು ದೃಢೀಕರಿಸಲು ಇರುವ ಆಧಾರಗಳು ಯಾವುವು? ಇತ್ಯಾದಿ ಪ್ರಶ್ನೆಗಳಿಗೆ ಈ ಮೊದಲು ಉಲ್ಲೇಖಿಸಿದಂತೆ ವಿಶ್ವ ಸೃಷ್ಟಿ ಸಂಬಂಧಿ ತತ್ವಗಳೊಂದಿಗೆ ಬೆಸೆದುಕೊಂಡಿರುವ ವಿವರವಾದ ಭಿತ್ತಿಗಳಿವೆ. ವಿಸ್ತೃತ ವರ್ಣನೆಗಳಿವೆ. ಇದರ ಬಿತ್ತರ, ವ್ಯಾಪ್ತಿ, ವ್ಯಾಪಕತೆ ಇತ್ಯಾದಿಗಳೇನೇ ಇರಲಿ ಇತರ ಮತ ಧರ್ಮಗಳು ತಮ್ಮನ್ನು ಅಪೌರುಷೇಯತನದ ಪಾತಳಿಯಲ್ಲಿ ಸನಾತನೆಯನ್ನು ಸ್ಥಿರೀಕರಿಸಿ ತೋರುವ ಹವಣಿಕೆಗಳಿಂದ ಇಲ್ಲಿನ ಶೈವವೂ ಹೊರತಾಗಿಲ್ಲವೆಂಬುದಂತೂ ಸತ್ಯ. ಈ ಸತ್ಯವನ್ನು ಸಾಕ್ಷೀಕರಿಸುವ ಆಕರಗಳಿಂದಾಗಿ ಇಲ್ಲಿ ಪರಂಪರೆಯ ಪ್ರಾಚೀನತೆಯನ್ನು ಅಲ್ಲಗಳೆಯುವ ಅವಕಾಶಗಳಿಗೆ ಆಸ್ಪದವಿಲ್ಲದಂತಾಗಿದೆ ಎನ್ನುವ ಮಾತಂತೂ ನಿಜ.

ಈ ಸಂದರ್ಭದಲ್ಲಿ ನಾವು ಇನ್ನೊಂದು ಮಾತನ್ನು ನೆನಪಿನಲ್ಲಿಡಬೇಕಾಗುತ್ತದೆ. ಪ್ರತಿಯೊಂದು ಧರ್ಮವೂ ತನ್ನದೇ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿಕೊಂಡಿರುತ್ತದೆ.



ಈ ಪರಿಭಾಷೆಗಳ ಮೂಲಕ ಆಯಾ ಧರ್ಮವು ತನ್ನ ಸಂವಿಧಾನಗಳನ್ನು, ಸಂಹಿತೆಗಳನ್ನು ಸಮರ್ಥವಾಗಿ ಪ್ರಚುರಪಡಿಸುತ್ತಿರುತ್ತದೆ. ಹೀಗೆ ತನ್ನದೇ ಆದ ಪರಿಭಾಷಾಕೋಶದ ಮೂಲಕ ಮಾತಿಗಿಳಿಯುವುದೇ ಧರ್ಮವೊಂದರ ಹಿರಿಮೆಯೂ, ಶ್ರೇಷ್ಠತೆಯೂ ಆಗಿರುತ್ತದೆ. ಹಾಗಾಗಿ ಇಲ್ಲಿನ ಪರಿಭಾಷೆಗಳನ್ನು ಅರ್ಥೀಕರಣಕ್ಕೊಳಪಡಿಸುವಲ್ಲಿ ಪ್ರೌಢ ಪ್ರಜ್ಞೆಯನ್ನು ಬಳಸಿಕೊಳ್ಳಬೇಕಾಗುತ್ತದೆ. ಇದನ್ನು ಸರಳೀಕರಿಸಿ ಹೇಳುವ ಸಂದರ್ಭಗಳಿಗೂ ಈ ಮಾತು ಅನ್ವಯವಾಗದೇ ಇರದು. ಇಲ್ಲವಾದಲ್ಲಿ ಅರ್ಥಸಂಕೋಚೀಕರಣದಿಂದಾಗಿ ದ್ವಂದ್ವಗಳು ತಲೆದೋರಿ ಕೊನೆಗೆ ಅದು ಗೋಜಲುಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ. (ಸಂಸ್ಕೃತದ ಶೂನ್ಯ ಪದಪ್ರಯೋಗವನ್ನು ಕನ್ನಡದಲ್ಲಿ ವಚನಕಾರರು ಬಯಲು ಎಂದು ಕರೆದುಕೊಂಡಿದ್ದರೂ ಇವೆರಡರಲ್ಲಿನ ಅರ್ಥಸಾಮ್ಯತೆಗಳನ್ನು ಇದಮಿತ್ಥಂ ಎನ್ನಲಾಗದು ಎಂಬುದನ್ನು ನಿದರ್ಶನವಾಗಿ ತೆಗೆದುಕೊಳ್ಳಬಹುದಾಗಿದೆ)

ಈ ಶೈವ ಯಾ ವೀರಶೈವ ಸಂಸ್ಥಾಪಕರನ್ನು ಆಚಾರ್ಯರು/ಆರಾಧ್ಯರು ಎಂದು ಗುರುತಿಸಲಾಗುತ್ತಿದೆ. ಕಲಿಯುಗದ ಆರಂಭದಲ್ಲಿ ಶ್ರೀ ರೇಣುಕಾಚಾರ್ಯರು, ದಾರುಕಾಚಾರ್ಯರು, ಮರುಳಾರಾಧ್ಯರು, ಪಂಡಿತಾರಾಧ್ಯರು ಹಾಗೂ ವಿಶ್ವಾರಾಧ್ಯರು ಎಂದು ಇವರುಗಳು ಕ್ರಮವಾಗಿ ಕೊಲ್ಲಿಪಾಕಿ, ಕೇದಾರ, ಉಜ್ಜಯನಿ, ಶ್ರೀಶೈಲ ಹಾಗೂ ಕಾಶಿಯಲ್ಲಿ ಲಿಂಗೋದ್ಭವರಾಗಿ ಪ್ರಕಟಗೊಂಡರು ಹೀಗೆ ನಿರ್ದಿಷ್ಟ ಸ್ಥಾನದಲ್ಲಿ ಪ್ರಕಟಗೊಂಡಿದ್ದರಿಂದ ಇವರಿಗೆ ಸ್ಥಾನಾಚಾರ್ಯರೆಂದು ಕರೆಯಲಾಗುತ್ತಿದೆ. ಈ ಬಗ್ಗೆ ಡಾ. ಎಂ.ಎಂ. ಕಲಬುರ್ಗಿಯವರು ಹಂಪೆಯ ಕವಿ ಚಾಮರಸನ ಕುರಿತ ಕೃತಿ 'ಚಾಮರಸ ವಿಚಾರ ಸಂಕಿರಣ'ದಲ್ಲಿನ ಲೇಖನದಲ್ಲಿ ಹಂಪೆಯಲ್ಲಿ ವಿರಕ್ತರಿಂದ ಆರಂಭವಾದ ವಚನ ಸಾಹಿತ್ಯ ಸಂಗ್ರಹ, ಸಂಪಾದನೆ, ಅವರನ್ನು ಕುರಿತ ಸಾಹಿತ್ಯ ಸೃಷ್ಟಿ ಹಾಗೂ ವೀರಶೈವ ಧರ್ಮ ಪ್ರಚಾರ ಕಾರ್ಯ ನಡೆಯುತ್ತಿದ್ದ ಬಗೆಯನ್ನು ಪ್ರಸ್ತಾಪಿಸುತ್ತಾ ಈ ವಿರಕ್ತರನ್ನು ತಪೋಧನರೆಂದು ಗುರುತಿಸಿಕೊಂಡು ವಚನಪೂರ್ವದ ಶೈವ ಪರಂಪರೆಯನ್ನು ಸ್ಥಾನಾಚಾರ್ಯರೆಂದು ಈ ಪರಂಪರೆಯಿದ್ದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಈ ಸ್ಥಾನಾಚಾರ್ಯರಿಂದ ಸಂಸ್ಥಾಪನೆಗೊಂಡ ಪೀಠಗಳಿಗೆ ದೇಶದಾದ್ಯಂತ ಶಾಖಾಮಠಗಳಿವೆ. ಇಲ್ಲಿನ ಶಾಖಾಮಠಗಳಿಗೆ ನಿಯುಕ್ತಗೊಂಡ ಶಿವಾಚಾರ್ಯರನ್ನು ಸ್ಥಾನಪತಿಗಳೆಂದು ಕರೆಯುತ್ತಿದ್ದ ಬಗ್ಗೆ ವಿವರಗಳು ಲಭ್ಯವಿವೆ. ಇದಕ್ಕೆ ನಿದರ್ಶನವಾಗಿ ಶ್ರೀ ಬಸವಣ್ಣನವರ ಬ್ರಾಹ್ಮಣರಲ್ಲಿನ ಉಪನಯನ ಪದ್ಧತಿಯನ್ನು ನಿರಾಕರಿಸಿ ತಮ್ಮ ಕೊರಳಲ್ಲಿದ್ದ ಜನಿವಾರವನ್ನು ಕಿತ್ತಿ ಬಿಸುಟು ತನ್ನ ಅಕ್ಕ ಅಕ್ಕನಾಗಮ್ಮನೊಂದಿಗೆ ಕೂಡಲ ಸಂಗಮಕ್ಕೆ ಬಂದಾಗ, ಅಲ್ಲಿದ್ದ ಸ್ಥಾನಪತಿ ಶ್ರೀ ಜಾತವೇದ ಮುನಿಗಳು ಅಕ್ಕ ಮತ್ತು

ತಮ್ಮ ಇಬ್ಬರಿಗೂ ಲಿಂಗದೀಕ್ಷೆ ನೀಡಿದ ಸಂದರ್ಭವನ್ನು ಇಲ್ಲಿ ಕಾಣಬಹುದಾಗಿದೆ. ಇಂದಿಗೂ ನಮ್ಮಲ್ಲಿ ಪಂಚಾಚಾರ್ಯರ ಮಹಾಮಠಗಳನ್ನು ಶ್ರೀಪೀಠಗಳೆಂದು ಕರೆಯುವಂತೆ ಈ ಪೀಠಗಳಿಗಿರುವ ಶಾಖಾಮಠಗಳಿಗೆ ನಿಯುಕ್ತಗೊಳ್ಳುವವರನ್ನು ಶಿವಾಚಾರ್ಯರೆಂದು ಇವರಿಗೆ ಸಹಾಯಕರಾಗಿ ಧರ್ಮಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮಠಾಧಿಪತಿ (ಹಿರೇಮಠದವರು) ಹಾಗೂ ಇವರ ಸಹಾಯಕರಾಗಿ ಮಠಪತಿಗಳು ನಮ್ಮ ಗ್ರಾಮಗಳಲ್ಲಿ ಇಂದಿಗೂ ಇರುವುದನ್ನು ಸಹ ಇಲ್ಲಿ ಸ್ಮರಿಸಬಹುದಾಗಿದೆ.

ಈ ಸ್ಥಾನಾಚಾರ್ಯರ ಚಾರಿತ್ರಿಕ ವಿವರಗಳನ್ನು ಕುರಿತಂತೆ ನಮಗೆ ಅನೇಕ ಐತಿಹಾಸಿಕ ಆಧಾರಗಳು ದೊರೆಯುತ್ತವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಹೀಗೆ ಗುರುತಿಸಬಹುದಾಗಿದೆ.

**ಸಾಹಿತ್ತಿಕ ಆಧಾರಗಳು**

(ಅ) ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡಿರುವ ಕೃತಿಗಳು - ಇವುಗಳನ್ನು ಪ್ರಧಾನ ಆಧಾರಗಳೆಂದು ಹಾಗೂ ಮಾರ್ಗ ಪರಂಪರೆಯ ರಚನೆಗಳೆಂದು ಗುರುತಿಸಬಹುದಾಗಿದೆ.

(ಆ) ಪ್ರಾದೇಶಿಕ ಭಾಷೆಗಳಲ್ಲಿ ರೂಪಗೊಂಡಿರುವ ಕೃತಿಗಳು-ಇವುಗಳನ್ನು ಅನುಷಂಗಿಕ ಆಧಾರಗಳೆಂದು ದೇಸೀ ರಚನೆಗಳೆಂದು ಕರೆದುಕೊಳ್ಳ ಬಹುದಾಗಿದೆ.

**ಸಾಹಿತ್ಯೇತರ ಆಧಾರಗಳು**

(ಅ) ಶಾಸನಗಳು, ಶಿಲ್ಪ ಭಿತ್ತಿಗಳು

(ಆ) ಆಚಾರ್ಯರ ಶ್ರೀ ಪೀಠಗಳು ಮತ್ತು ಶಾಖಾಮಠಗಳು

ಇಲ್ಲಿನ ಸಾಹಿತ್ಯ ಆಧಾರಗಳನ್ನು ಅವಲೋಕಿಸುವಲ್ಲಿ ಪ್ರಧಾನವಾಗಿ ಒಂದು ವಿಷಯ ನಮ್ಮ ಗಮನದಲ್ಲಿರಬೇಕಾಗುತ್ತದೆ. ಈ ಸಂಸ್ಕೃತ ಕೃತಿಗಳು ಶೈವ ಧರ್ಮ ಸಂಸ್ಥಾಪಕರಾದ ಆಚಾರ್ಯರಿಂದ ಕೃತಗೊಂಡಿವೆಯೇ? ಅಥವಾ ಆ ಆಚಾರ್ಯರ ಕಾಲಾವಧಿಯಲ್ಲಿಯೇ ರೂಪತಳೆದಿವೆಯೇ? ಈ ಪ್ರಶ್ನೆಗೆ ಉತ್ತರ ಹುಡುಕುವ ಹರಸಾಹಸಕ್ಕಿಂತ ಮುನ್ನ ವಿಶ್ವದಲ್ಲಿನ ಇತರೇ ಧರ್ಮಗಳು ಹೊಂದಿರುವ ಪ್ರಮಾಣ ಗ್ರಂಥಗಳು ಸಹ ಸ್ವಯಂ ಸಂಸ್ಥಾಪಿತರಿಂದಲಾಗಲೀ ಅಥವಾ ಅವರಿದ್ದ ಕಾಲದಲ್ಲಿಯಾಗಲೀ ರೂಪುತಳೆದಿರುವ ನಿದರ್ಶನಗಳಿಲ್ಲ. ಅವುಗಳೇನಿದ್ದರೂ ಅವರ ಕಾಲಾನಂತರ ನೂರಿನ್ನೂರರಿಂದ ಕೆಲ ಶತಮಾನಗಳ ಅವಧಿಯನಂತರದಲ್ಲಿ ಆ ಧರ್ಮ ಮತ್ತು ಮತಗಳ ಅನುಯಾಯಿಗಳಿಂದ ಕೃತಗೊಂಡಿರುವಂಥವುಗಳಾಗಿವೆ ಎಂಬುದು



ಅಕ್ಷರಶಃಸತ್ಯಸಂಗತಿ. ಏಸು ನಿರ್ಗಮನದ ಬಹಳಷ್ಟುಕಾಲದ ನಂತರ ಹೀಬ್ರೂವಿನಲ್ಲಿ ಮೊದಲಿಗೆ ಬೈಬಲ್ ರಚನೆ ಕಂಡಿದೆ. ಪೈಗಂಬರರ ಕುರಾನ್, ಗೌತಮ ಬುದ್ಧ ನಿರ್ವಾಣಹೊಂದಿದ ಐನೂರು ವರ್ಷಗಳ ನಂತರ ತ್ರಿಪಿಟಕಗಳು ರಚನೆಗೊಂಡಿವೆ. ಇವು ಹೀಗೆ ಒಂದು ಕೃತಿಯಲ್ಲಿ ಆಕೃತಿಯಲ್ಲಿ ರಚನೆಗೊಳ್ಳುವ ಪೂರ್ವದಲ್ಲಿ ಈ ಮತ ಧರ್ಮದ ಅನುಯಾಯಿಗಳಲ್ಲಿ, ಬೋಧನೆಗಳಿಂದ ಪ್ರಭಾವಿತರಾದವರಿಂದ ತಲೆಮಾರಿನಿಂದ ತಲೆಮಾರಿಗೆ ಬಂದು ಆ ನಂತರದ ಕಾಲದಲ್ಲಿ ಅವು ಕೃತಿಗಳಾಗಿವೆ. ಅಲ್ಲದೆ ಈ ಸಂದರ್ಭದಲ್ಲಿ ಬೇರೆ ಬೇರೆ ಕೃತಿಗಳಲ್ಲಿ ಈ ಚಿಂತನೆಗಳು ಉಲ್ಲೇಖಿತ ಗೊಂಡಿರುವ ಬಳಸಿಕೊಂಡು ರಚಿಸಿರುವ ಸಂದರ್ಭಗಳೂ ಇಲ್ಲದಿಲ್ಲ. ಹಾಗಾಗಿ ಒಟ್ಟಾರೆ ಧಾರ್ಮಿಕ ಗ್ರಂಥಗಳನ್ನು ನಾವು ಸಂಕಲನ ರೂಪದವು ಎಂದು ಭಾವಿಸಬಹುದಾಗಿದೆ.

ಹೀಗೆ ಸಂಕಲನ ರೂಪದಲ್ಲಿ ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡ ಪ್ರಧಾನ ಆಕರಗ್ರಂಥ ಶಿವಯೋಗಿ ಶಿವಾಚಾರ್ಯರ 'ಸಿದ್ಧಾಂತ ಶಿಖಾಮಣಿ' ಸ್ಥಾನಾಚಾರ್ಯರ ಪ್ರಬೋಧನೆಗಳನ್ನು ಒಳಗೊಂಡಿದೆ. ವೀರಶೈವ ಧರ್ಮ ಆಚಾರ-ವಿಚಾರ ಸಂಹಿತೆಗಳನ್ನೊಳಗೊಂಡ ಈ ಕೃತಿ ಶಿವಾಗಮಗಳಲ್ಲಿನ ವಿಚಾರಗಳ, ಶೈವಪ್ರಭೇದಗಳಾದ ಅನಾದಿ ಶೈವ, ಆದಿ ಶೈವ, ಅನುಶೈವ, ಮಹಾ ಶೈವ, ಯೋಗ ಶೈವ, ಜ್ಞಾನ ಶೈವ, ವೀರಶೈವ ಚಿಂತನೆಗಳ ಸಂಗ್ರಾಹ್ಯ ಇದಾಗಿದೆ. ಇದು ಮಹಾಭಾರತ ಕಾವ್ಯದಲ್ಲಿನ ಶ್ರೀಕೃಷ್ಣ ತನ್ನ ಪ್ರಿಯ ಶಿಷ್ಯ ಅರ್ಜುನನಿಗೆ ಬೋಧಿಸಿದ ಭಗವದ್ಗೀತೆಯ ರಾಚನಿಕ ಮಾದರಿಯಲ್ಲಿ ರೂಪತಳೆದಿದೆ. ಇಲ್ಲಿ ಶ್ರೀ ರೇಣುಕರು ತಮ್ಮ ಶಿಷ್ಯ ಅಗಸ್ತ್ಯ ಮಹರ್ಷಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿದ ವಿವರಗಳಿವೆ.

ಇನ್ನು ಅನುಷಂಗಿಕ ಸಾಹಿತ್ಯ ಆಧಾರಗಳಲ್ಲಿ ತಮಿಳಿನಲ್ಲಿ ಸಿಗುವ ಪೆರಿಯ ಪುರಾಣದಿಂದ ಹಿಡಿದು ಶಿವಭಕ್ತರ ಚರಿತ್ರೆ ಹಾಗೂ ಕಥಾನಕಗಳನ್ನೊಳಗೊಂಡ ರಚನೆಗಳು, ಕನ್ನಡದಲ್ಲಿ ಬಹು ಅಪರೂಪದ ಕಾಣ್ಕೆಯಾಗಿ ಹೊಮ್ಮಿದ ಸೂಳ್ನುಡಿಕಾರರ ಸೂಳ್ನುಡಿಗಳು, ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದ ಶರಣ ಪರಿವಾರದವರ ವಚನಗಳು, ವಚನೋತ್ತರ ಕಾಲದಲ್ಲಿ ರಚನೆಗೊಂಡ ಒಟ್ಟಾರೆ ಶೈವ ಚಿಂತನೆಗಳ ಪಠ್ಯಗಳು ಈ ವ್ಯಾಪ್ತಿಯಲ್ಲಿ ಬರುತ್ತವೆ. ಹಾಗೆಯೇ ತೆಲುಗಿನಲ್ಲಿ ಕಂಡುಬರುವ ರಚನೆಗಳೂ ಇಲ್ಲಿ ಗಮನಾರ್ಹವೆನಿಸಿವೆ.

ಸಾಹಿತ್ಯೇತರ ಆಧಾರಗಳಲ್ಲಿ ಪ್ರಮುಖವಾಗಿ ಶಾಸನಗಳು ಇಂದಿಗೂ ನಮ್ಮ ಕಣ್ಣೆದುರಿಗಿರುವ ಮಠ ಮಾನ್ಯಗಳು, ಇಲ್ಲಿನ ಕುರುಹುಗಳು ಪ್ರಮುಖ ಸಾಕ್ಷ್ಯಾಧಾರಗಳಾಗಿವೆ. ಆಸಕ್ತರು ಈ ಬಗ್ಗೆ ಶ್ರೀಲಂಕವು ಸೇರಿದಂತೆ ಭಾರತದ ಬಹುತೇಕ ಭಾಗಗಳಲ್ಲಿ ಕಾಣಸಿಗುವ ಶಾಸನಗಳಲ್ಲಿ ಪಂಚಾಚಾರ್ಯರನ್ನು ಕುರಿತ ವಿವರಗಳನ್ನೊಳಗೊಂಡಂತೆ ಡಾ. ರಾಜಶೇಖರ ಗೊರಟ ಇವರು 'ಶಾಸನಗಳಲ್ಲಿ

ಪಂಚಾಚಾರ್ಯರು' ಎಂಬ ಮಹಾ ಪ್ರಬಂಧವನ್ನು ಮಂಡಿಸಿರುವುದನ್ನು ಸಹ ಗಮನಿಸಬಹುದಾಗಿದೆ.

**ಶೈವಮೀಮಾಂಸೆಯ ನೆಲೆಗಳು**

ಶೈವಮೀಮಾಂಸೆ ಒಂದರ್ಥದಲ್ಲಿ ಇದೊಂದು ಚಿದಂಬರ ರಹಸ್ಯಗಳನ್ನೊಳಗೊಂಡ ಬಹುಳತ್ವ ರೂಪದ್ದಾಗಿದೆ. ಇಲ್ಲಿನ ಚಿಂತನೆಗಳ ಪ್ರಕಾರ ಶಕ್ತಿವಿಶಿಷ್ಟಾದ್ವೈತವು ಹೇಗೆ ವೀರಶೈವದ ಆತ್ಮ ವ್ಯಾಖ್ಯೆ ಎನ್ನುವುದನ್ನು ಆಚಾರ್ಯರು ಭೌತ ಪ್ರಪಂಚ ಹಾಗೂ ಆ ಪ್ರಪಂಚದೊಂದಿಗಿನ ಅನುಭವವನ್ನು ಶ್ರುತಿ, ಸ್ಮೃತಿ, ಬ್ರಹ್ಮಸೂತ್ರ ಮತ್ತು ಶಿವಾಗಮಗಳೊಡನೆ ಸಮನ್ವಯ ಮಾಡಿ ನಿರೂಪಿಸಿದಂತಿದೆ. ಹೀಗೆ ನಿರೂಪಿಸುವಲ್ಲಿ ಆಚಾರ್ಯರು ಅನೇಕ ಬಗೆಯ ರೂಪಕ ಮತ್ತು ಪ್ರತಿಮೆಗಳನ್ನು ನಿದರ್ಶನಗಳಾಗಿ ಬಳಸಿಕೊಂಡಿದ್ದಾರೆ.

ಶ್ರುತಿಯಲ್ಲಿ ಕಂಡುಬರುವ 'ತಜ್ಜಲಆನಿತಿ ಶಾಂತ ಉಪಆಸೀತ' ಎಂಬ ಬ್ರಹ್ಮ ಭಾವದ ಉಕ್ತಿಯ ಮೂಲಕ ಮಾನವ ತನ್ನ ಸುತ್ತಲಿನ ಪ್ರಪಂಚವನ್ನು ಪರಮಾತ್ಮಭಾವದಿಂದ ಕಂಡು ಪ್ರಾಪಂಚಿಕರ ಶುಭ್ರ ಮತ್ತು ಸತ್ಯ ಶುದ್ಧಾತ್ಮಕ ಬದುಕಿಗೆ ವಿರುದ್ಧವಾದ ಆಚರಣೆಗಳನ್ನು ತೊರೆಯುವಂತೆ ಶೈವ ಮೀಮಾಂಸೆಗಳು ಕರೆ ನೀಡುತ್ತವೆ. ಯಾರು ವೀರಶೈವರು? ಎಂಬ ಪ್ರಶ್ನೆಗೆ ವಿರೋಧಿಯಲ್ಲದವನು ವೀರಶೈವ ಎಂಬ ವ್ಯಾಖ್ಯೆಯನ್ನು ನೀಡಿರುವುದು ಈ ಕಾರಣಗಳಿಗಾಗಿಯೇ ಎಂಬಂತೆ ತೋರುತ್ತದೆ. ಮುಖ್ಯವಾಗಿ ಬದುಕಿನ ಕ್ಷಣಭಂಗುರತೆಗಳನ್ನು ಸಾಧಕನಿಗೆ ಈ ಚಿಂತನೆಗಳು ಮನದಟ್ಟುಮಾಡಿಕೊಡುತ್ತವೆ. ಅಲ್ಲಮಪ್ರಭುವಿನ ವಚನಗಳು ಈ ಗಾಂಭೀರ್ಯತೆಯನ್ನು ಸಮರ್ಥವಾಗಿ ನುಡಿಸುತ್ತವೆ. ವಾಸ್ತವವಾಗಿ ಅಲ್ಲಮ ಸಂಸ್ಕೃತೋಕ್ತ ಶೈವ ದರ್ಶನಗಳನ್ನು ಕನ್ನಡದಲ್ಲಿ ಪ್ರತಿಮಿಸಿದ ಮಾರ್ಗ ಪರಂಪರೆಯ ಪ್ರತಿನಿಧಿಯಾಗಿ ಕಾಣುತ್ತಾನೆ ಎಂಬುದು ಎಲ್ಲ ವಿದ್ವಾಂಸರು ಒಪ್ಪಿಕೊಂಡಿರುವ ಸಂಗತಿಯಾಗಿದೆ.

ಇನ್ನು ಶೈವ ಯಾ ವೀರಶೈವ ಇದು ಶ್ರುತಿಗಳ ಸಮನ್ವಯೀಕರಣದಲ್ಲಿ ಅದರಲ್ಲಿಯೂ ದ್ವೈತ ಮತ್ತು ಅದ್ವೈತ ಪರ ಶ್ರುತಿಗಳನ್ನು ಸಮನಿಸಿಕೊಂಡಿದೆ. ಇದನ್ನು ಶ್ರೀಪತಿ ಪಂಡಿತಾರಾಧ್ಯರು ತಮ್ಮ ಶ್ರೀಕರ ಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ. ದ್ವೈತಾದ್ವೈತಮತವೇ ಶುದ್ಧೇ/ವಿಶಿಷ್ಟಾದ್ವೈತ ಸಂಜ್ಞಕೇ/ವೀರಶೈವಕ ಸಿದ್ಧಾಂತೇ ಸರ್ವಶ್ರುತಿ ಸಮನ್ವಯಃ ಇಲ್ಲಿ ಆಚಾರ ಮತ್ತು ವಿಚಾರಗಳೆರಡೂ ಪ್ರಮುಖವಾಗಿ ಗಮನ ಸೆಳೆಯುತ್ತವೆ. ಷಟ್ಸ್ಥಲೋಪಾಸನೆಯನ್ನು ಆಚಾರವೆಂದು, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ವಿಚಾರವೆಂದು ಕರೆಯುವ ವಾಡಿಕೆಯೂ ಇದೆ. ಈ ಸ್ಥಲಗಳು ಶಿವ-



ಜೀವೈಕ್ಯತೆಗೆ ಸೋಪಾನಗಳು ಆಗಿರುವಂತೆ ಜೀವನೆನಿಸಿದ ಮನುಷ್ಯನ ಆತ್ಮದ ಪವಿತ್ರೀಕರಣದ ಘಟ್ಟಗಳೂ ಆಗಿವೆ. ಇವು ಬಾಹ್ಯ ಅನಿವಾರ್ಯತೆಗಳಾಗಿರುವಂತೆ ಅಂತರಂಗ ಪರಿಶುದ್ಧತೆಯ ವ್ಯವಹಾರಗಳು ಎನಿಸಿವೆ. ಹಾಗಾಗಿ ಶೈವಮೀಮಾಂಸೆಯಲ್ಲಿ ಕಂಡುಬರುವ ಆಚಾರ (ಕ್ರಿಯೆ) ಮತ್ತು ವಿಚಾರ (ಜ್ಞಾನ)ಗಳಲ್ಲಿ ಭಿನ್ನತೆ ಇಲ್ಲ. ಈ ಅಭಿನ್ನತೆಗಳಿಂದಾಗಿ ಇದು ಅದ್ವೈತವೆಂದಾಗುತ್ತದೆ. ಈ ಅದ್ವೈತ ಶಕ್ತನೇ ಶಿವ. ಈ ಶಿವ ತನ್ನ ಲೀಲೆಯಿಂದಾಗಿ ಜೀವನಾಗಿ ಮತ್ತೆ ತನ್ನಲ್ಲಿಯೇ ಒಂದಾಗುವ ಪ್ರಕ್ರಿಯೆ ಶಿವಾದ್ವೈತದ ತಿರುಳೂ ಆಗಿದೆ.

□

ಅರ್ಥ ಸನ್ಯಾಸಿಯಾದಡೇನಯ್ಯಾ,
ಆವಂಗದಿಂದ ಬಂದಡೂ ಕೊಳದಿರಬೇಕು.
ರುಚಿ ಸನ್ಯಾಸಿಯಾದಡೇನಯ್ಯಾ
ಜಿಹ್ವೆಯ ಕೊನೆಯಲ್ಲಿ ಮಧುರವನರಿಯದಿರಬೇಕು.
ಸ್ತ್ರೀ ಸನ್ಯಾಸಿಯಾದಡೇನಯ್ಯಾ
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ತಪ್ಪಿಲ್ಲದಿರಬೇಕು.
ದಿಗಂಬರಿಯಾದಡೇನಯ್ಯಾ
ಮನ ಬತ್ತಲೆ ಇರಬೇಕು
ಇಂತೀ ಚತುರ್ವಿಧದ ಹೊಲಬರಿಯದೆ ವೃಥಾ ಕೆಟ್ಟರು,
ಕಾಣಾ ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

# ಬಸವಣ್ಣ ಮತ್ತು ಗುರುನಾನಕ್: ಒಂದು ತೌಲನಿಕ ನೋಟ

**ಡಾ. ತಿಪ್ಪೇಸ್ವಾಮಿ**

**ಬ**ಸವಣ್ಣನವರು ಕರ್ನಾಟಕದ ಮಹಾನ್ ಶರಣರಾದರೆ ಗುರುನಾನಕ್ ಪಂಜಾಬಿನ ಸಿಕ್ಖ್ ಗುರುಗಳಲ್ಲಿ ಅಗ್ರಗಣ್ಯರು. ಮನುಕುಲದ ಉತ್ಥಾನಕ್ಕಾಗಿ ಆಜೀವಪರ್ಯಂತ ಚಿಂತಿಸಿದ ಈ ಈರ್ವರು ಪೂಜನೀಯರೂ ಆದ ದಿವ್ಯಾತ್ಮರು. ಬಸವಣ್ಣನವರು 12ನೇ ಶತಮಾನದಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಇತಿಹಾಸದಲ್ಲಿ ತಮ್ಮ ಕ್ರಾಂತಿಕಾರಿ ವಿಚಾರಗಳಿಂದ ಹೊಸ ಸಮಾಜದ ನಿರ್ಮಾಪಕರಾದರೆ, ಗುರುನಾನಕ್ 15ನೇ ಶತಮಾನದಲ್ಲಿ ಉದಿಸಿ ಬಂದ ಸಿಕ್ಖ್ ಧರ್ಮದ ಪ್ರವರ್ತಕರು. ತಮ್ಮ ಧರ್ಮೋಪದೇಶ ಗಳ ನುಡಿಮುತ್ತುಗಳಿಂದ ಹಿಂದೂ ಮುಸ್ಲಿಮರ ನಡುವೆ ಏಕತೆಯನ್ನು ಮೂಡಿಸಲು ತಮ್ಮ ಬದುಕಿನುದ್ದಕ್ಕೂ ಶಾಂತಿಮಂತ್ರವನ್ನು ಉಪದೇಶಿಸಿದ ಅನನ್ಯ ಸಂತರು. ಬಸವಣ್ಣ ಮತ್ತು ನಾನಕ್ ಪರಮಾತ್ಮನ ಅಸ್ತಿತ್ವವನ್ನು ಮಾನವ ದೇಹದಲ್ಲಿ ಕಂಡ ನಿರ್ಗುಣೋಪಾಸಕ ಸಂತರು. ಬಸವಣ್ಣನವರ ಭಾಷೆ ಕನ್ನಡವಾದರೆ, ನಾನಕರ ಭಾಷೆ ಪಂಜಾಬಿ. ಬಸವಣ್ಣನವರು ದಕ್ಷಿಣದವರಾದರೆ ನಾನಕರು ಉತ್ತರದವರು. ಹೀಗೆ ಭಾಷೆಗಳು ಮತ್ತು ಪ್ರದೇಶಗಳು ಬೇರೆಬೇರೆಯಾದರೂ ಇವರು ಪ್ರಚುರಪಡಿಸಿದ ಧರ್ಮಗಳು ಮತ್ತು ಮಂಡಿಸಿದ ವಿಚಾರಧಾರೆಗಳಲ್ಲಿ ಕಾಣುವ ಸಾಮ್ಯತೆಗಳು ಬೆರಗನ್ನುಂಟುಮಾಡುತ್ತವೆ. ದಾರ್ಶನಿಕರಾಗಿ, ಭಕ್ತರಾಗಿ, ಸಮಾಜ ಸುಧಾರಕರಾಗಿ, ಅನುಭಾವಿಗಳಾಗಿ ಮತ್ತು ಹುಟ್ಟು ಕವಿಗಳಾಗಿ ಇವರು ಮಂಡಿಸಿದ ವಿಚಾರಧಾರೆಗಳು ಇಂದಿನ ಸಮಾಜಕ್ಕೂ ಮಾರ್ಗದರ್ಶಿ ಸೂತ್ರಗಳಾಗಿವೆ, ಪ್ರಾಸಂಗಿಕವಾಗಿವೆ. ಮುಂದೆ ಬಸವಣ್ಣ ಮತ್ತು ಗುರುನಾನಕರ ಚಿಂತನೆಗಳನ್ನು ಮತ್ತು ಅವುಗಳಲ್ಲಿ ಸಾಮ್ಯಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿದೆ.

1. ಬಸವಣ್ಣನವರು ಬ್ರಾಹ್ಮಣ ಕುಟುಂಬದಲ್ಲಿ ಜನ್ಮವೆತ್ತಿದರೂ ಉಚ್ಚಕುಲದ ಅಹಮಿಕೆಯನ್ನು ಎಂದೂ ಅನುಭವಿಸಲಿಲ್ಲ. ಬದಲಾಗಿ ತಾವು ಉಚ್ಚಕುಲದಲ್ಲಿ ಜನ್ಮವೆತ್ತಿದ್ದಕ್ಕೆ ಪರಿತಪಿಸಿದ್ದಾರೆ. ಹಿಂದೂ ಸಮಾಜದಲ್ಲಿನ ಜಡಮೌಲ್ಯಗಳನ್ನು, ಮೂಢನಂಬಿಕೆಗಳನ್ನು ದಿಟ್ಟವಾಗಿ ಪ್ರಶ್ನಿಸಿ ತಮಗೆ ಸರಿ ಅನ್ನಿಸಿದ್ದನ್ನು ಆಚರಿಸಿದವರು ಬಸವಣ್ಣ. ಪುರೋಹಿತಶಾಹಿ ಸಂಸ್ಕೃತಿಯನ್ನು ವೈಚಾರಿಕ ನಿಕಷದ ಮೇಲೆ ಪ್ರಶ್ನಿಸಿದ



ಇವರು ಯಾವುದನ್ನೂ ಕಣ್ಣುಮುಚ್ಚಿ ಒಪ್ಪದೆ ಬಂಡಾಯ ಎದ್ದವರು. ಇದಕ್ಕೆ ಒಂದು ಉದಾಹರಣೆಯಾಗಿ ಅವರ ಉಪನಯನ ಪ್ರಸಂಗವನ್ನು ನೋಡಬಹುದು.

ವೈದಿಕ ಸಂಪ್ರದಾಯದಂತೆ ತಂದೆ-ತಾಯಿಗಳು ಬಾಲಕ ಬಸವಣ್ಣನಿಗೆ ಉಪನಯನ ಸಂಸ್ಕಾರವನ್ನು ಇಟ್ಟುಕೊಂಡಾಗ ಅದನ್ನು ವಿರೋಧಿಸಿದರು. ಉಪನಯನದ ಗುರುತಾದ ಜನಿವಾರ ಅಸಮಾನತೆ ಮತ್ತು ಗಂಡುಹೆಣ್ಣಿನ ನಡುವೆ ಅಂತರವನ್ನು ಸೃಷ್ಟಿಸುವ ಅನಿಷ್ಟಪದ್ಧತಿ ಎಂದರು. ಒಡಹುಟ್ಟಿದ ಅಕ್ಕನಾಗಮ್ಮನಿಗೆ ಇಲ್ಲದ ಉಪನಯನ ತಮಗೆ ಬೇಡ ಎಂದು ಎದ್ದುಬಂದವರು. ಇದು ಬಸವಣ್ಣನವರ ವೈಚಾರಿಕ ಮನಸ್ಸು ಬಾಲ್ಯದಲ್ಲೇ ಸನಾತನಿಗಳ ವಿರುದ್ಧ ಬಂಡೆದ್ದುದರ ಸೂಚಕವಾಗಿದೆ.

ಗುರುನಾನಕರ ಬದುಕಿನಲ್ಲೂ ಇದೇ ರೀತಿಯ ಪ್ರಸಂಗ ಎದುರಾದುದನ್ನು ನೋಡಬಹುದಾಗಿದೆ. ಕ್ಷತ್ರಿಯ ವರ್ಣಕ್ಕೆ ನಾನಕರ ಕುಟುಂಬ ಸೇರಿದ್ದರಿಂದ, ಅವರ ತಂದೆ ಪರಂಪರೆಯಂತೆ ಬಾಲಕ ಗುರುನಾನಕನಿಗೆ ಜನಿವಾರ ಧಾರಣೆ ಮಾಡಿಸುವ ಕ್ರಿಯೆಗೆ ಮುಂದಾದರು. ಬಾಲಕ ನಾನಕನಿಗೆ ಅಭ್ಯಂಜನ ಸ್ನಾನ ಮಾಡಿಸಿ, ಹೊಸ ವಸ್ತ್ರಗಳನ್ನು ತೊಡಿಸಿ ಮಂಗಳಪೀಠದ ಮೇಲೆ ಪೂರ್ವಾಭಿಮುಖವಾಗಿ ಕೂಡಿಸಿದರು. ತಂದೆ ತಾಯಿ ಅಕ್ಕಪಕ್ಕದಲ್ಲಿ ಕುಳಿತರು. ಪುರೋಹಿತರು ಮಂತ್ರ ಪಠಿಸುತ್ತ ಯಜ್ಞೋಪವೀತವನ್ನು ಧಾರಣೆ ಮಾಡಲು ಮುಂದಾದಾಗ ನಾನಕರು ಅದನ್ನು ತಡೆದು ಹೀಗೆ ಹೇಳಿದರು. 'ಅಶುದ್ಧವಾದ, ಜೀರ್ಣವಾಗುವ, ಸುಟ್ಟುಹೋಗುವ ಪರಲೋಕಕ್ಕೆ ಜೊತೆಯಲ್ಲಿ ಬಾರದ ಈ ದಾರವನ್ನು ನಾನು ಧರಿಸಲಾರೆ'. ಆಗ ಅಲ್ಲಿದ್ದ ಪಂಡಿತರು 'ಸುಟ್ಟುಹೋಗದ, ಅಲ್ಲಿಗೂ ಸಲ್ಲುವ ದಾರ ಯಾವುದೆಂದು' ಕೇಳಿದಾಗ ನಾನಕರು ಹೀಗೆ ಉತ್ತರಿಸಿದರು – "ಕನಿಕರವೇ ಭಕ್ತಿಯಾಗಿ, ತೃಪ್ತಿಯೇ ದಾರವಾಗಿ ಸಂಯಮವೇ ಗಂಟಾಗಿ, ಸತ್ಯವೇ ಹುರಿಯಾಗಿ ಸಿದ್ಧಗೊಂಡಿದ್ದಾದರೆ ಅದು ಆತ್ಮನಿಗೆ ಆದರ್ಶವಾದ ಮತ್ತು ಪವಿತ್ರವಾದ ದಾರವಾಗುತ್ತದೆ. ಇದು ಅಳಿಯದು, ಸುಡದು, ಕೊಳೆಯಾಗದು, ಹರಿಯದು, ಕಳೆದುಹೋಗದು. ಅಂತಹ ದಾರವನ್ನು ಕೊರಳಲ್ಲಿ ಧರಿಸುವವನು ಭಗವಂತನ ಕೃಪೆಗೆ ಪಾತ್ರನಾಗುತ್ತಾನೆ". ನಾನಕರ ಈ ಮಾತುಗಳನ್ನು ಕೇಳಿ ಎಲ್ಲರೂ ದಂಗಾದರು. ತಂದೆ-ತಾಯಿ ಮಗನ ವ್ಯವಹಾರಕ್ಕೆ ಮಮ್ಮಲ ಮರುಗಿದರು. ಆದರೆ ನಾನಕರು ಯಾವುದಕ್ಕೂ ವಿಚಲಿತರಾಗದೆ ಶಾಂತರಾಗಿದ್ದರು.

ಈ ರೀತಿ ಬಸವಣ್ಣ ಮತ್ತು ಗುರುನಾನಕರು ಬಾಲ್ಯದಲ್ಲೇ ವಿಚಾರವಂತರಾಗಿ ಅರ್ಥಹೀನ ಸಂಪ್ರದಾಯವನ್ನು ವಿರೋಧಿಸಿದರು.

2. ಬಸವಣ್ಣ ಮತ್ತು ನಾನಕರು ಜನ್ಮವೆತ್ತಿದಾಗ ನಡೆದ ವಿಸ್ಮಯಗಳೂ ಕುತೂಹಲಕಾರಿಯಾಗಿವೆ. ಬಸವಣ್ಣನವರ ಹುಟ್ಟು ಈ ಜಗತ್ತಿನಲ್ಲಾದದ್ದು ಮಹತ್ತನ್ನು

ಸಾಧಿಸಲು. ಈ ಕುರಿತಂತೆ ನಾನಾ ಬಗೆಯ ಅಭಿಪ್ರಾಯಗಳು ಪ್ರಚಲನೆಯಲ್ಲಿವೆ ಡಾ. ಎಂ.ಎಂ. ಕಲಬುರ್ಗಿಯವರು ಈ ಕುರಿತು ವಿಶ್ಲೇಷಿಸುತ್ತಾ ಹೀಗೆ ಬರೆದಿದ್ದಾರೆ – 'ಹರಿಹರನ ಪ್ರಕಾರ ಬಸವಣ್ಣ ಹುಟ್ಟುವುದು ಪ್ರಸಾದ ತತ್ವದ ಸಿದ್ಧಿಗಾಗಿ, ಪ್ರಸಿದ್ಧಿಗಾಗಿ. ಅಂದರೆ ಬಸವಣ್ಣ ಹುಟ್ಟುವ ಮೊದಲು ಅವನ ಪರಿಸರ 'ಪದಾರ್ಥ'ಮಯವಾಗಿತ್ತು. ಅದನ್ನು ಪ್ರಸಾದಮಯ ಮಾಡುವುದು ಆತನ ಜನನದ ಉದ್ದೇಶ. ಪದಾರ್ಥ ಜೀವನವೆಂದರೆ ಸ್ಥಗಿತ ಬದುಕು. ಪ್ರಸಾದಜೀವನವೆಂದರೆ ಚಲನಶೀಲ ಬದುಕು. ಒಂದು ಸ್ಥಾವರ, ಇನ್ನೊಂದು ಜಂಗಮ. ಒಂದಕ್ಕೆ ಅಳಿವುಂಟು. ಇನ್ನೊಂದಕ್ಕೆ ಅಳಿವಿಲ್ಲ. ಬಸವರಾಜದೇವರ ರಗಳೆಯಲ್ಲಿ ಸ್ಥಾವರವಾಗಿದ್ದ ಎರಡು ಸಾಮಾಜಿಕ ಅಂಶಗಳನ್ನು ಜಂಗಮಗೊಳಿಸುವ ಉದ್ದೇಶ ಪ್ರಧಾನವಾಗಿ ಕಾಣುತ್ತದೆ. ಅವು - 1. ರಾಜ - ಪ್ರಜೆ (= ಜಂಗಮ) ಎಂದು ಸಮಾಜವನ್ನು ಒಡೆದು ಶೋಷಣೆ ನಡೆಸಿದ್ದ ರಾಜನ ಅಧಿಕಾರವನ್ನು ಅಲ್ಲಗಳೆದು ಪ್ರಜೆಗೂ (= ಜಂಗಮ) ರಾಜನಷ್ಟೇ ಅಧಿಕಾರವಿದೆಯೆಂದು ಸಾರುವುದು. 2. ಕುಲಜ - ಅಂತ್ಯಜ ಎಂದು ಸಮಾಜವನ್ನು ಒಡೆದು ಶೋಷಣೆ ನಡೆಸಿದ್ದ ಕುಲಜನ ಶ್ರೇಷ್ಠತೆಯನ್ನು ಅಲ್ಲಗಳೆದು ಅಂತ್ಯಜನಿಗೂ ಕುಲಜನಷ್ಟೇ ಗೌರವವಿದೆಯೆಂದು ಸಾರುವುದು.

ಮಾತೆ ಮಹಾದೇವಿಯವರು ಹೇಳುವಂತೆ 'ಬಸವಣ್ಣನವರು ಹುಟ್ಟಿದಾಗ ಒಂದು ವಿಶೇಷ ಘಟನೆ ನಡೆಯಿತು. ತಾಯಿಯ ಗರ್ಭಾಂಬುಧಿ'ಯಿಂದ ಜನಿಸಿ ಹೊರಗಿನ ಜಗತ್ತಿಗೆ ಮಗು ಪ್ರವೇಶಿಸಿತು. ಆದರೇನಂತೆ ಕಣ್ಣು ತೆರೆಯದೆ, ಅಳದೆ, ಮಿಸುಕದೆ ಇರಲು ಹೆತ್ತವರು ಚಿಂತಾಕ್ರಾಂತರಾದರು. ಅದೇ ವೇಳೆಗೆ ಮನೆಯ ಮುಂದೆ ಮಂತ್ರದ ಘೋಷವಾಯಿತು. ಕೂಡಲಸಂಗಮ ಕ್ಷೇತ್ರದ ಅಧಿಪತಿಗಳಾಗಿದ್ದ ಜಾತವೇದ ಮುನಿಗಳು ಒಂದು ವಿಶೇಷ ಚಿತ್ಕಳೆಯು ಇಳೆಗಿಳಿದ ಅನುಭವ ಪಡೆದು ತ್ವರೆಯಿಂದ ಧಾವಿಸಿದ್ದರು. ಗೌರವಪೂರ್ಣವಾಗಿ, ಪಾದಕ್ಕೆ ನೀರೆರೆದು ಬರಮಾಡಿಕೊಂಡ ಮಾದರಸರ ಮನೆಯನ್ನು ಹೊಕ್ಕು ಆ ಮುನಿಪುಂಗವರು ಮಗುವಿನ ಹಣೆಗೆ ವಿಭೂತಿಯನ್ನು ಧರಿಸಿ, ತಲೆಯ ಮೇಲೆ ಕೈಯಿಟ್ಟು "ಓಂ ನಮಃ ಶಿವಾಯ" ಎಂಬ ಮಂತ್ರದ ಉಚ್ಚಾರ ಮಾಡುತ್ತಲೇ ಮಗುವು ಕಣ್ತೆರೆಯಿತು. ಗುರು ದರ್ಶನ ಪಡೆದು ಪುಳಕಿತಗೊಂಡಿತು. ಗುರುಗಳು ಆಶೀರ್ವದಿಸಿ, 'ಬಸವ'ನೆಂದು ಹೆಸರಿಡಲು ಹೇಳಿ ನಿರ್ಗಮಿಸಿದರು.

ಹೀಗೆ ಬಸವಣ್ಣನವರ ಜನ್ಮವಾದದ್ದು ಒಂದು ನಿಶ್ಚಿತ ಉದ್ದೇಶಕ್ಕಾಗಿ, ಲೋಕ ಕಲ್ಯಾಣಕ್ಕಾಗಿ ಎಂಬ ಅಂಶ ಮೇಲಿನ ವಿವರಗಳಿಂದ ಲಭ್ಯವಾಗುತ್ತದೆ.

ಇದೇ ರೀತಿ ಗುರುನಾನಕರ ಹುಟ್ಟಿನ ಉದ್ದೇಶವನ್ನು ಕುರಿತು ನಾನಾಬಗೆಯ ಪವಾಡ ಸದೃಶ ಘಟನೆಗಳನ್ನು ಹೇಳಲಾಗುತ್ತದೆ.



ಶಿಶು ನಾನಕ್ ಹುಟ್ಟಿದಾಗ ತಾಯಿಗೆ ಹೆರಿಗೆ ಮಾಡಿಸಿದ ಮುಸ್ಲಿಮ್ ಸೂಲಗಿತ್ತಿ ಹೇಳುವ ಪ್ರಕಾರ ಮಗು ಹುಟ್ಟಿದ ಕೂಡಲೇ ವಯಸ್ಕನಂತೆ ನಕ್ಕನಂತೆ. ಆಕಾಶದಲ್ಲಿ ಸ್ವರ್ಗಿಯ ಜ್ಞಾನವನ್ನು ಜ್ಞಾನಿಗಳು ಕೇಳಿಸಿಕೊಂಡರಂತೆ. ಹರದಯಾಲ್ ಎಂಬ ಪುರೋಹಿತರು ಮಗುವನ್ನು ನೋಡಿ ಕೈಮುಗಿದು 'ಈ ಮಗು ಹಿಂದೂ ಮುಸಲ್ಮಾನರಿಂದ ಮುಂದೆ ಪೂಜಾರ್ಹವಾಗುವುದೆಂದು, ಲೋಕದ ಜೀವಿಗಳಿಂದ ಗೌರವಿಸಲ್ಪಡುವುದಾಗಿ' ಭವಿಷ್ಯ ನುಡಿದರಂತೆ. ಇನ್ನು ನಾನಕ್ ದೇವದೂತರಾದದ್ದು ಒಂದು ಅದ್ಭುತ ಪವಾಡ ಸದೃಶ ಘಟನೆಯಾಗಿದೆ. ನಾನಕ್ ಮುಂದೊಂದು ದಿನ ಮುಂಜಾನೆ ಸ್ನಾನ ಮಾಡಲು ನೀರಿಗೆ ಇಳಿದು ಅಲ್ಲೇ ಲೀನರಾದರು. ಮೂರು ದಿನಗಳ ಕಾಲ ಅವರ ದರ್ಶನವಾಗಲಿಲ್ಲ. ನಾಲ್ಕನೆಯ ದಿನ ಅವರು ಮೇಲೆ ಬಂದಾಗ ಎಲ್ಲರಿಗೂ ಆಶ್ಚರ್ಯ! ಹೀಗೆ ಗುರುನಾನಕ್ ನೀರಿನಿಂದ ಹೊರಬಂದಾಗ ಬೇರೆಯೇ ಮನುಷ್ಯರಾಗಿದ್ದರಂತೆ. ಅವರಲ್ಲಿ ಪರಿವರ್ತನೆ ಗಳಾಗಿದ್ದವು. ಒಂದು ನಂಬಿಕೆಯ ಪ್ರಕಾರ ದೇವರು ಅವರಿಗೆ ಅಮೃತವನ್ನು ಕುಡಿಸಿದನಂತೆ ಮತ್ತು 'ನಿನ್ನನ್ನು ಹುಟ್ಟು, ಸಾವು ಪುನರ್ಜನ್ಮಗಳಿಂದ ಉದ್ಧರಿಸಿದ್ದೇನೆ. ಇನ್ನು ಮುಂದೆ ನೀನು ನಾನಕನಲ್ಲ ಗುರುದೇವ ನಾನಕ್' ಎಂದು ಭಗವಂತ ಹೇಳಿದನಂತೆ. ಆಗ ದೇವರು ಕೊಟ್ಟ ವಸ್ತ್ರವನ್ನು ಧರಿಸಿ ನಾನಕ್ ತಮ್ಮ ಜ್ಞಾನೋದಯವನ್ನು ಈ ಮಾತುಗಳಿಂದ ಸಾರಿದರಂತೆ 'ಹಿಂದೂವೂ ಇಲ್ಲ, ಮುಸಲ್ಮಾನನೂ ಇಲ್ಲ, ಇರುವನೊಬ್ಬನೇ ಮನುಷ್ಯ'.

ಹೀಗೆ ಬಸವಣ್ಣ ಮತ್ತು ಗುರುನಾನಕರ ಬಗೆಗೆ ಕೇಳಿಬರುವ ಪವಾಡಸದೃಶ ಸಂಗತಿಗಳು ಬೆರಗನ್ನುಂಟುಮಾಡುವಷ್ಟು ಸಮಾನವಾಗಿವೆ.

3. ವೀರಶೈವರಲ್ಲಿ 'ಶರಣ' ಶಬ್ದ ಬಳಕೆಗೆ ಒಂದು ವಿಶಿಷ್ಟ ಅರ್ಥವಿದೆ. ವೀರಶೈವ ಧರ್ಮಾನುಯಾಯಿಗಳನ್ನು, ಲಿಂಗವಂತರನ್ನು, ಶಿವಭಕ್ತರನ್ನು 'ಶರಣ' ಎಂಬ ಪಾರಿಭಾಷಿಕ ಶಬ್ದದಿಂದ ಗುರುತಿಸಲಾಗುತ್ತದೆ. ಬಸವಾದಿ ಶರಣರು ಪ್ರತಿಪಾದಿಸಿರುವ ಜೀವನಮೌಲ್ಯಗಳನ್ನು ಬದುಕಿನಲ್ಲಿ ಅನುಸರಿಸುವವನೇ ನಿಜವಾದ ಶರಣ. ಈ ದೃಷ್ಟಿಯಿಂದ ಶರಣ ವ್ಯಕ್ತಿವಾಚಕ ಶಬ್ದವಲ್ಲ ಧರ್ಮಸೂಚಕ ಶಬ್ದ. ಶರಣನಾಗುವುದು ಅಷ್ಟು ಸುಲಭದ ಮಾತಲ್ಲ. ಶರಣನಾಗುವುದೆಂದರೆ ಅದೊಂದು ಸಾಧನೆ. ಶರಣರು ಹೇಳಿರುವ ಗುಣಗಳನ್ನು ಮೈಗೂಡಿಸಿಕೊಂಡವನೇ ನಿಜವಾದ ಶರಣ. ಚನ್ನಬಸವಣ್ಣ ಈ ಕಾರಣದಿಂದಾಗಿಯೇ 'ಕೋಟಿಗೊಬ್ಬ ಶರಣ' ಎಂದಿದ್ದಾರೆ.

ಶರಣ ಬೇರೆಯಲ್ಲ, ಪರಮಾತ್ಮ ಬೇರೆಯಲ್ಲ. ಹಾಗೆ ನೋಡಿದರೆ ಶರಣ ಶಿವನ ಪ್ರತಿರೂಪ, ಅವನ ಪ್ರತಿನಿಧಿ. ವಿಭೂತಿ ಇವನ ಲಾಂಛನ. ಇಷ್ಟಲಿಂಗ ಇವನ ಆಭರಣ. ಶರಣನೆಂದರೆ ಬಸವಣ್ಣನವರಿಗೆ ತುಂಬ ಪ್ರೀತಿ. ಬಸವಣ್ಣನವರು ಹೇಳುವಂತೆ ಶರಣ ಹೇಗಿರಬೇಕೆಂದರೆ :

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ ;
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ ;
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ ;
ಛಲಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ ;
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ ;
ಛಲವಿಲ್ಲದವರ ಮೆಚ್ಚ, ಕೂಡಲಸಂಗಮದೇವ.

ಶರಣರಂತೆ ಸಿಕ್ಖರು ಸಹ ಆ ಧರ್ಮದ ಅನುಯಾಯಿಗಳು. ಸಿಕ್ಖ್ ಎಂದರೆ ಶಿಷ್ಯ. ಈ ಶಿಷ್ಯ ಹೇಗಿರಬೇಕೆಂದರೆ ಈತ ತನ್ನ ಗುರುವಿನ ನಿಷ್ಠಾವಂತ ಅನುಯಾಯಿಯಾಗಿರಬೇಕು. ಸಕಲ ಪ್ರಾಣಿಗಳಲ್ಲಿ ದಯೆಯನ್ನು ತೋರುವವನಾಗಿರಬೇಕು. ಹಿಂಸೆಯನ್ನು ತೊರೆದವನಾಗಿರಬೇಕು. ಅಹಂಕಾರವನ್ನು ದೂರೀಕರಿಸಿದವನಾಗಿರಬೇಕು. ನಾನಕರು ತಮ್ಮ 'ಜಪುಜಿ'ಯಲ್ಲಿ ಹೇಳಿರುವಂತೆ 'ಸಿಕ್ಖ್ ಆದವನು ಈ ಜನರ ಮಧ್ಯೆ ಹುಟ್ಟಿ ಬಾಳಿ ಎದುರಾಗುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುತ್ತ ತನ್ನ ವ್ಯಕ್ತಿತ್ವವನ್ನು ಭವ್ಯಗೊಳಿಸಿಕೊಳ್ಳುವ ಸಾಧಕ'. 'ಈ ಸಾಧಕ ತನ್ನೆಲ್ಲ ಕ್ರಿಯೆಗಳನ್ನು 'ಹುಕುಂ'ಗೆ ಸಮರ್ಪಣಭಾವದಿಂದ ಅರ್ಪಿಸುವ ನಿರಹಂಬಾವಿ. ಸಿಕ್ಖರು ಪರಮಾತ್ಮನ ಚಾರಣರು.'

ಸಿಕ್ಖರು ಪರಿಶುದ್ಧ ಜೀವನಕ್ಕೆ ಪರ್ಯಾಯವಾದವರು. ನಿಜವಾದ ಸಿಕ್ಖ್ ಹೇಗಿರಬೇಕು ಎಂಬುದನ್ನು ಕೆಳಗಿನ ವಚನದಲ್ಲಿ ಗುರುರಾಮ್‌ದಾಸ್ ಮಾರ್ಮಿಕವಾಗಿ ಹೇಳಿದ್ದಾರೆ:

ಗುರ್ ಸತಿಗುರ್ ಕಾ ಜೊ ಸಿಖಿ ಅಖಾಯೆ, ಸುಭಲಕೆ ಉಠಿ ಹರಿನಾಮು ಧಿಆವೈ|
ಉದಮು ಕರೆ ಭಲಕೆ ಪರಭಾತೀ, ಇಸನಾನು ಕರೆ ಅಮ್ರಿತ್ ಸರಿ ನಾವೈ||
ಉಪದೇಸಿ ಗುರು ಹರಿ ಹರಿ ಜಪು ಜಾಪೈ, ಸಭಿ ಕಿಲವಿಖ ಪಾಪ್ ದೊಖ್ ಲಹಿ ಜಾವೈ||
ಫಿರಿ ಚಡೈ ದಿವಸು ಗುರುಬಾಣೀ ಗಾವೈ, ಬಹದಿಆ ಉಠ್‌ದಿಆ ಹರಿನಾಮು ಧಿಆವೈ|
ಜೊ ಸಾಸಿ ಗಿರಾಸಿ ಧಿಆಯೆ ಮೇರಾ ಹರಿ ಹರಿ, ಸೋ ಗುರಸಿಖು ಗುರು ಮನಿ ಭಾವೈ||
ಜಿಸ್ ನೊ ದಇಆಲು ಹೊವೈ ಮೇರಾ ಸುಆಮೀ ತಿಸು ಗುರಸಿಖ್ ಗುರು ಉಪದೇಸು ಸುಣಾವೈ||
ಜನು ನಾನಕು ಧೂಡಿ ಮಂಗೈ ತಿಸು ಗುರಸಿಖ್ ಕೀ ಜೊ ಆಪಿ ಜಪೈ ಅವರಹ ನಾಮು ಜಪಾವೈ||

ಸದ್ಗುರುವಿನ ನಿಜವಾದ ಸಿಕ್ಖ್ ಅಂದರೆ ಶಿಷ್ಯನೆಂದು ಕರೆಸಿಕೊಳ್ಳುವವನು ದಿನನಿತ್ಯ ಎದ್ದು ಭಗವಂತನ ಸ್ಮರಣೆ ಮಾಡಬೇಕು, ಸ್ನಾನ ಮಾಡಬೇಕು, ನಂತರ ಭಗವನ್ ನಾಮರೂಪಿ ಅಮೃತ ಸರೋವರದಲ್ಲಿ ಮುಳುಗೇಳಬೇಕು. ಸದ್ಗುರುವಿನ



ಉಪದೇಶದಿಂದ ಸಿಕ್ಖ್ ಭಗವಂತನ ಹೆಸರೇಳುತ್ತಾನೆ. ಈ ಮೂಲಕ ತನ್ನೆಲ್ಲ ಪಾಪಗಳನ್ನು, ವಿಕಾರಗಳನ್ನು ತೊಳೆದುಕೊಳ್ಳುತ್ತಾನೆ. ನಂತರ ದಿನವೇರಿದಂತೆ ಸಿಕ್ಖ್ ಸದ್ಗುರುವಿನ ಪದಗಳನ್ನು ಹಾಡುತ್ತಾನೆ. ಎದ್ದಾಗ ಕುಳಿತಾಗ ಪ್ರಭುವಿನ ನಾಮಸ್ಮರಣೆ ಮಾಡುತ್ತಾನೆ. ಸದ್ಗುರುವಿನ ಮನಸ್ಸಿನಲ್ಲಿ ಸದಾ ಪ್ರೀತಿಯ ಪ್ರಭುವನ್ನು ನೆನಪಿಸಿಕೊಳ್ಳುವವನೇ ಶಿಷ್ಯನೆಂದು ಉಳಿದುಕೊಳ್ಳುತ್ತಾನೆ. ಯಾವ ಶಿಷ್ಯನ ಮೇಲೆ ಭಗವಂತ ದಯೆ ತೋರುವನೋ ಅವನಿಗೆ ಸದ್ಗುರು ಶಿಕ್ಷಣವನ್ನು ಕೊಡುತ್ತಾನೆ. ನಾನಕ್ ಆ ಗುರು ಮುಖದಿಂದ ಬರುವ ಅಮೃತವಾಣಿಯನ್ನು ಹೇಳುತ್ತಾರೆ ಮತ್ತು ತಾವೂ ನಾಮಸ್ಮರಣೆ ಮಾಡುತ್ತ ಬೇರೆಯವರಿಂದಲೂ ನಾಮಸ್ಮರಣೆ ಮಾಡಿಸುತ್ತಾರೆ. ವೀರಶೈವ ಶರಣರು ಸಿಖ್ ಧರ್ಮದ ಸಿಕ್ಖರು ಪರ್ಯಾಯವಾಚಿಗಳು ಧರ್ಮದ ಹಾದಿಯ ಪಥಿಕರು.

4. ಬಸವಣ್ಣನವರು ಮತ್ತು ಗುರುನಾನಕ್ ಶ್ರೇಷ್ಠ ದಾರ್ಶನಿಕರು. ಆತ್ಮ, ಪರಮಾತ್ಮ, ಜಗತ್ತು, ಮಾಯೆ ಮತ್ತು ಮೋಕ್ಷವನ್ನು ಕುರಿತು ಇಬ್ಬರೂ ಗಹನವಾಗಿ ಚಿಂತನೆ ನಡೆಸಿ ಕಂಡುಕೊಂಡಿರುವ ಸತ್ಯವು ಇವರನ್ನು ಶ್ರೇಷ್ಠ ದಾರ್ಶನಿಕರ ಸಾಲಿಗೆ ನಿಲ್ಲಿಸುತ್ತದೆ. ಮುಂದೆ ಇವರ ದಾರ್ಶನಿಕ ಚಿಂತನೆಗಳನ್ನು ವಿವೇಚಿಸಿದೆ.

**ಅ) ಆತ್ಮ :** ಬಸವಣ್ಣನವರು ಜೀವಾತ್ಮವನ್ನು ಪರಮಾತ್ಮನ ಅಂಶವೆಂದು ನಂಬಿದ್ದಾರೆ. ಆತ್ಮ ಪರಮಾತ್ಮನಿಂದ ಬೇರೆಯಲ್ಲ, ಆತ್ಮ ಶಿವಾಂಶವೇ ಆಗಿದೆ. ಈ ಆತ್ಮ ಸತಿ. ಇವರ ಪ್ರಕಾರ ಚಿನ್ನ ಮತ್ತು ಚಿನ್ನದಿಂದ ಮಾಡಿದ ಆಭರಣಗಳಲ್ಲಿ ಭೇದ ಉಂಟೇ ಹೊರತಾಗಿ ಮೂಲದ ಸ್ವರೂಪದಲ್ಲಿ ಯಾವುದೇ ಭೇದವಿಲ್ಲ. ಚಿನ್ನ ಪರಮಾತ್ಮ, ಅದರಿಂದಾದ ಒಡವೆಗಳು ಆತ್ಮಗಳು. ಈ ಆಭರಣಗಳನ್ನು ಕರಗಿಸಿದರೆ ಅವು ಮುಂಚಿನ ಚಿನ್ನವೇ ಆದಂತೆ ಆತ್ಮ ತನ್ನ ರೂಪ ಭೇದಗಳನ್ನು ಕಳೆದುಕೊಂಡಾಗ ಮೂಲ ಪರಮಾತ್ಮನಲ್ಲಿ ಲೀನವಾಗುತ್ತದೆ. ಸಿಕ್ಖ್ ಧರ್ಮದಲ್ಲಿ ಜೀವಾತ್ಮ ಪರಮಾತ್ಮನ ಅಂಶವೇ ಆಗಿದೆ. ಆತ್ಮ ತನ್ನ ಈ ರೂಪದಲ್ಲಿ ಪರಮಾತ್ಮನನ್ನು ಮರೆತಿರುತ್ತದೆ. ಅದನ್ನು ಗುರುತಿಸುವ ಆವಶ್ಯಕತೆ ಇದೆ.

ಸಿಕ್ಖ್ ಧರ್ಮದ ಪ್ರಕಾರ ಜೀವಾತ್ಮ ಹೆಣ್ಣು. ಈ ಪ್ರಪಂಚ ಜೀವಾತ್ಮರ ತವರು. ಇಲ್ಲಿಂದ ಅದು ತನ್ನ ಗಂಡನ ಮನೆಗೆ ಹೋಗಬೇಕಿದೆ. ತನ್ನ ತವರಿನಲ್ಲಿ ಆತ್ಮ ಗುಣಗಳ ಗಣಿಯಾಗಬೇಕು. ಗುಣಾರ್ಜನೆ ಮಾಡಿಕೊಂಡು ಹೋದ ಜೀವಾತ್ಮ ಪರಮಾತ್ಮನಲ್ಲಿ ಗೌರವಾನ್ವಿತವಾಗುತ್ತದೆ. ಅನ್ಯಥಾ ಅದು ಅಲ್ಲಿ ದುಃಖವನ್ನನುಭವಿಸಬೇಕಾಗುತ್ತದೆ. ಸಿಕ್ಖ್ ಧರ್ಮದ ಪ್ರಕಾರ ಆತ್ಮಕ್ಕೆ ಸರ್ವಶಕ್ತವಾದಂತಹ ಗುಣವಿಲ್ಲ. ಇದು ಸ್ಥೂಲ ತತ್ವಗಳಿಂದಾವೃತವಾಗಿರುತ್ತದೆ. ಕಾಲ ಮತ್ತು ಸ್ಥಾನದ ದೃಷ್ಟಿಯಿಂದ ಒಂದು ಸ್ಥಳದಲ್ಲಿ ಇದು ನೆಲೆಗೊಂಡಿರುವುದಿಲ್ಲ. ಆತ್ಮ ಮತ್ತು ಪರಮಾತ್ಮನ ಮಧ್ಯೆ ತ್ರಿವಿಧ ಮಲಗಳು

ಇರುವುದರಿಂದ, ಆತ್ಮ ಮತ್ತು ಪರಮಾತ್ಮನ ಮಧ್ಯೆ ಭೇದವಿದೆ. ಇವು ದೂರಾದಾಗ ಆತ್ಮ ಪರಮಾತ್ಮ ಏಕಾಕಾರ ಸಾಧ್ಯವಾಗುತ್ತದೆ. ಜೀವಾತ್ಮಕ್ಕೆ ಆರು ಮಿತಿಗಳಿವೆ. ಅದು ಮಾಯೆ (ಪರಿವರ್ತನೆ), ಕಲೆ (ಸೃಜನ್), ವಿದ್ಯೆ (ಜ್ಞಾನ), ರಾಗ (ಇಚ್ಛೆ), ಕಾಲ (ಸಮಯ), ನಿಯತಿ (ದಿಕ್ಕುಸ್ಥಾನ) ಎಂಬ ಮಿತಿಗಳಿಂದ ಆವೃತವಾಗಿದೆ. ಪರಮಾತ್ಮ ಈ ಆರು ಗುಣಗಳ ಮಾಲೀಕನಾಗಿದ್ದಾನೆ. ಆದರೆ ಈ ಆರು ಗುಣಗಳು ಮನುಷ್ಯನನ್ನು ದುರ್ಬಲಗೊಳಿಸುತ್ತವೆ. ಶರಣರಲ್ಲಿ ಆತ್ಮ ಪರಮಾತ್ಮನ ಮಧ್ಯೆ ತ್ರಿವಿಧ ಮಾಯಾಮಲಗಳಿರುವಂತೆ ಸಿಕ್ಖರಲ್ಲಿ ಆತ್ಮ ಪರಮಾತ್ಮನ ಮಧ್ಯೆ ಈ ಮೇಲಿನ ಮಿತಿಗಳಿವೆ. ಶರಣ ತ್ರಿವಿಧ ಮಲಗಳನ್ನು ದಾಟಬೇಕು, ಸಿಕ್ಖ ಈ ಮಿತಿಗಳನ್ನು ದಾಟಬೇಕು.

ಆತ್ಮ ಸಿಕ್ಖ ಧರ್ಮದಲ್ಲಿ ಜೀವಾತ್ಮನಿಗೆ ಗುರುಮುಖ್ ಮತ್ತು ಮನ್‌ಮುಖ್ ಎಂಬ ಎರಡು ರೂಪಗಳಿವೆ. ಗುರುಮುಖ್‌ದಲ್ಲಿ ಮನುಷ್ಯ ಶರೀರ ರೂಪದಲ್ಲಿದ್ದರೂ ಆತನ ಮನಸ್ಸು ಸದಾ ಬ್ರಹ್ಮನಲ್ಲಿ ಲೀನವಾಗಿರುತ್ತದೆ. ಆತ ಮುಕ್ತಾವಸ್ಥೆಯನ್ನು ಪಡೆದುಕೊಂಡು 'ಅಕಾಲ ಪುರುಷ'ನಲ್ಲಿ ಏಕಾಕಾರಗೊಳ್ಳುತ್ತಾನೆ. 'ಮನಮುಖ್' ಮನುಷ್ಯ ಮಾಯೆಯಲ್ಲಿ ಮುಳುಗಿ ಸಾಂಸಾರಿಕ ಆವಾಗಮನದ ಕಷ್ಟಕೋಟಲೆಗಳನ್ನು ಅನುಭವಿಸುತ್ತಾನೆ.

**ಆ) ಪರಮಾತ್ಮ :** ಬಸವಣ್ಣ ಮತ್ತು ಗುರುನಾನಕರು ಪರಮಾತ್ಮನನ್ನು ಕುರಿತಂತೆ ಮಾಡಿರುವ ಚಿಂತನೆ ಸಮಾಂತರವಾಗಿದೆ. ಇವರ ಪರಮಾತ್ಮ ನಿರ್ಗುಣ ಸ್ವರೂಪಿ. ಹಾಗೆ ನೋಡಿದರೆ ಪರಮಾತ್ಮನನ್ನು ಸಗುಣ ಸವಿಶೇಷ, ನಿರ್ಗುಣ ನಿರ್ವಿಶೇಷ ಎಂದು ವರ್ಣಿಸಲಾಗಿದ್ದು, ಸವಿಶೇಷ ಬ್ರಹ್ಮ ಗುಣವಿಶೇಷ ಉಪಾಧಿಗಳಿಂದ ವಿಭೂಷಿತ ನಾಗಿರುತ್ತಾನೆ. ಆದರೆ ನಿರ್ಗುಣನಿಗೆ ಯಾವ ಗುಣವಿಶೇಷ ಉಪಾಧಿಗಳಿಲ್ಲ. ಅಂದಾಕ್ಷಣಕ್ಕೆ ನಿರ್ಗುಣ ಎಂದರೆ ಗುಣರಹಿತನಲ್ಲ. ಗುಣಾತೀತ, ವರ್ಣಾನಾತೀತ, ಇಂದ್ರಿಯಗೋಚರಕ್ಕೆ ಅತೀತ, ರೂಪಾಕಾರಾತೀತ, ಬಸವಣ್ಣ ಮತ್ತು ನಾನಕರು ಇಂತಹ ನಿರಾಕಾರ ತತ್ವವನ್ನು ಆರಾಧಿಸಿದರು. ಮೂರ್ತಿಪೂಜೆಯನ್ನು ವಿರೋಧಿಸಿದರು.

ಬಸವಾದಿ ಶರಣರು ಪರಮಾತ್ಮನನ್ನು ನಿರಾಕಾರ ನಿರಂಜನರೆಂದೇ ಪರಿಭಾವಿಸುತ್ತಾರೆ. ಅಲ್ಲಮ ಹೇಳುವಂತೆ ಪರಮಾತ್ಮ ಚರಾಚರ ಜಗತ್ತಿನಲ್ಲಿ 'ಇದ್ದೂ ಇಲ್ಲ' ದಂತಿದ್ದಾನೆ. ಅಲ್ಲಮನ ಪರಮಾತ್ಮ ಹೀಗಿದ್ದಾನೆ –

ನೆಲದ ಮರೆಯ ನಿಧಾನದಂತೆ
ಮುಗಿಲ ಮರೆಯಲಡಗಿದ ಮಿಂಚಿನಂತೆ
ಬಯಲ ಮರೆಯಲಡಗಿದ ಮರೀಚಿಕೆಯಂತೆ
ಕಂಗಳ ಮರೆಯಲಡಗಿದ ಬೆಳಗಿನಂತೆ - ಗುಹೇಶ್ವರ ನಿಮ್ಮ ನಿಲುವು.



ಬಸವಣ್ಣನವರೂ ನಿರಾಕಾರತತ್ವವನ್ನು ಇನ್ನಿಲ್ಲದಂತೆ ವರ್ಣಿಸಿದ್ದಾರೆ:

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ.
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ !
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ !

ಸಿಕ್ಖ ಧರ್ಮ ಸಹ ಪರಮಾತ್ಮನನ್ನು ನಿರ್ಗುಣ, ನಿರಾಕಾರ ನಿರೂಪಾಧಿಕವಾಗಿಯೇ ಪ್ರತಿಪಾದಿಸುತ್ತದೆ. 'ಗುರು ಗ್ರಂಥಸಾಹೇಬ್'ನಲ್ಲಿ ಪರಮಾತ್ಮನನ್ನು ನಿರಾಕಾರ ಎಂದು ವರ್ಣಿಸಲಾಗಿದೆ. ಈ ಪರಮಾತ್ಮನಿಗೆ ಯಾವುದೇ ಹೆಸರಿಲ್ಲ. ಈ ಪರಮಾತ್ಮ ಯಾವುದೇ ಅವತಾರಪುರುಷನಂತೆ ವರ್ಣಿತನಾಗಿಲ್ಲ. ಇಲ್ಲಿ ಪರಮಾತ್ಮನ ನಿಜ ಸ್ವರೂಪದ ವರ್ಣನೆ ಇದೆ. ಗುರು ಅರ್ಜುನ್‌ದೇವ್ ಹೇಳುವಂತೆ ಪರಮಾತ್ಮ ಹೀಗಿದ್ದಾನೆ:

ನ ಸಂಖಂ ನ ಚಕ್ರಂ ನ ಗದಾ ನ ಸಿಆಮಂ|
ಅರಚರಜ ರೂಪಂ ರಹಂತ್ ಜನಮಂ|
ನೇತಿ ನೇತಿ ಕಂಥತಿ ಬೇದಾ |
ಊಚಮೂಚ ಅಪಾರ ಗೋಬಿಂದಹ|
ಬಸಂತಿ ಸಾಥ್ ರಿದಯಂ ಅಚುತ|
ಭುಝಂತಿ ನಾನಕ್ ಬಡಭಾಗೀಅಹ||

ಪರಮಾತ್ಮ ಶಂಖ, ಚಕ್ರ, ಗದೆ ಅಥವಾ ಶ್ಯಾಮ ವರ್ಣದಲ್ಲಿಲ್ಲ. ಆತ ಆಶ್ಚರ್ಯರೂಪ ಮತ್ತು ಯೋನಿರಹಿತನಾಗಿದ್ದಾನೆ. ವೇದಗಳು ಅವನನ್ನು ನೇತಿ ನೇತಿ ಎಂದಿವೆ. ಆತ ಅಪಾರ ಹಾಗೂ ಎತ್ತರಕ್ಕಿಂತ ಎತ್ತರದಲ್ಲಿದ್ದಾನೆ. ಆತ ಸಾಧು ಸಂತರ ಹೃದಯದಲ್ಲಿ ಅಚ್ಯುತರೂಪದಲ್ಲಿ ಶೋಭಾಯಮಾನವಾಗಿದ್ದಾನೆ. ಗುರುನಾನಕ್‌ದೇವರ ಅಭಿಪ್ರಾಯದಂತೆ ಭಾಗ್ಯಶಾಲಿ ಮಾತ್ರ ಅವನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬಲ್ಲ.

ಇನ್ನೊಂದು ವಚನದಲ್ಲಿ ಪರಮಾತ್ಮನ ನಿರಾಕಾರ ರೂಪವನ್ನು ಅರ್ಜನ್‌ದೇವ್ ಹೀಗೆ ವರ್ಣಿಸಿದ್ದಾರೆ :

ಹೆ ಅಚುತ್ ಹೆ ಪಾರಬ್ರಹ್ಮ ಅಬಿನಾಸೀ ಅಘುನಾಸ್ |
ಹೆ ಪೂರನ್ ಹೆ ಸರಬಮೈ ದುಃಖ್ ಭಂಜನ್ ಗುಣತಾಸ್ |
ಹೇ ಸಂಗೀ ಹೆ ನಿರಂಕಾರ್ ಹೆ ನಿರಗುಣ್ ಸಭ್ ಟೇಕ್ |
ಹೆ ಗೋಬಿಂದ್ ಹೆ ಗುಣ್ ನಿಧಾನ್ ಜಾ ಕೈ ಸದಾ ಬಿಬೇಕ್|

ಸದಾ ಅಚಲನಾಗಿರುವ ಹೇ ಪರಬ್ರಹ್ಮನೇ, ನೀನು ಅವಿನಾಶಿ, ಪಾಪಗಳನ್ನು ನಾಶಮಾಡುವವನು. ಪೂರ್ಣತ್ವವನ್ನು ಪಡೆದಿರುವ ಪ್ರಭುವೇ, ನೀನು ಸರ್ವವ್ಯಾಪಿ, ದುಃಖಗಳನ್ನು ನಾಶ ಮಾಡುವವನು, ಗುಣಗಳ ಭಂಡಾರ ನೀನು. ಸರ್ವರಿಗೂ ಸಹಾಯಕ ನೀನು. ಆಕಾರರಹಿತ ನೀನು, ತ್ರಿಗುಣಾತೀತ ನೀನು. ನೀನು ಎಲ್ಲರ ಪರಿಪಾಲಕ, ಪೃಥ್ವಿಯನ್ನು ಆವರಿಸಿರುವ ನೀನು ಗುಣಗಳ ಆಗರ. ನಿನ್ನಲ್ಲಿ ಎಲ್ಲ ಬಗೆಯ ವಿವೇಕವಿದೆ.

ನಾನಕರು ಸಹ ತಮ್ಮ ಅನೇಕ ವಚನಗಳಲ್ಲಿ ನಿರಾಕಾರ ಪರಮಾತ್ಮನ ಅನಂತತೆಯನ್ನು ಮತ್ತು ಸರ್ವವ್ಯಾಪಕತೆಯನ್ನು ಇನ್ನಿಲ್ಲದಂತೆ ವರ್ಣಿಸಿದ್ದಾರೆ.

ಹೀಗೆ ಬಸವಾದಿ ಶರಣರ ಮತ್ತು ಸಿಕ್ಖ್ ಧರ್ಮಾನುಯಾಯಿಗಳ ದೃಷ್ಟಿಯಲ್ಲಿ ಪರಮಾತ್ಮನ ಗುಣಗಾನ ಒಂದೇ ರೀತಿಯದಾಗಿದೆ. ಇವರು ದೇಹದಲ್ಲೇ ದೇವಾಲಯ ವನ್ನು ಕಂಡವರು. ಪರಮಾತ್ಮನನ್ನು ಘಟಘಟವಾಸಿ ಎಂದು ಭಾವಿಸಿದವರು. ದೇಹವೇ ದೇವಾಲಯ ಎಂದವರು. ಮೂರ್ತಿಪೂಜೆಯನ್ನು ವಿರೋಧಿಸಿದವರು.

**ಇ) ಜಗತ್ತು :** ಜಗತ್ತನ್ನು ಕುರಿತಂತೆ ಬಸವಣ್ಣ ಮತ್ತು ಇತರ ಶರಣರು ಹಾಗೂ ಗುರುನಾನಕ್ ಮತ್ತು ಇತರೆ ಗುರುಗಳು ನಡೆಸಿರುವ ಚಿಂತನೆಯು ಸಮಾಂತರವಾಗಿದೆ. ಶರಣರು ಮತ್ತು ಸಿಕ್ಖರು ಜಗತ್ತನ್ನು ಮಿಥ್ಯೆ ಎಂದು ಭಾವಿಸುವುದಿಲ್ಲ. ಬದಲಾಗಿ ಸತ್ಯವೆಂದು ಭಾವಿಸುತ್ತಾರೆ. ಈ ಜಗತ್ತಿನ ಎಲ್ಲ ದೋಷಗಳನ್ನು ಮತ್ತು ಸಮಸ್ಯೆಗಳನ್ನು ನಿರಾಕರಿಸದೆ ಅವುಗಳೊಡನೆ ನಿತ್ಯ ಸಂಘರ್ಷಿಸುವುದು ಶರಣರ ವೈಶಿಷ್ಟ್ಯವಾಗಿದೆ. ಜಗತ್ತನ್ನು ಕುರಿತಂತೆ ಶರಣರ ಮತ್ತು ಸಿಕ್ಖರ ದೃಷ್ಟಿ ಸ್ವೀಕಾರಾತ್ಮಕವಾಗಿದ್ದು ಬಸವಣ್ಣನವರು ಈ ಜಗತ್ತನ್ನು 'ಕರ್ತಾರನ ಕಮ್ಮಟ' ಎಂದಿರುವುದು ಜಗತ್ತಿನ ಸೂಕ್ತವಾದ ವಿಶ್ಲೇಷಣೆಯಾಗಿದೆ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುತ್ತಾರೆ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲುವುದಿಲ್ಲ ಎಂದು ಅಭಿಪ್ರಾಯಪಡುತ್ತಾರೆ.

> ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
> ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
> ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು
> ಕೂಡಲಸಂಗಮದೇವಾ.

ಪರಮಾತ್ಮ ಈ ಜಗತ್ತನ್ನು ತನ್ನ ವಿನೋದಕ್ಕೆ ಸೃಷ್ಟಿಸಿದ. ಅದಕ್ಕೆ ಮಾಯಾ ಬಂಧನಗಳನ್ನು ಸುತ್ತಿದ ಎಂದು ಅಕ್ಕಮಹಾದೇವಿ ಹೇಳಿದ್ದಾರೆ:

> ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲ ಜಗತ್ತ
> ತನ್ನ ವಿನೋದಕ್ಕೆ ತಾನೇ ಸುತ್ತಿದನದಕ್ಕೆ ಸಕಲ ಪ್ರಪಂಚವ
> ತನ್ನ ವಿನೋದಕ್ಕೆ ತಾನೆ ತಿರುಗಿಸಿದನಂತ ಭವದುಃಖಗಳಲ್ಲಿ



ಹೀಗೆ ಶರಣ 'ಜಗತ್ತು' ಸತ್ಯ. ಈ ಜಗತ್ತಿನಲ್ಲಿ ಸಾರ್ಥಕವಾಗಿ ಬದುಕುವುದು ಅಷ್ಟೇ ಅನಿವಾರ್ಯ.

ಗುರುನಾನಕರ ಸಿಕ್ಖ್ ಧರ್ಮ ಸಹ ಜಗತ್ತನ್ನು ಸತ್ಯವೆಂದು ನಂಬುತ್ತದೆ. ಜಗತ್ತು ಪರಮಾತ್ಮನ ಶರೀರವಾಗಿರುವುದರಿಂದ ಇದು ಸತ್ಯ. ಗುರುವಾಣಿಯಲ್ಲಿ ಹೇಳಿರುವಂತೆ - "ಇಹು ಜಗು ಸಚೆ ಕೀ ಹೈ ಕೊಠಡೀ. ಸಚೆ ಕಾ ವಿಚಿ ವಾಸ್". ಅಂದರೆ ಈ ಜಗತ್ತು ಸತ್ಯ. ಗುರುವಾಣಿಯಲ್ಲಿ ಈ ಸೃಷ್ಟಿಗೆ ಜಗತ್ತು ಎಂಬ ಶಬ್ದದ ಪ್ರಯೋಗವಾಗಿದೆ. ಈ ಜಗತ್ತು ಪರಮಾತ್ಮನ ಶರೀರವಾಗಿರುವುದರಿಂದ ಇದು ಸತ್ಯ. ಚಿತ್ ಸ್ವರೂಪಿ ಜೀವ ಅಚಿತ್ ಸ್ವರೂಪಿ ಜಡಸೃಷ್ಟಿಗಳೆರಡರ ಗಣನೆ ಈ ಜಗತ್ತಿನಲ್ಲಿ ಆಗುತ್ತದೆ. ಈ ಜಗತ್ತಿನ ರಚನೆಗೆ ಪರಮಾತ್ಮನಿಗೆ ಯಾವ ವಸ್ತುವಿನ ಆವಶ್ಯಕತೆ ಇರುವುದಿಲ್ಲ. ಈ ಜಗತ್ತನ್ನು ನಿರ್ಮಿಸುವವನು ಮತ್ತು ಪೋಷಿಸುವವನು ಆ ಪರಮಾತ್ಮನೇ. ಈ ಜಗತ್ತಿನಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುತ್ತಾನೆ.

(ಮುಂದುವರೆಯುವುದು)

> ಜಂಗಮದ ಮನ – ಭಾವದಲ್ಲಿ ಭಕ್ತನೆ ಭೃತ್ಯನೆಂದು,
> ಭಕ್ತನ ಮನ – ಭಾವದಲ್ಲಿ ಜಂಗಮವೆ ಕರ್ತನೆಂದು ಇದ್ದ ಬಳಿಕ,
> ಬಂದುದು ಬಾರದು ಇದ್ದುದು ಹೋಯಿತ್ತೆಂಬ ಸಂದೇಹವಿಲ್ಲದಿರಬೇಕು.
> ಹೋಯಿತ್ತೆಂಬ ಗುಣವುಳ್ಳನ್ನಕ್ಕ
> ನಿಮಗೆ ದೂರ, ನಿಮ್ಮವರಿಗೆ ಮುನ್ನವೆ ದೂರ !
> ಶಿವಾಚಾರಕ್ಕಲ್ಲಿಂದತ್ತ ದೂರ !
> ಜಂಗಮದ ಹರಿದ ಹರಿವು, ಜಂಗಮದ ನಿಂದ ನಿಲವು,
> ಜಂಗಮದ ಗಳಗರ್ಜನೆ, ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ
> ನೀನಂದೆ ಮೂಗು ಕೊಯ್ಯಿ, ಕೂಡಲಸಂಗಮದೇವಾ !

**- ಬಸವಣ್ಣ**

# ಅಮರಕಲ್ಯಾಣದ ಸ್ಥಾಪಕ: ದಿಗ್ಗಿ ಸಂಗಮನಾಥ

**ಡಾ. ಕೆ. ರವೀಂದ್ರನಾಥ**

**ಯಾ**ದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ದಿಗ್ಗಿ ಸಂಗಮನಾಥ ಅತ್ತ 12ನೇ ಶತಮಾನದ ಕಲ್ಯಾಣದ ಬಸವಣ್ಣನ ಹಾಗೂ ಇತ್ತ 15-16ನೇ ಶತಮಾನದ ಕೊಡೇಕಲ್ಲ ಬಸವಣ್ಣನ ಸಾಂಸ್ಕೃತಿಕ ರಾಯಭಾರಿಯಂತೆ ಬದುಕಿಹೋದವನು. ಅಂದರೆ, ಕಲ್ಯಾಣ ಸಂಸ್ಕೃತಿಯ ಪರಂಪರೆಯನ್ನು ಬೆಳೆಸಿಕೊಂಡು ಹೋದ ಕೊಡೇಕಲ್ಲ ಬಸವಣ್ಣ, ಆತನ ಪತ್ನಿ ನೀಲಮ್ಮ, ಮಗ ರಾಚಪ್ಪಯ್ಯ, ಗುಹೇಶ್ವರಯ್ಯಾ, ಸಂಗಪ್ಪಯ್ಯ ಮುಂದುವರಿದು ಪುತ್ರಸಂತಾನವಾದ ವೀರಸಂಗಪ್ಪಯ್ಯರಲ್ಲದೆ; ನಾಗಾವೀ ಪರಿಸರದ ಗುಂಡಬಸವೇಶ, ಈತನ ಶಿಷ್ಯ ಕಾಲಜ್ಞಾನಿ ಈರಪ್ಪಯ್ಯಾ, ಕಕ್ಕಳಮೇಲಿ ಅಲ್ಲಮಪ್ರಭು, ಸಾಲೋಟಗಿ ಶಿವಯೋಗಿಗಳಲ್ಲದೆ; ಕರ್ನಾಟಕದ ದಕ್ಷಿಣ ಭಾಗದಲ್ಲಿ ಮಂಟೇಸ್ವಾಮಿ ಪರಂಪರೆಯನ್ನು ಬೆಳೆಸಿದ ಮೂಲ ವ್ಯಕ್ತಿ ದಿಗ್ಗಿ ಸಂಗಮನಾಥ.

ಇದುವರೆಗೆ ಸಮಯ ಕಲ್ಯಾಣವೆನಿಸಿದ ಬಸವ ಕಲ್ಯಾಣದ ವಚನಸಾಹಿತ್ಯ, ವಿಜಯಕಲ್ಯಾಣವೆನಿಸಿದ ಹಂಪಿಯ ವಚನಾಗಮ ಸಾಹಿತ್ಯ ಹಾಗೂ ಕಡೆಯಕಲ್ಯಾಣವೆನಿಸಿದ ಕೊಡೇಕಲ್ಲಿನ ವಚನವಾಕ್ಯ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಯಿತೇ ಹೊರತು; ಮಿಕ್ಕೆರಡು ಕಲ್ಯಾಣಗಳಾದ ಅಮರಕಲ್ಯಾಣವೆನಿಸಿದ ದಿಗ್ಗಿ ಮತ್ತು ಧರ್ಮಕಲ್ಯಾಣವೆನಿಸಿದ ನಾಗಾವಿಯ ತತ್ತ್ವಪದ ಸಾಹಿತ್ಯವನ್ನು ಗಮನಿಸಿಯೇ ಇಲ್ಲ. ವಿಶೇಷವಾಗಿ ಅಮರಕಲ್ಯಾಣದ ದಿಗ್ಗಿ ಸಂಗಮನಾಥ, ಧರ್ಮ ಕಲ್ಯಾಣದ ನಾಗಾವಿಯ ಗುಂಡಬಸವೇಶ್ವರರನ್ನು ಕುರಿತು ಅಧ್ಯಯನಗಳು ಪೂರ್ಣಗೊಂಡರೆ ಕರ್ನಾಟಕದ "ಕಲ್ಯಾಣ ಸಂಸ್ಕೃತಿಯ" ಚಾರಿತ್ರಿಕ ಅಧ್ಯಯನ ಪೂರ್ಣಗೊಂಡಂತೆಯಾಗುತ್ತದೆ.

ಕೊಡೇಕಲ್ಲ ಪರಂಪರೆಯಲ್ಲಿ ಬರುವ ಕವಿ ವೀರಸಂಗಪ್ಪಯ್ಯನ "ನಂದಿಯಾಗಮಲೀಲೆ" ಎಂಬ ಕೃತಿ 1700ರಲ್ಲಿ ಪ್ರತಿಗೊಂಡಿರುವ ಕವಿನಾಮವಿಲ್ಲದ "ಗುಂಡಬಸವೇಶ್ವರ ಚರಿತೆ" ಹಾಗೂ ಕೊಡೇಕಲ್ಲ ಬಸವಣ್ಣನ ಸಾಹಿತ್ಯ, ಕೊಡೇಕಲ್ಲ ನೀಲಮ್ಮನ ಸ್ವರವಚನ ಸಾಹಿತ್ಯ, ರಾಚಪ್ಪಯ್ಯನ ಕೃತಿಗಳು, ಮಂಟೇಸ್ವಾಮಿ ಸಾಹಿತ್ಯ ಇವುಗಳ ಉಲ್ಲೇಖ ಹಾಗೂ ಕ್ಷೇತ್ರ ಕಾರ್ಯದ ಮಾಹಿತಿಯ ಸಹಾಯದಿಂದ



ಅಮರಕಲ್ಯಾಣದ ಕರ್ತೃ ದಿಗ್ಗಿ ಸಂಗಮನಾಥ ಎಂಬ ಸಂಗತಿಯನ್ನು ವಿದ್ವಾಂಸರ ಗಮನಕ್ಕೆ ತರುವುದು ಈ ಪ್ರಬಂಧದ ಉದ್ದೇಶವಾಗಿದೆ.

ಒಡನಾಡಿ ಬಂದೆನು ಒಡೆಯ ಸಂಗಮನಾಥನ
ನಡೆವ ಸರ್ಪನ ಹೆಡೆಯೊಳಗಣ ಪದ್ಮದಂತೆ
ಕಡೆಯ ಆಟವು ಬಂತು ಕಲಹಕಾರಣ ಮುಂದೆ
ನುಡಿ ದುಷ್ಟಗಳ ನೋಡಿ ಕುಡಿಮಿಂಚಿನಂತೆ

ಕೊಡೇಕಲ್ಲ ಬಸವಣ್ಣನ ಸ್ವರವಚನದ ಈ ಪದ್ಯ ತನಗೆ ಒಡನಾಡಿಯಾಗಿ ಬಂದ ದಿಗ್ಗಿ ಸಂಗಮನಾಥನನ್ನು ಸ್ಮರಿಸುವುದಾಗಿದೆ. ಮನುಜರ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನು ತುಂಬುವಂತೆ ಸಂಗಮನಾಥ ಕೊಡೇಕಲ್ಲ ಬಸವಣ್ಣನಿಗೆ ವಾಚಸಿದ್ಧಿಯನ್ನು ಕೊಟ್ಟನು.

ಕೊಡೇಕಲ್ಲ ಬಸವಣ್ಣನ ಮಗ ರಾಚಪ್ಪಯ್ಯ ಸುವ್ವಿ ವಚನದಲ್ಲಿ ಸಂಗಮನಾಥ ಐಕ್ಯವೇರಿದ ಜಲದುರ್ಗವನ್ನು ಉಲ್ಲೇಖಿಸುತ್ತಾನೆ.

ದೇವದುರ್ಗ ಮೇಲೆ ದೇವ ಸಿಂಹಾಸನ
ದೇವೇಶ ಬಸವನೊರೆದಿಂದ ಬ್ಯಾಡರ
ಜೀವ ನಮ್ಮೊಳಗೆ ಗೆಲುವುಂಟು

ದಿಗ್ಗಿ ಸಂಗಮನಾಥ ಐಕ್ಯಹೊಂದಿದ್ದು ಇಂದಿನ ಜಲದುರ್ಗ. ಅದನ್ನು ಕವಿ ರಾಚಪ್ಪಯ್ಯ ದೇವದುರ್ಗ ಎಂದು ಕರೆದಿದ್ದಾನೆ. ಈಗಲೂ ಜಲದುರ್ಗದಲ್ಲಿ ಸಂಗಮನಾಥನ ದೇವಸ್ಥಾನವಿದೆ. ಡಾ. ಬಸವಲಿಂಗ ಸೊಪ್ಪಿಮಠ ಅವರು ಕೂಡ ನಮ್ಮ ಕವಿಗಳು ಜಲದುರ್ಗವನ್ನು ದೇವದುರ್ಗವೆಂದು ಕರೆದಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ. ಈಗಲೂ ಸಂಗಮನಾಥನ ಸಮಾಧಿಯೆಂದು ಜಲದುರ್ಗದ ಪೂಜಾರಿಗಳು ಹೇಳುತ್ತಾರೆ. ಹೀಗಾಗಿ ಅಮರಕಲ್ಯಾಣದ ಕರ್ತೃ ದಿಗ್ಗಿ ಸಂಗಮನಾಥನ ಐಕ್ಯಸ್ಥಲ ಜಲದುರ್ಗವೆಂಬುದು ಇತಿಹಾಸ ಸೇರಬೇಕಾದ ಪ್ರಮುಖ ಒಂದು ಸಂಗತಿ.

ಕರ್ನಾಟಕದಲ್ಲಿ ಕಟ್ಟುತ್ತಾ ಬಂದ ಕಲ್ಯಾಣಗಳನ್ನು ಕುರಿತು ಬಸವಕಲ್ಯಾಣ (ಸಮಯಕಲ್ಯಾಣ), ಹಂಪಿ (ವಿಜಯಕಲ್ಯಾಣ), ದಿಗ್ಗಿ (ಅಮರಕಲ್ಯಾಣ), ನಾಗಾವಿ (ಧರ್ಮಕಲ್ಯಾಣ) ಮತ್ತು ಕೊಡೇಕಲ್ಲ (ಕಡೆಯಕಲ್ಯಾಣ) ಎಂಬುದು ಇದುವರೆಗೆ ಕಂಡುಕೊಂಡ ಸತ್ಯವಾಗಿದೆ. ಆದರೆ ಕೊಡೇಕಲ್ಲನ್ನು ಅಮರಕಲ್ಯಾಣವೆಂದು ಭಾವಿಸಿ, ಧರ್ಮಕಲ್ಯಾಣವನ್ನು ಗುರುತಿಸದೇ ಹೋಗಿರುವ ಕೆಲ ತಪ್ಪು ಗ್ರಹಿಕೆಗಳಿಗೆ ಇಂಬು ದೊರೆತಿದೆ. ದಿಗ್ಗಿ ಅಮರಕಲ್ಯಾಣವೆಂಬುದಕ್ಕೆ ಗುಂಡಬಸವೇಶ್ವರ ಚರಿತ್ರೆಯ ಈ ಕೆಳಗಿನ ಪದ್ಯ ಹೀಗೆ ತಿಳಿಸುತ್ತದೆ.

ಇಳೆಯೊಳು ಹಳೆಯ ಸಗರವೆಂಬ ಊರಲ್ಲಿ
ಬೆಳಗುಳ್ಳ ಗುರು ಜನಿಸಿದನು
ಕೇಳು ನೀ ಬಸವಣ್ಣ ಹೇಳುವ ಮಾತನ್ನು
ಬಾಳಲೋಚನ ಭಕ್ತನೊಬ್ಬ
ಹಳೆಯ ಸಗರದ ಹೊರಗೆ ಮಠ ಕಟ್ಟಿ ತಾ
ಇಳೆಯೊಳು ಅಮರಕಲ್ಯಾಣವೆನಿಸಿ

ಧರ್ಮಕಲ್ಯಾಣದ ಸಂಸ್ಥಾಪಕನಾದ ಗುಂಡಬಸವೇಶನಿಗೆ ತಿಪ್ಪಯ್ಯನು ಹೇಳುವ ಈ ಮೇಲಿನ ಪದ್ಯದಲ್ಲಿಯ 'ಹಳೆಯ ಸಗರ'ವೆಂದರೆ ಗುಲಬರ್ಗಾ ಜಿಲ್ಲಾ ತಾಲ್ಲೂಕು ಕೇಂದ್ರವಾಗಿರುವ 'ಶಹಾಪುರ'ದ ಹೊರಗೆ ಅಂದರೆ 'ದಿಗ್ಗಿಯಲ್ಲಿ' ಮಠ ಕಟ್ಟಿಸಿ ಅದನ್ನು ಭೂಮಂಡಲದಲ್ಲಿ ಅಮರಕಲ್ಯಾಣವೆನಿಸಿದನೆಂದು ತಿಳಿದುಬರುತ್ತದೆ. ಹಾಗೆಯೇ ಅಮರಗನ್ನಡ ಲಿಪಿಯನ್ನು ಶೋಧಿಸಿದ್ದು; ಅಮರಕಲ್ಯಾಣದ ಬಹು ದೊಡ್ಡ ಕೊಡುಗೆ. ಸಂಗಮನಾಥ ತನ್ನ ಕಲ್ಯಾಣದ ಅಮರಗನ್ನಡ ಲಿಪಿಯನ್ನು ಕೊಡೇಕಲ್ಲ ಬಸವಣ್ಣನಿಗೆ ತಿಳಿಸಿಕೊಟ್ಟನೆಂಬ ಸಂಗತಿ ಕೊಡೇಕಲ್ಲ ವಚನವಾಕ್ಯದಿಂದ ತಿಳಿದುಬರುತ್ತದೆ.

ಹನ್ನೊಂದ ಅಮರಗನ್ನಡದ ಲಿಪಿ
ಉನ್ನತೋತ್ತರ ಉದಯ ಕಾಲದಿ
ನಮ್ಮನರಿತವರಿಲ್ಲಯ್ಯ ಬಸವ ಕೇಳೆಂದಾ||

ಈ ಅಂಶಗಳಿಗೆ ಪೂರಕವಾಗಿ ದಿಗ್ಗಿ ಸಂಗಮನಾಥನ ದೇವಾಲಯದ ಗುಡ್ಡದ ಮೇಲೆ ಸುಮಾರು 15-20 ಕಿ.ಮೀ. ವ್ಯಾಪ್ತಿಯಲ್ಲಿ "ಮೇಲುಗಿರಿ ಪರ್ವತ", ನೀಲಮ್ಮನ ಬಾವಿ, ನೀಲಂಕಾರ ಗುಡಿ ಮತ್ತು ಅಮರಕಲ್ಯಾಣವೆಂಬ ಪ್ರದೇಶಗಳಿರುವುದನ್ನು ಡಾ. ಎಂ.ಎಂ. ಕಲಬುರ್ಗಿ, ಲಿಂಗಣ್ಣ ಸತ್ಯಂಪೇಟೆ ಹಾಗೂ ನಾನು ಸ್ವತಃ ಕ್ಷೇತ್ರಕಾರ್ಯದ ಮೂಲಕ ಮನವರಿಕೆ ಮಾಡಿಕೊಂಡಿದ್ದೇವೆ. ಈ ಕಾರಣದಿಂದ ಇದುವರೆಗೆ ವಿದ್ವಾಂಸರು ಅಭಿಪ್ರಾಯಪಟ್ಟಂತೆ ಕೊಡೇಕಲ್ಲ ಅಮರ ಕಲ್ಯಾಣವಲ್ಲ! ಸಗರನಾಡಿನ ದಿಗ್ಗಿ ಅಮರಕಲ್ಯಾಣವೆಂಬುದು ಇತಿಹಾಸ ಸೇರಬೇಕಾದ ಇನ್ನೊಂದು ಸಂಗತಿ.

ಶರಣರದು ವ್ಯಕ್ತಿ ಮತ್ತು ಸಮಷ್ಟಿ ಉದ್ಧಾರದ ನಿಲುವಾಗಿತ್ತು. ಇವುಗಳ ಜೊತೆಗೆ ತಮ್ಮ ಆತ್ಮನಿರೀಕ್ಷಣೆಗಾಗಿ ಅಥವಾ ಆತ್ಯಕಲ್ಯಾಣಕ್ಕಾಗಿ 'ಗವಿ ಸಂಪ್ರದಾಯ' ವನ್ನು ಹುಟ್ಟುಹಾಕಿದಂತೆ ತೋರುತ್ತದೆ. ಇದು ನಿಜವೆನ್ನುವಂತೆ ಈಗಲೂ ಕೆಲವು ಶರಣರ ವಾಸಸ್ಥಳಗಳೆಂದು ತೋರಿಸುವ ಗವಿಗಳು ಬಸವಕಲ್ಯಾಣದಲ್ಲಿವೆ. ಅದೇ ರೀತಿ ಹಂಪಿಯ ನೂರೊಂದು ವಿರಕ್ತರಿಗೆ ಒಂದೊಂದು ಗವಿಗಳಿರಬಹುದೆಂದೂ ದಿ|| ವಿ. ಶಿವಾನಂದ ಅವರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಚಾಮರಸನ ಗವಿಯೆಂಬುದನ್ನು ಡಾ. ಚಿದಾನಂದಮೂರ್ತಿಯವರು ಶೋಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯಕಲ್ಯಾಣ



ವೆನಿಸಿದ ಹಂಪಿ ಶರಣರ ಗವಿಸಂಪ್ರದಾಯವನ್ನು ಅನುಷ್ಠಾನಕ್ಕೆ ತಂದಿದೆ. ಅದೇ ರೀತಿ ಅಮರಕಲ್ಯಾಣವೆನಿಸಿದ ದಿಗ್ಗಿಯ ಸಂಗಮನಾಥ ಈತನ ಗುರು ಪರಮಾನಂದರ ಸ್ಥಳ ಬಿ. ಹೆಬ್ಬಾಳ, ಕೊಡೇಕಲ್ಲ ಬಸವೇಶ್ವರನಲ್ಲಿ ಗವಿಗಳಿರುವುದನ್ನು ನೋಡಬಹುದು.

ಗುಂಡಬಸವೇಶನ ಚರಿತೆಯಲ್ಲಿ ಉಪ್ಪಾರ ಗುಂಡ ಬಸವೇಶನನ್ನು ಗವಿ ಎಲ್ಲಿ ಮಾಡಲೆಂದು ಪ್ರಸ್ತಾಪಿಸುತ್ತಾನೆ.

ಎಲ್ಲಿ ಮಾಡಲಿ ಗವಿಯನು ಎಂದೆನುತಲಿ
ಮೆಲ್ಲನೆ ಕೇಳಿದುಪ್ಪಾರ
ಸೊಲ್ಲಿಸಿದನು ತಾನು ತಿಪ್ಪಣ್ಣಯ್ಯಗಳೆ
ಡದಲ್ಲಿ ಬಿಡಾರ ಮಾಡೆನು ತಾ||

ಈ ಮೊದಲು ಮರಣಹೊಂದಿದ ತಿಪ್ಪಣ್ಣನ ಎಡದಲ್ಲಿ ಗವಿಯನ್ನು ಮಾಡಲು ಗುಂಡಬಸವೇಶ ತಿಳಿಸುವುದನ್ನು ನೋಡಿದರೆ ಮುಂದಿನ ಧರ್ಮಕಲ್ಯಾಣವು ಗವಿಸಂಪ್ರದಾಯವನ್ನು ಮುಂದುವರಿಸಿದಂತೆ ತೋರುತ್ತದೆ. ದಿಗ್ಗಿ ಸಂಗಮನಾಥನನ್ನು ಹೊಗಳುವ ನಂದಿಯಾಗಮ ರೀತಿಯ ಪದ್ಯವೊಂದು ಹೀಗಿದೆ:

ಎಂದ ಮಾತಿಗೆ ಗವಿಯ ಕವಾಟ
ಹೊಂದಿಸಿದ ಶಿಲೆ ಕಡೆಗೆ ಆಗಲು
ಬಂದನಾಗಲೇ ಸಂಗಮೇಶ ಬಸವ ದರುಶನಕೆ!

**ಮತ್ತು**

ಈ ಪರಿಯಲೀ ಸ್ತುತಿಯ ಮಾಡುತ
ಆ ಪರಂಜ್ಯೋತಿ ದಿಗ್ಗಿ ಗವಿಯೊಳು

ಎಂಬ ಉಲ್ಲೇಖಗಳಿಂದ ಬಸವಕಲ್ಯಾಣದ ಶರಣರ ಗವಿಸಂಪ್ರದಾಯವನ್ನು ದಿಗ್ಗಿ ಸಂಗಮನಾಥ ತನ್ನ ಅಮರ ಕಲ್ಯಾಣದಲ್ಲಿ ಅನುಷ್ಠಾನಕ್ಕೆ ತಂದ ಇದನ್ನು ಮುಂದೆ ಧರ್ಮಕಲ್ಯಾಣದ ಗುಂಡಬಸವಣ್ಣ, ಕಡೆಯ ಕಲ್ಯಾಣದ ಕೊಡೇಕಲ್ಲ ಬಸವಣ್ಣರು ಮುಂದುವರಿಸಿದರೆಂಬುದು ಇತಿಹಾಸ ಸೇರಬೇಕಾದ ಮಗದೊಂದು ಸಂಗತಿ.

ಕರ್ನಾಟಕದ ವಚನ ಚಳವಳಿಯ ಆದ್ಯರೆನಿಸಿದ ಬಸವಕಲ್ಯಾಣದ ಅದರಲ್ಲೂ ಬಸವಣ್ಣನ ಆರಾಧ್ಯದೈವವಾದ ಸಂಗಮನಾಥನ ಹೆಸರನ್ನು ಧಾರಣ ಮಾಡಿಕೊಂಡ ದಿಗ್ಗಿ ಸಂಗಮನಾಥ ಅಮರಕಲ್ಯಾಣದ ಸಂಸ್ಥಾಪಕ, ಅಮರಗನ್ನಡ ಲಿಪಿಶೋಧಕ ಮತ್ತು ನಾಥ, ಆರೂಢ, ಅವಧೂತಗಳನ್ನೊಳಗೊಂಡ ಸಮ್ಮಿಶ್ರ ಪಂಥವೊಂದನ್ನು ಹುಟ್ಟುಹಾಕಿದ ಚಾರಿತ್ರಿಕ ವ್ಯಕ್ತಿ.

* *

### ಧರ್ಮಕಲ್ಯಾಣದ ಸ್ಥಾಪಕ: ಗುಂಡಬಸವೇಶ

ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲೂಕಿನ ನಾಗಾವಿ 1058ರ 1ನೇ ಸೋಮೇಶ್ವರನ ಕಾಲದಲ್ಲಿ ಘಟಿಕಾಸ್ಥಾನವಾಗಿತ್ತೆಂಬುದು ವಿದ್ವಾಂಸರಿಗೆ ತಿಳಿದ ಸಂಗತಿಯಾಗಿದೆ. ಆದರೆ, ಇತ್ತೀಚೆಗೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಿಂದ ಪ್ರಕಟವಾದ 'ಗುಂಡಬಸವೇಶ್ವರ ಚರಿತ್ರೆ' (ಸಂಪಾದಕರು: ಡಾ. ಎಂ.ಎಂ. ಕಲಬುರ್ಗಿ ಮತ್ತು ಸಂಗಪ್ಪಯ್ಯಸ್ವಾಮಿ)ಯಿಂದ ನಾಗಾವಿ 'ಧರ್ಮಕಲ್ಯಾಣ'ವಾಗಿ ಮೆರೆದ ಪ್ರದೇಶ, ಅದರ ಸ್ಥಾಪಕ ಗುಂಡಬಸವೇಶ ಎಂಬುದು ಗಮನಿಸಬೇಕಾದ ಹಾಗೂ ಇತಿಹಾಸದಲ್ಲಿ ದಾಖಲಾಗಬೇಕಾದ ಹೊಸ ಸಂಗತಿ.

ಸಂಗನಬಸವನ ಅಕ್ಕ 'ನಾಗಾಯೆ' ಎಂಬುವವಳು ಆಳಿದ ಕಾರಣ ಆ ಗ್ರಾಮಕ್ಕೆ 'ನಾಗಾವಿ' ಹೆಸರು ಬಂದುದಾಗಿ ಸಂಧಿ 2, ಪದ್ಯ 2 ರಿಂದ ತಿಳಿದುಬರುತ್ತದೆ.

ಸಂಗನ ಬಸವನ ಅಕ್ಕ ನಾಗಾಯೆಯೆಂಬ  
ಅಂಗನೆಯಾಳಿದ ಗ್ರಾಮದಲಿ|  
ಹಿಂಗದೆ ಪೂರ್ವ ಭಾಗದಲಿ ಕೊಳಗನೊಳು  
ಸಂಗಮೇಶ್ವರ ನೆಲಸಿಹನು|

ಇದೇ ಕಾವ್ಯದ 2ನೇ ಸಂಧಿ ಆರಂಭವಾಗುವುದು ನಾಗಾವಿಯ ಭೌಗೋಳಿಕ ವರ್ಣನೆಯಿಂದ.

ಸಪ್ತಯೋಜನೆನವು ಕಲ್ಯಾಣಕೆ ದಕ್ಷಿಣ ಭಾಗ  
ಇಪ್ಪುದು ಸವಾಯೋಜನವು|  
ತಪ್ಪದೇ ದಂಡಗುಂಡಕೆ ಉತ್ತರದೊಳು  
ಅಪ್ಪ ನೆನೆದ ಬಸವೇಶ|

ಧರ್ಮಕಲ್ಯಾಣಕ್ಕೆ (ನಾಗಾವಿಗೆ) ದಕ್ಷಿಣ ಭಾಗದ ಏಳು ಯೋಜನಕ್ಕೆ ಮತ್ತು ದಂಡಗುಂಡ ಗ್ರಾಮದಿಂದ ಒಂದು ಕಾಲು ಯೋಜನಾ ಉತ್ತರಕ್ಕೆ ಗುಂಡಬಸವೇಶ ನೆಲಸಿದ್ದಾನೆ. ಮುಂದುವರಿದು ಇಲ್ಲಿಂದ ಮೂರು ಯೋಜನಗಳಲ್ಲಿ ಕೂಡಲ ಸಂಗಮವಿದೆ.

ಪಶ್ಚಿಮಯಕಾಂಬರಕೆ ತ್ರಿಯೋಜನದಾರಿ  
ಮುಕ್ಕಣ್ಣ ಕೂಡಲ ಸಂಗಮಗೆ |  
ಸಾಕ್ಷಾತ್ ಗುರು ಜನಿಸಿದ ಗಾವುಧರೆಯೊಳು  
ದಿಕ್ಕಲ್ಲಿ ಈಶಾನ್ಯ ಕೋಣೆಯಲಿ||

ಕೂಡಲಸಂಗಮದಿಂದ ಅರ್ಧಗಾವುದ ದೂರದಲ್ಲಿಯ ನಾಗಾವಿಯಲ್ಲಿ ಗುಂಡಬಸವೇಶ



ಜನಿಸಿದನು. ಈ ಊರಿಂದ ವಾಯುವ್ಯದಲ್ಲಿ ಹರದಾರಿ ದೂರದಲ್ಲಿ ಕಂಗಳಿಗೆ (ತಂಗಳಿಗೆ) ಸೋಮಲಿಂಗ-ವೀರಭದ್ರರು ನೆಲೆಸಿದ್ದಾರೆ. ಈ ಕಾವ್ಯೋಕ್ತ ಕಂಗಳಿಗೆ ಇಂದು ಚಿತ್ತಾಪುರ ದಲ್ಲಿ ಸೇರಿಕೊಂಡಿರುವ ಗ್ರಾಮ. ಇಲ್ಲಿ ತಂಗಳೇಶ್ವರನ ಹೆಸರಿನಲ್ಲಿ ಸೋಮಲಿಂಗ ದೇವಾಲಯವಿದೆ. ಹಾಗೆಯೇ ಸನ್ನೆ ಎಂಬ ಗ್ರಾಮದಲ್ಲಿ ಶಿವ-ಪಾರ್ವತಿಯರು ನೆಲೆಸಿರುತ್ತಾರೆ. ನೂರೊಂದು ಕಂಬದ ಶಿವಾಲಯದಲ್ಲಿ ಅಕ್ಕನಾಗಾಯಿ ಜಂಗಮದಾಸೋಹ ಮಾಡುತ್ತಿದ್ದ ಕಾರಣ ಛತ್ರಶಾಲೆ ಎಂದು ಹೆಸರು ಬಂದಿತೆಂದು ಪದ್ಯ 8ರಲ್ಲಿ ಉಲ್ಲೇಖಿಸಲಾಗಿದೆ.

ಇಂತು ನೂರೊಂದು ಕಂಬದ ಶಿವಾಲ್ಯದೊಳು  
ಸಂತತ ಅಕ್ಕ ನಾಗಾಯಿ|  
ಕಂತುಹರನ ಭಕ್ತೆ ಜಂಗಮಾರ್ಚನೆ ಮಾಡೆ  
ಅಂತು ಛತ್ರಸಾಲೆಯಂದೆನಿಸಿ||

ಈ ಹೊತ್ತು ತ್ರೈಪುರುಷ ದೇವಾಲಯವೆಂದೂ, ಅದು ಘಟಿಕಾಸ್ಥಾನವಾಗಿತ್ತೆಂದೂ, ಅಲ್ಲಿ ವೇದಾಧ್ಯಯನ-ಶಾಸ್ತ್ರಾಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳು ಇರುತ್ತಿದ್ದರೆಂದೂ ವರ್ಣಿಸುವ 1056ರ ಶಾಸನೋಕ್ತ "ಛಾತ್ರಾನಿಲಯ" ಅಂದರೆ ವಿದ್ಯಾರ್ಥಿಗಳ ವಾಸಸ್ಥಾನ ಇದೇ ಆಗಿದೆ. ಇಲ್ಲಿ ಕಾವ್ಯೋಕ್ತ 101 ಕಂಭಗಳಿರದೆ; 60 ಕಂಭಗಳಿಂದ ಆ ದೇವಾಲಯ ನಿರ್ಮಾಣಗೊಂಡಿದೆ. ನಾಗವೇಲಾಂಬಿಕೆ ದೇವಾಲಯ, ನಂದಿಕೇಶ್ವರ ದೇವಾಲಯ, ಸಿದ್ಧೇಶ್ವರ ದೇವಾಲಯ, ಈರಪ್ಪಯ್ಯನ ಗದ್ದುಗೆ, ತಿಪ್ಪಣ್ಣಯ್ಯನ ಗದ್ದುಗೆ, ಗುಂಡಬಸವಣ್ಣನ ಗದ್ದುಗೆಗಳು ಈಗಲೂ ಧರ್ಮಕಲ್ಯಾಣದಲ್ಲಿ ಇವೆ.

### ಗುಂಡಬಸವೇಶ್ವರ ಚರಿತ್ರೆ: ಧರ್ಮಕಲ್ಯಾಣದ ವಿವರ

"ಶ್ರೀಮತು ಶಾಲಿವಾಹನ ಶಕೆ 1622ನೇ ವಿಕ್ರಮನಾಮ ಸಂವತ್ಸರದೊಳಗೆ ಆಶ್ವೀಜ ಅಧಿಕ ಮಾಸದೊಳು ಸಪ್ತಮಿ ಮಂಗಳವಾರ ದಿನ ಮುಗಿಯಿತು" - ಎಂದು ಕಾವ್ಯದ ಅಂತ್ಯದಲ್ಲಿ ಪ್ರತಿಕಾರನ ಉಲ್ಲೇಖವಿದೆ. "ಈ ಪುಸ್ತಕ ಬರೆದವರಾರು ಯೆಂದರೆ ಕೊಡೆಯಕಲ್ಲು ಸಿದ್ಧಯ್ಯನ ಕೊಮಾರ ಬಸವಯ್ಯನು ತನ್ನ ಸ್ವಹಸ್ತದಲ್ಲಿ ಬರೆದುಕೊಟ್ಟನು" "ಕಕ್ಕಳಮೇಲಿಯ ಮಠದ ಅಲ್ಲಮಪ್ರಭುದೇವರ ವರಪುತ್ರ ಗದ್ದಿಗೆರಾಯನ ಸೋದರಳಿಯನು ಬರೆಸಿದ (ವ) ನು ಪರಭಯ್ಯನು" - ಎಂದಿರುವುದರಿಂದ ಕ್ರಿ.ಶ. 1700ರಲ್ಲಿ ಈ ಗ್ರಂಥ ಕೃತಿಗೊಂಡಿರಬೇಕು ಅಥವಾ ಪ್ರತಿಗೊಂಡಿರಬೇಕು. ಇದನ್ನು ಬರೆದವರು ಕಡೆಯ ಕಲ್ಯಾಣವೆನಿಸಿದ ಕೊಡೆಕಲ್ಲಿನ ಸಿದ್ಧಯ್ಯನ ಮಗ ಬಸವಯ್ಯ. ಬರಸಿದವರು ಕಕ್ಕಳಮೇಲಿಯ ಪರಭಯ್ಯ". ಈ ಕಾವ್ಯದ ಕಥಾನಾಯಕ ಗುಂಡಬಸವೇಶ. 7 ಸಂಧಿಯುಳ್ಳ ಈ ಕಾವ್ಯದಲ್ಲಿ ಶರಣಸ್ತುತಿ, ಗುಂಡಬಸವೇಶ್ವರನ

ಶಿವನ ಸನ್ನಿಧಿ ಕಥನ, ಗುಂಡಬಸವೇಶ್ವರನ ಗ್ರಾಮಕಥನ, ಗುಂಡಬಸವೇಶ್ವರನ ಅವತಾರ ಕಥನ, ಗುಂಡಬಸವೇಶ್ವರ ಲೀಲಾಕಥನ, ಗುಂಡಬಸವೇಶ್ವರ ಸಂಸಾರಕಥನ, ಗುಂಡಬಸವೇಶ್ವರ ಐಕ್ಯಕಥನವನ್ನು ಚಿತ್ರಿಸಲಾಗಿದೆ. ಗುಂಡಬಸವೇಶ್ವರನ ಸಂಧಿ 4 ಪದ್ಯ 15ರಲ್ಲಿ

ಕೇಳು ನೀ ಬಸವಣ್ಣ ಹೇಳುವ ಮಾತನು
ಬಾಳಲೋಚನ ಭಕ್ತನೊಬ್ಬ||
ಹಳೆಯ ಸಗರದ ಹೊರಗೆ ಮಠ ಕಟ್ಟಿ ತಾ
ಇಳೆಯೊಳಮರ ಕಲ್ಯಾಣೆನಿಸಿ||

-ಎಂದು ತಿಪ್ಪಣ್ಣಯ್ಯ ಬಾಲಕ ಗುಂಡಬಸವಣ್ಣನಿಗೆ ಹೇಳುವುದರಿಂದ ಸಗರನಾಡೆಂದು ಖ್ಯಾತಿ ಹೊಂದಿದ್ದ ಇಂದಿನ ಶಹಾಪುರ. ಹತ್ತಿರದ ದಿಗ್ಗಿಯಲ್ಲಿ ಸಂಗಮನಾಥ ಅಮರಕಲ್ಯಾಣ ನಿರ್ಮಿಸಿದನೆಂದು ಹೇಳಿ ಅದೇ ರೀತಿ ನೀನು ಧರ್ಮಕಲ್ಯಾಣ ಸ್ಥಾಪಿಸಬೇಕೆಂದು ಆದೇಶಿಸುತ್ತಾನೆ. ಆ ಪ್ರಕಾರವಾಗಿ ಗುಂಡಬಸವೇಶ್ವರ ಧರ್ಮಕಲ್ಯಾಣ ಸ್ಥಾಪಿಸಿದನೆಂಬುದನ್ನು ಸಂಧಿ 6 ಪದ್ಯ 15ರಲ್ಲಿ ಹೀಗೆ ಉಲ್ಲೇಖಿಸಲಾಗಿದೆ.

ಕಟ್ಟಿದನು ಊರ ಹೊರಗೆ ಮಠವನು
ಇಟ್ಟನು ಅದಕೆ ನಾಮವನು||
ಸೃಷ್ಟಿಗೆ ಧರ್ಮಕಲ್ಯಾಣವೆಂದಾಗಿಸಿದ
ನಿಷ್ಠಿಯ ಮೂಲಪೀಠವನು||

ಹೀಗೆ ಧರ್ಮಕಲ್ಯಾಣವನ್ನು ಕಟ್ಟಿದ ಗುಂಡಬಸವಣ್ಣನಿಗೆ "ಧರ್ಮಕಲ್ಯಾಣ ದೊಡೆಯ" ಎಂದು ಕರೆಯಲಾಗಿದೆ;

ಧರ್ಮಕಲ್ಯಾಣದೊಡೆಯ
ನಿರ್ಮಳ ಭಕ್ತಿಯಲಿ ನಡೆದು ಗುರುವೆಂದರಿತರೆ||
ಪರ್ಮಪದವೀವ ಇಹದಲಿ
ಪರ್ಮ ಗುರುಗುಂಡನೀವ ಪರಮಸಾಯುಜ್ಯವ||

ಹೀಗೆ ಧರ್ಮಕಲ್ಯಾಣದ ಉಲ್ಲೇಖ ಗುಂಡಬಸವನ ಚರಿತ್ರೆಯಲ್ಲಿ ಬರುತ್ತದೆ. ಗುರು ಗುಂಡಬಸವ ಅಂಕಿತದ ಸ್ವರವಚನದಲ್ಲಿ ವರ್ಣಿಸಿರುವುದಿಂತಿದೆ:

ಧರ್ಮದ ಹಾದಿಯ ತೋರಲಿ ಬಂದೆ
ಶರಣ ಶರಣು ಗುಂಡಬಸವಯ್ಯಾ
ಧರ್ಮದ ಹಾದಿಯ ತೋರಲಿ ಬಂದೆ
ಧರ್ಮಕಲ್ಯಾಣಕೆ



ಹೀಗೆ ನಾಗಾವಿ ಧರ್ಮಕಲ್ಯಾಣವಾಗಿ ಪ್ರಸಿದ್ಧಿಗೆ ಬಂದ ಮೇಲೆ ಆ ಪರಂಪರೆಯಲ್ಲಿ ಧರ್ಮಕಲ್ಯಾಣ ಸ್ಥಾಪನೆಗೆ ಪ್ರೇರಣೆ ನೀಡಿದ ನಾಗಾವಿಯ ತಿಪ್ಪಣ್ಣಯ್ಯನು ಗುಂಡಬಸವಣ್ಣನಿಗೆ ಹಿರಿಯ ಅನುಭಾವಿ. ಈತನ ನಂತರ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕಕ್ಕಳ ಮೇಲಿಯ ಅಲ್ಲಮಪ್ರಭು ಮತ್ತು ಈರಪ್ಪಯ್ಯರು ಗುಂಡಬಸವೇಶ್ವರನ ಐದು ಜನ ಮಕ್ಕಳಲ್ಲಿ ಇಬ್ಬರಾಗಿದ್ದಾರೆ. ಆನಂತರ ಸಾಲೋಟಗಿ ಶಿವಯೋಗಿ - ಇವರೆಲ್ಲ ಒಂದೇ ಗರಡಿಯಲ್ಲಿ ಪಳಗಿದ ಅನುಭಾವಿಗಳು. ಧರ್ಮಕಲ್ಯಾಣ ಪರಿಸರದಲ್ಲಿ ಡಂಗೂರು ಪದಗಳು, ಸ್ವರವಚನ ಸಾಹಿತ್ಯ ಸೃಷ್ಟಿಯಾದವು.

ಒಟ್ಟಿನಲ್ಲಿ ಈ ಪ್ರಬಂಧದ ಒಟ್ಟು ಆಶಯವೆಂದರೆ: ಕೊಡೇಕಲ್ಲು ಬಸವಣ್ಣ ದೇಶಸಂಚಾರಿಯಾಗಿ ಅಮರ ಕಲ್ಯಾಣವೆನಿಸಿದ ಶಹಾಪುರದ ದಿಗ್ಗಿ ಸಂಗಮನಾಥನಲ್ಲಿಗೆ ಬರುತ್ತಾನೆ. ಆಗಾಗಲೇ ಸಂಗಮನಾಥ ಐಕ್ಯನಾಗಿರುತ್ತಾನೆಂದು ನಂದಿಯಾಗಮಲೀಲೆ ಕೃತಿ ತಿಳಿಸುತ್ತದೆ. ಮುಂದೆ ಈತ ಈಶಾನ್ಯಕ್ಕೆ ನಡೆದು ಧರ್ಮಕಲ್ಯಾಣವೆನಿಸಿದ ನಾಗಾವಿಗೆ ಬರುತ್ತಾನೆ. ಆಗಾಗಲೇ ಗುಂಡಬಸವೇಶ್ವರ ಐಕ್ಯನಾಗಿರುತ್ತಾನೆ. ಆತನ ಮನೆಗೆ ಹೋಗಿ ಪತ್ನಿಯಲ್ಲಿ ಭಿಕ್ಷೆ ಬೇಡುತ್ತಾನೆ. ಭಿಕ್ಷೆಗೆ ಏನೂ ಇಲ್ಲ ಎಂದಾಗ, ಶಿವ ನೀಡಿದ ಬಹುದಿನದ ಕಜ್ಜಾಯವಿದೆಯೆಂದು ಹೇಳಿ, ಅದನ್ನು ಪಡೆದು ಕೊಡೇಕಲ್ಲಿಗೆ ಹೋಗುತ್ತಾನೆ. ಈ ಸಂಗತಿಯನ್ನು ತಾಯಿಯಿಂದ ತಿಳಿದ ಈರಪ್ಪಯ್ಯ ಕೊಡೇಕಲ್ಲಿಗೆ ಹೋಗಿ ಆತನ ಶಿಷ್ಯನಾಗುತ್ತಾನೆ." ಇದಿಷ್ಟು ವಿವರಣೆಯಿಂದ ಕನ್ನಡ ಕಾವ್ಯಗಳಲ್ಲಿ ಉಲ್ಲೇಖಿತಗೊಂಡ ಸಮಯಕಲ್ಯಾಣ ಈಗಿನ ಬಸವಕಲ್ಯಾಣ, ಶಾಸನೋಕ್ತ ವಿಜಯಕಲ್ಯಾಣ ಈಗಿನ ಹಂಪಿ ಇವುಗಳ ಕುರಿತು ವಿದ್ವಾಂಸರಲ್ಲಿ ಏಕಾಭಿಪ್ರಾಯವಿದೆ. ಆದರೆ ಕೊಡೇಕಲ್ಲನ್ನೇ ಅಮರಕಲ್ಯಾಣವೆಂದು ತಪ್ಪಾಗಿ ಗ್ರಹಿಸಲಾಗಿತ್ತು. ಅದೇ ರೀತಿ ಧರ್ಮಕಲ್ಯಾಣದ ತಿಳುವಳಿಕೆ ಗಮನಕ್ಕೆ ಬಂದಿರಲಿಲ್ಲ. ಹೀಗಾಗಿ ಸಮಯಕಲ್ಯಾಣ-ವಿಜಯ ಕಲ್ಯಾಣಗಳ ನಂತರ 3ನೆಯದು ಶಹಾಪುರ ಸಮೀಪದ ದಿಗ್ಗಿ ಅಮರಕಲ್ಯಾಣ, 4ನೆಯದು ನಾಗಾವಿ ಧರ್ಮಕಲ್ಯಾಣ, 5ನೆಯದು ಕೊಡೇಕಲ್ಲಿನ ಕಡೆಯ ಕಲ್ಯಾಣ ಹೀಗೆ 5 ಕಲ್ಯಾಣಗಳ ಸ್ಥಾಪನೆಯ ಹಿಂದಿರುವ ಇತಿಹಾಸದ ನಿಜದ ಹಿನ್ನೆಲೆಯನ್ನು ಪ್ರತ್ಯೇಕವಾಗಿ "ಕನ್ನಡ ನಾಡಿನ ಕಲ್ಯಾಣ ಪರಂಪರೆ" ಎಂದು ಅಧ್ಯಯನ ಮಾಡುವ ಅಗತ್ಯವಿದೆ. ಈ ಪರಂಪರೆ ಮುಂದೆ ಬಿಜಾಪುರ ಜಿಲ್ಲೆಯ ಕಕ್ಕಳಮೇಲಿ, ಸಾಲೊಟಗಿ ಪರಿಸರದಲ್ಲಿ ಅಲ್ಲಮಪ್ರಭು, ಶಿವಯೋಗಿಗಳ ನೇತೃತ್ವದಲ್ಲಿ ವಿಕಾಸಗೊಂಡಂತೆ ತೋರುತ್ತದೆಂಬ ಅಂಶವನ್ನು ಇಲ್ಲಿ ಹೇಳಲವಕಾಶವಿದೆ.

□

# ಅಲ್ಲಮನ ವಚನಗಳಲ್ಲಿ ವೈಚಾರಿಕತೆ

ಶ್ರೀ ಶಿಲ್ಪಿ

12ನೇ ಶತಮಾನದ ವಚನ ಚಳುವಳಿಯನ್ನು ಭಕ್ತಿ ಚಳುವಳಿ ಎಂದು ಗುರುತಿಸಲಾಗುತ್ತಿದೆಯಾದರೂ, ಅದು ಕೇವಲ ಭಕ್ತಿ ಚಳುವಳಿಯಲ್ಲ. ಏಕೆಂದರೆ, ಭಕ್ತಿಯ ಹೆಸರಿನಲ್ಲಿ ನಡೆಯುತ್ತಿದ್ದ ಮೌಢ್ಯವನ್ನು ಶರಣರು ಒಪ್ಪಿಕೊಂಡಿಲ್ಲ; ಬದಲಾಗಿ ಪ್ರಶ್ನಿಸಿದ್ದಾರೆ. ಬಸವಣ್ಣ ಭಕ್ತಿ ಭಂಡಾರಿಯಾದರೂ, ಅವನ ಭಕ್ತಿ ಸಾಂಪ್ರದಾಯಿಕವಾದ ಲೋಕದೂರವಾದ, ಲೋಕ ನಿರಪೇಕ್ಷಿತವಾದ ಭಕ್ತಿಯಲ್ಲ. ತನ್ನ ಸುತ್ತಲಿನ ಸಮಾಜದ ಪರಿವರ್ತನೆಗೆ, ಸಮಾನತೆಗೆ ಹಂಬಲಿಸುವ ಸಮಷ್ಟಿ ಪ್ರಜ್ಞೆಯು ಬಸವಣ್ಣನ ಭಕ್ತಿ ಪಾತಳಿಯಲ್ಲಿಯೇ ಸಹಜವಾಗಿ ಹೊರಹೊಮ್ಮಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಈ ವಿಚಾರದಲ್ಲಿ ಬಸವಣ್ಣನಿಗಿಂತ ಇನ್ನೂ ಮುಂದೆ ಹೋದವನು ಮಹಾ ಅನುಭಾವಿಯಾದ ಅಲ್ಲಮಪ್ರಭುದೇವ.

ಶರಣರ ಭಕ್ತಿ ಚಳುವಳಿಯ ಕೇಂದ್ರದಲ್ಲಿದ್ದೂ, ಅಲ್ಲಮ ಆ ಚಳುವಳಿಯ ಮಿತಿಗಳನ್ನು ಗುರುತಿಸಬಲ್ಲ. ಅದರ ನೆಪದಲ್ಲಿನ ಟೊಳ್ಳುತನಗಳನ್ನು ವಿಡಂಬಿಸಬಲ್ಲ, ಅವನು ಖಂಡಿತವಾದಿಯಾಗಿ, ವಿಚಾರವಾದಿಯಾಗಿಯೂ ಕಂಡುಬರುವುದು ನಿಜಕ್ಕೂ ಅಚ್ಚರಿಯ ಸಂಗತಿಯಾಗಿದೆ. ಭಾವುಕತೆಗಿಂತ ಪ್ರಶ್ನಿಸುವ, ಒರೆಗೆ ಹಚ್ಚುವ, ವಾಸ್ತವದ ನೆಲೆಯಲ್ಲೂ ಚಿಂತಿಸುವ ಅವನ ವಚನಗಳ ಬಗೆ, ಉಳಿದವರಿಗಿಂತ ಅವನಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಈ ಗುಣದಿಂದಲೇ ಅವನು ಉಳಿದವರಿಗಿಂತ ಭಿನ್ನನಾಗಿದ್ದಾನೆ ಮತ್ತು ಇದರಿಂದಲೇ ಅವನು ಇತರರನ್ನು ಎಚ್ಚರಿಸಿ ಬೆಳೆಸಿದ್ದಾನೆ.

ವಿಚಾರದಲ್ಲಿ ಎಂತೋ ಅಂತೆ ಅಭಿವ್ಯಕ್ತಿಯಲ್ಲೂ ಅವನು ನಿಷ್ಠುರ ಮತ್ತು ಕಠೋರ. ವೇದ, ಪುರಾಣ, ಶಾಸ್ತ್ರಾಗಮಗಳು ಪ್ರಶ್ನಾತೀತವಾಗಿದ್ದ ಆ ಕಾಲದಲ್ಲೇ

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹೋರಟೆ
ಭಕ್ತಿ ಎಂಬುದು ತೋರಿ ಉಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು



ಎಂದು ವೇದಾಗಮಗಳ ಮಿತಿಗಳನ್ನು, ಅವುಗಳ ಅಪ್ರಸ್ತುತತೆಯನ್ನು ವಿಡಂಬಿಸಿದ್ದಾನೆ. ಮತ್ತು ಇಂಥ ಮಾತುಗಳನ್ನು ತನ್ನ 'ಎಂಟೆದೆ'ಯ ಧೈರ್ಯ ಮತ್ತು ಜ್ಞಾನದ ಸಾಮರ್ಥ್ಯದಿಂದ ನುಡಿದು ಅರಗಿಸಿಕೊಂಡ ವಿರಳನಾಗಿದ್ದಾನೆ.

ಸಮೂಹಸನ್ನಿ ಎಂಬುದು ಎಲ್ಲಾ ಕಾಲದಲ್ಲೂ ಇದ್ದದ್ದೆ. ತನ್ನ ಸ್ವಭಾವ, ಸ್ವ ಸಾಮರ್ಥ್ಯಗಳನ್ನು ಲೆಕ್ಕಿಸದೆ, ಭಕ್ತರನ್ನು ಕಂಡೊಡನೆ ಭಕ್ತರಂತಾಗುವ, ವಿರಕ್ತರನ್ನು ಕಂಡೊಡನೆ ಅವರಂತಾಗುವ ಹುಚ್ಚು, ಆವೇಶಕ್ಕೆ ಒಳಗಾಗುವ ಜನರು ಕಡಿಮೆಯೇನಿಲ್ಲ. ಇನ್ನೊಂದು ಕಡೆ ವ್ಯವಸ್ಥೆ ಕೂಡ ಹಿಂದು ಮುಂದರಿಯದೆ ಯಾವುದೋ ನಿಗೂಢ ಹಿತಾಸಕ್ತಿಯಿಂದ ಎಷ್ಟೋ ಮಹತ್ವದ ಜವಾಬ್ದಾರಿಯನ್ನು ಯಾರು ಯಾರಿಗೊ ವಹಿಸಿಕೊಡುವುದುಂಟು. ಈ ಎರಡೂ ಸಂದರ್ಭಗಳಲ್ಲಿ ಫಲಿತಾಂಶ ಅಷ್ಟು ಹಿತಕರವಾಗಿರುವುದಿಲ್ಲ. ಲೋಕದ ಇಂಥ ರೀತಿಯನ್ನು ಅಲ್ಲಮಪ್ರಭುಗಳು ಅತ್ಯಂತ ಮಾರ್ಮಿಕವಾಗಿ ಅಭಿವ್ಯಕ್ತಿಸಿರುವುದನ್ನು ನೋಡಬಹುದು.

ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೊ
ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದಕ್ಕದೆ ಭಂಗ
ಭಾವಿಸುವ ಭಾವನೆಗಿಂಥ
ಸಾವುದೆ ಲೇಸು ಕಾಣಾ ಗುಹೇಶ್ವರ

ಅಂತೆಯೇ ನಿಜವನ್ನು ಸಾಧಿಸಿ ಹಿಡಿಯದೆ ಕೇವಲ ಮನದ ಬಯಕೆಯ ತೀವ್ರತೆಯಿಂದ ಊಹಿಸಿಕೊಂಡು ಅವರಂತೆ ಆಲೋಚಿಸುತ್ತ, ಭಾವಿಸುವ ಭಾವನಾತ್ಮಕ, ಭ್ರಾಂತ ಹುಸಿಯನ್ನೆ ನಿಜವೆಂದು ನಂಬಿಕೊಂಡರೆ ತನಗೆ ತಾನೇ ವಂಚಿಸಿಕೊಂಡಂತೆ ಆಗುತ್ತದೆ. ಆತ್ಮವಂಚನೆಯು ಆತ್ಮಹತ್ಯೆಗೆ ಸಮನಾದುದು. ಆದ್ದರಿಂದ ಈ ಬಗೆಯ ಭ್ರಾಂತಿಯಲ್ಲಿ ಬಳಲುವ ಬವಣೆಗಿಂತ ಸಾವುದೆ ಲೇಸು ಎಂದು ಅಲ್ಲಮಪ್ರಭುಗಳು ಪೊಳ್ಳು ಸಾಧಕರ ನಡೆಯನ್ನು ವಿಡಂಬಿಸಿದ್ದಾರೆ.

ಭಕ್ತ, ಜ್ಞಾನಿ, ಶರಣ, ಅರಿವು, ಎಂಬಿತ್ಯಾದಿ ಗಂಭೀರವಾದ ಪದ-ಪದವಿಗಳನ್ನು ಆಡಂಬರದ ನೆಲೆಯಲ್ಲಿ ಬಳಸುವ ಜನರನ್ನು ಕುರಿತು:

ಆಚಾರವನರಿಯದೆ ವಿಭವವಳಿಯದೆ
ಕೋಪವಡಗದೆ ತಾಪ ಮುರಿಯದೆ
ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ
ನಾನು ಮರುಗುವೆನು ಕಾಣಾ ಗುಹೇಶ್ವರಾ

ಎಂದು ಮರುಗುತ್ತಲೇ ನುಡಿ ಚಾಟಿಯನ್ನು ಬೀಸಿ ಎಚ್ಚರಿಕೆಯನ್ನುಂಟುಮಾಡುವ ಅಲ್ಲಮಪ್ರಭುಗಳು ಭಕ್ತನು ಹೇಗಿರಬೇಕೆಂದು ಸೂಚಿಸುತ್ತ, ಅವನು

ಆಚಾರ(ಪಂಚಾಚಾರ)ವನರಿದಿರಬೇಕು, ಭವ ಜಾಲದಿಂದ ಮುಕ್ತನಾಗಿ ಭವವನಳಿದಿರಬೇಕು, ಕೋಪವನ್ನು ಜ್ಞಾನದಗ್ನಿಯಲ್ಲಿ ಅಡಗಿಸಿ ತಾಪವನ್ನು ಭಕ್ತಿಯ ತಪದ ಶಾಂತಿಯಲ್ಲಿ ಮುರಿದಿರಬೇಕು. ಆಗ ಮಾತ್ರ ಆತ ನಿಜದ ಭಕ್ತನಾಗುತ್ತಾನೆ. ಇಲ್ಲವಾದರೆ ಬರಿದೆ ಅಂದರೆ ತೋರಿಕೆಯ ಭಕ್ತನಾಗುತ್ತಾನೆ ಎಂಬುದು ಪ್ರಭುದೇವರ ದೃಢವಾದ ನಿಲುವಾಗಿದೆ. ಬೇಸಾಯ ವೃತ್ತಿಯನ್ನು ಮಾಡಿ ಜೀವನ ನಿರ್ವಹಣೆಗೆ ಬೇಕಾಗುವಷ್ಟು ದವಸ ಧಾನ್ಯ ಇಲ್ಲವೆಂದ ಮೇಲೆ ಆ ಬೇಸಾಯದ ಪ್ರಯೋಜನವೇನು? ವ್ಯಾಪಾರ ಮಾಡಿ ಮನೆ ಖರ್ಚಿಗೆ ನಾಲ್ಕು ಕಾಸು ಇಲ್ಲವೆಂದರೆ ಆ ವ್ಯಾಪಾರದ ಹುರುಳೇನು? ಭಕ್ತಿ ಮಾಡಿ ಭವವಳಿಯದಿದ್ದರೆ ಆ ಭಕ್ತಿಯಿಂದ ಬಂದ ಲಾಭವೇನು ? ಎಂದು ಮುಂತಾದ ಮೂಲಭೂತ ಪ್ರಶ್ನೆಗಳನ್ನು ಪ್ರಭುದೇವರು ತಮ್ಮ ಇನ್ನೊಂದು ವಚನದಲ್ಲಿ ಪ್ರಶ್ನೆ ಮಾಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಭಕ್ತರನ್ನು, ಅವರ ತೋರಿಕೆಯ ಭಕ್ತಿಯನ್ನು ವಿಡಂಬಿಸಿದ ಪ್ರಭುದೇವರು ಕೇವಲ ಬಾಹ್ಯ ಆಚರಣೆಯಿಂದ ಕೂಡಿದ ಪೂಜೆಯ ನಿರರ್ಥಕತೆಯನ್ನು ಖಂಡಿಸಿದ್ದೂ ಉಂಟು. ಪೂಜೆ ಎಂದರೆ ತನ್ನ ಇಷ್ಟದೈವದೊಂದಿಗೆ ಸಂಪೂರ್ಣ ಸಾಮರಸ್ಯ ಸಾಧಿಸುವುದು ಎಂಬ ಜ್ಞಾನಮಾರ್ಗದ ಮರ್ಮವನ್ನರಿಯದೆ ಅಗ್ಘವಣಿ, ಪತ್ರೆ, ಪುಷ್ಪ, ಧೂಪ, ದೀಪ ಮೊದಲಾದ ಸಲಕರಣೆಗಳ ಬಳಕೆಯೇ ಪೂಜೆಯೆಂಬುದು ಸಾಮಾನ್ಯವಾಗಿ ಲೋಕದ ಗ್ರಹಿಕೆ. ಲೋಕದ ಈ ಮೇಲ್ಪದರದ ಪೂಜಾ ಪದ್ಧತಿಯನ್ನು ಕಂಡು ಪ್ರಭುದೇವರು ಬೆರಗಾಗಿ ಅದರ ನಿಷ್ಪ್ರಯೋಜಕತೆಯನ್ನು ಈ ಕೆಳಗಿನ ವಚನದಲ್ಲಿ ಸಾರಿ ಹೇಳಿದ್ದಾರೆ:

> ಅಗ್ಘವಣಿ ಪತ್ರೆ ಪುಷ್ಪ ಧೂಪ ದೀಪ ನಿವಾಳಿಯಲ್ಲಿ
> ಪೂಜಿಸಿ ಬಳಲುತ್ತಿದ್ದಾರೆ
> ಏನೆಂದರಿಯರು, ಎಂತೆಂದರಿಯರು
> ಜನ ಮರುಳೋ ಜಾತ್ರೆ ಮರುಳೋ ಎಂಬಂತೆ
> ಎಲ್ಲರೂ ಪೂಜಿಸಿ ಏನನೂ ಕಾಣದೆ
> ಲಯಕ್ಕೊಳಗಾಗಿ ಹೋದರು ಗುಹೇಶ್ವರಾ!

ಬಾಹ್ಯ ಆಚರಣೆಯ ಆಡಂಬರದಲ್ಲಿ ಬದುಕನ್ನು ಬಂಧನದ ಬಾಧೆಯಾಗಿಸಿಕೊಂಡು ಬಳಲುವ ಬವಣೆಯನ್ನು ಅಲ್ಲಮಪ್ರಭು ವಿಡಂಬಿಸುವ ಈ ಶೈಲಿಯು ಆತ್ಮಜಾಗೃತಿಯನ್ನು ಮೂಡಿಸುತ್ತದೆ. ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ಮಾಡುವ ಪೂಜೆ, ಆಚರಣೆ ಸಂಪ್ರದಾಯಗಳು ತಮ್ಮ ನೈಜ ಸತ್ವ ಕಳೆದುಕೊಂಡು ಶುಷ್ಕವಾಗಿರುವುದನ್ನು ಪ್ರಭುದೇವರು ಈ ವಚನದಲ್ಲಿ ಧ್ವನಿಸಿದ್ದಾರೆ.

> ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
> ಆ ಕಲ್ಲು ಕಲ್ಲ ಮೇಲೆ ಕೆಡೆದಡೆ
> ಆ ದೇವರೆತ್ತ ಹೋದರೊ?



> ಲಿಂಗಪ್ರತಿಷ್ಠೆ ಮಾಡಿದವರಿಗೆ
> ನಾಯಕ ನರಕ ಗುಹೇಶ್ವರ

ಎಂಬ ಅವನ ವಚನ ಸಮಕಾಲೀನ ವಿಚಾರವಂತರನ್ನೂ ಬೆರಗುಗೊಳಿಸುವಂತಿದೆ. ಏರೆದರೆ ನೆನೆಯದ ಮರೆದರೆ ಬಾಡದ ಜಡ ಕಲ್ಲುಗಳನ್ನು ತಂದು ಜೋಡಿಸಿ ಗಾರೆಗಚ್ಚು ಹಾಕಿ ಮನೆಯನ್ನು ಕಟ್ಟಿದರೆ ಅದು ಸ್ಥಾವರವಲ್ಲದೆ ಜಂಗಮವಾದೀತೆ? ಆ ಕಲ್ಲ ಮನೆಯಲ್ಲಿ ಅದೇ ಕಲ್ಲಿನಿಂದ ಮಾಡಿದ ವಿಗ್ರಹವನ್ನು ಕಡೆದು ಮೂರ್ತಿ ಮಾಡಿದರೆ ಅಲ್ಲಿ ಲೋಕದ ಚೈತನ್ಯಸಾಗರವಾದ ಪರಮಾತ್ಮನು ವಾಸಿಸಲು ಸಾಧ್ಯವೇ? ಇಲ್ಲ. ಅಲ್ಲಿ ನಿಜಲಿಂಗದೇವರು ನೆಲೆಗೊಳ್ಳುವುದಿಲ್ಲ.

ದೇವರು ಧರ್ಮದ ಹೆಸರಿನಲ್ಲಿ, ಮೋಕ್ಷ ಕೈಲಾಸದ ಹಂಬಲದಲ್ಲಿ ಹತ್ತು ಹಲವು ತೀರ್ಥಯಾತ್ರೆ ಕೈಗೊಳ್ಳುವ; ನೂರೆಂಟು ನೇಮ, ವ್ರತ ಆಚರಿಸುವ ಪದ್ಧತಿ ಭಕ್ತ ಸಮುದಾಯದಲ್ಲಿ ಬಹು ಹಿಂದಿನ ಕಾಲದಿಂದ ನಡೆದುಕೊಂಡು ಬಂದದ್ದುಂಟು. ದುರಂತವೆಂದರೆ ಇಲ್ಲಿ ಬಹುಪಾಲು ಭಕ್ತರಿಗೆ ಒಂದು ಹುಚ್ಚು ಆವೇಶ. ಅಂಧಾನುಕರಣೆ ಇರುತ್ತದೆಯೆ ಹೊರತು ಆ ತೀರ್ಥಯಾತ್ರೆ, ವ್ರತ ನಿಯಮಗಳ ಒಳಮರ್ಮದ ಜ್ಞಾನ ವಿರುವುದಿಲ್ಲ. ಅಷ್ಟು ಮಾತ್ರವಲ್ಲ ಕನಿಷ್ಠ ಚಿತ್ತ ಏಕಾಗ್ರತೆಯೂ ಇರುವುದಿಲ್ಲ. ಹೀಗೆ ಜ್ಞಾನ ಮತ್ತು ಚಿತ್ತಶುದ್ಧಿಯಿಲ್ಲದ ಕೇವಲ ಕ್ರಿಯಾಚರಣೆಗಳನ್ನು ಕಂಡ ಪ್ರಭುದೇವರು

> ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ
> ತುತ್ತ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ
> ನಿತ್ಯ ನೇಮದಿಂದ ತನುವ ಮುಟ್ಟಿಕೊಂಡಡಿಲ್ಲ
> ನಿಚ್ಚಕ್ಕೆ ನಿಚ್ಚ ನೆನೆವ ಮನವ
> ಅಂದಂದಿಗೆ ಅತ್ತಲಿತ್ತ ಹರಿಯದೆ ಚಿತ್ತನಲ್ಲಿ ನಿಲ್ಲಿಸಬಲ್ಲಡೆ
> ಬಚ್ಚಬರಿಯ ಬೆಳಗು ಗಹೇಶ್ವರ ಲಿಂಗವು

ಎಂದು ಶುಷ್ಕ ಭಕ್ತಿಯ ಆಚರಣೆಯ ಟೊಳ್ಳುತನವನ್ನು ನಿರಾಕರಿಸುತ್ತ ಜ್ಞಾನಸಮನ್ವಿತ ವಾದ ಭಕ್ತಿಮಾರ್ಗವನ್ನು ದಿಗ್ದರ್ಶಿಸುತ್ತ ಕಲ್ಯಾಣದ ಭಕ್ತಿಯ ಪೂರಕ್ಕೆ ಅರ್ಥಪೂರ್ಣ ವಾದ ಮತ್ತು ಫಲಪ್ರದವಾದ ಆಯಾಮವನ್ನು ತಂದುಕೊಟ್ಟಿರುವುದು ಮಹತ್ವಪೂರ್ಣ ವಾದ ಸಂಗತಿಯಾಗಿದೆ.

ಇಂತಹ ವೈಚಾರಿಕ ನಿಲುವುಗಳು ಪ್ರಭುದೇವರ ಹಲವು ವಚನಗಳಲ್ಲಿ ಕಂಡುಬರುವುದುಂಟು. ಕೆಲವನ್ನು ಇಲ್ಲಿ ಗಮನಿಸಬಹುದು.

1. ಕಂಗಳ ಮುಂದಣ ಕತ್ತಲೆ ಇದೇನೊ?
   ಮನದ ಮುಂದಣ ಮರವೆ ಇದೇನೊ?
   ಒಳಗೆ ರಣರಂಗ ಹೊರಗೆ ಶೃಂಗಾರ
   ಬಳಕೆಗೆ ಬಂದ ಬಟ್ಟೆ ಇದೇನೋ ಗುಹೇಶ್ವರಾ?

2. ಅಂಗದ ಮೇಲೆ ಲಿಂಗವರತು, ಲಿಂಗದ ಮೇಲೆ ಅಂಗವರತು
ಭಾವತುಂಬಿ ಪರಿಣಾಮವರತು
ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದು ಗುಹೇಶ್ವರಾ?
3. ವೇದ ವೇಧಿಸಲರಿಯದೆ ಕೆಟ್ಟವು
ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು
4. ನಾ ದೇವನಲ್ಲದೆ ನೀ ದೇವನೆ ಮತ್ತೆ
ನೀ ದೇವನಾದಡೆ ಎನ್ನನೇಕೆ ಸಲಹೆ?
5. ಪೃಥ್ವಿಗೆ ಹುಟ್ಟಿದ ಶಿಲೆ ಕಲ್ಲುಕುಟಿಕಂಗೆ ಹುಟ್ಟಿದ ಮೂರುತಿ
6. ಕಲ್ಲ ದೇವರೆಂದು ಪೂಜಿಸುವವರು ಆಗದು ಕಾಣಿರೋ!
7. ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇಗುಲವೇಕಿನ್ನು?
8. ತಲೆಯಲ್ಲಟ್ಟುಂಬುದ ಒಲೆಯಲ್ಲಟ್ಟುಂಬರು
9. ಸ್ವರದ ಹುಳ್ಳಿಯ ಕೊಂಡು ಗಿರಿಯ ತಟಾಕಕ್ಕೆ ಹೋಗಿ
ಹಿರಿಯರು ಓಗರವ ಮಾಡುತ್ತಿಪ್ಪರು
10. ವೇದ ಪ್ರಮಾಣವಲ್ಲ, ಶಾಸ್ತ್ರ ಪ್ರಮಾಣವಲ್ಲ
11. ಗುಹೇಶ್ವರನೆಂಬ ಲಿಂಗವು ಕಲ್ಪಿತವಲ್ಲ ನಿಲ್ಲೊ.

ಹೀಗೆ ಹೆಜ್ಜೆ ಹೆಜ್ಜೆಗೆ ಅಲ್ಲಮಪ್ರಭುಗಳು ಪರಂಪರೆಯ ಟೊಳ್ಳುತನವನ್ನು ಪ್ರಶ್ನಿಸುತ್ತ ಜ್ಞಾನಮಾರ್ಗವನ್ನು ಪರ್ಯಾಯವಾಗಿ ಪ್ರತಿಪಾದಿಸುತ್ತ ಕನ್ನಡಭಕ್ತಿ ಸಾಹಿತ್ಯಕ್ಕೆ ಒಂದು ಗಟ್ಟಿಯಾದ ವೈಚಾರಿಕ ನೆಲೆಯನ್ನು ಒದಗಿಸಿಕೊಟ್ಟಿರುವುದು ಚಾರಿತ್ರಿಕವಾಗಿ ಗಮನಾರ್ಹವಾದ ಸಂಗತಿಯಾಗಿದೆ.

□

ಬಂಜೆ ಬೇನೆಯನರಿಯದಂತೆ
ಒಬ್ಬರೊಂದ ನುಡಿವಿರಿ ಕೇಳಿರಯ್ಯಾ.
ಎನಗೆ ಆಯುಷ್ಯ ಭವಿಷ್ಯ ಎನ್ನ ಭಕ್ತರು ಕಂಡಯ್ಯಾ.
ಎನಗೆ ಆಯುಷ್ಯ ಭವಿಷ್ಯ ಎನ್ನ ಪ್ರಮಥರು ಕಂಡಯ್ಯಾ
ಕೂಡಲಸಂಗನ ಶರಣರು ಮುಖಲಿಂಗಿಗಳಯ್ಯಾ.

**- ಬಸವಣ್ಣ**

# ಸರ್ ಥಾಮಸ್ ಮೂರ್‌ನ 'ಯುಟೋಪಿಯಾ' ಹಾಗೂ ಬಸವಣ್ಣನವರ 'ಅನುಭವ ಮಂಟಪ'

**ಡಾ. ಎಸ್.ಆರ್.ಗುಂಜಾಳ**

16ನೆಯ ಶತಮಾನದ ಸುಪ್ರಸಿದ್ಧ ಆಂಗ್ಲ ಬರಹಗಾರ ಸರ್ ಥಾಮಸ್ ಮೂರ್ ನಿಷ್ಣಾತ ವಕೀಲನಾಗಿದ್ದನಲ್ಲದೆ, ಇಂಗ್ಲೆಂಡದ ಸಾಮಾನ್ಯ ಸಭೆಯ ಸದಸ್ಯನೂ ಆಗಿದ್ದ. ಬ್ರಿಟಿಷ್ ಸರಕಾರದ ವ್ಯಾಪಾರ ಸಂಬಂಧ ಕುದುರಿಸಲು ವಿದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು 1505 ರಲ್ಲಿ ರಾಯಭಾರಿಯಾಗಿ ನೇಮಕಗೊಂಡ. ಈ ಸಮಯದಲ್ಲೇ ಅವನ ಮನೋಭಿತ್ತಿಯ ಮೇಲೆ ಆದರ್ಶ ರಾಜ್ಯದ (Utopia) ಕಲ್ಪನೆ ಕುದುರಿ 1516 ರಲ್ಲಿ ಪುಟ್ಟ ಪುಸ್ತಕದ ರೂಪದಲ್ಲಿ ಮೂಡಿಬಂತು. ಮೂಲ ಲ್ಯಾಟಿನ್ ಭಾಷೆಯಲ್ಲಿ ಬರೆದ ಈ ಕೃತಿಯ ಕುರಿತು ಹೇಳುತ್ತ ತಾನು ಯುಟೋಪಿಯಾ ದೇಶದಲ್ಲಿ ಐದು ವರ್ಷ ವಾಸವಾಗಿದ್ದು. ಅಲ್ಲಿಯ ಜನಜೀವನವನ್ನು ಕಣ್ಣಾರೆ ಕಂಡು ಈ ಗ್ರಂಥ ರಚಿಸಿದ್ದಾಗಿ ಮೂರ್ ಹೇಳಿದ್ದಾನೆ.

1551 ರಲ್ಲಿ ರಾಲ್ಫ ರಾಟಿನಸ್‌ನ ಇಂಗ್ಲೀಷ್ ಭಾಷೆಗೆ ಅನುವಾದಿಸಿದ ನಂತರ ಅಪಾರ ಜನಪ್ರಿಯತೆ ಗಳಿಸಿದ ಈ ಗ್ರಂಥ ಇಂದಿನ ಸಂಯುಕ್ತ ರಾಷ್ಟ್ರ ಸಂಘಗಳ (Commonwealth Countries) (United Nations Organization) ವಿಚಾರಗಳನ್ನು ಈ ಆದರ್ಶ ರಾಜ್ಯದಲ್ಲಿ ಸ್ಫುಟವಾಗಿ ಕಾಣುತ್ತೇವೆ.

**ಪುಟ್ಟ ನಡುಗಡ್ಡೆ**

ಸಣ್ಣ ನಡುಗಡ್ಡೆಯ ರಾಜ್ಯ ಯುಟೋಪಿಯಾದ ಉದ್ದಳತೆ ಬಚ್ಚ ಬರಿಯ 200 ಮೈಲು. 54 ಸುಂದರ ಸಣ್ಣ ದೊಡ್ಡ ಪಟ್ಟಣಗಳು. ಜನರಾಡುವ ಭಾಷೆ ಒಂದೇ ಒಂದು. ನಡೆ-ನುಡಿ ಕಾಯದೆ ಕಾನೂನು ಸಂಘ-ಸಂಸ್ಥೆಗಳೆಲ್ಲವೂ ಒಂದೇ ತೆರನಾಗಿವೆ. ಅಮರೋತಿ ಅದರ ಕೇಂದ್ರ ಸ್ಥಳ. ರಾಜಧಾನಿ. ಸುತ್ತಲಿನ ಹಳ್ಳಿ-ಪಟ್ಟಣಗಳಿಂದ ಜನ ಸಲೀಲಾಗಿ ರಾಜಧಾನಿಗೆ ಬಂದು ತಾವೇ ಆಯ್ಕೆ ಮಾಡಿದ ರಾಜನೊಂದಿಗೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಹೋಗುವರು. ಅಲ್ಲಿ ಸಾರ್ವಜನಿಕ ಹಿತದ ಸಮಸ್ಯೆಗಳ ಹೊರತು ವೈಯಕ್ತಿಕ ಸಮಸ್ಯೆಗೆ ಆಸ್ಪದವಿಲ್ಲ.

## ಎಲ್ಲವೂ ಎಲ್ಲರಿಗಾಗಿ

ಇಲ್ಲಿ ಪಟ್ಟಣಗಳ ನೀಲಿನಕ್ಷೆ ಒಂದೆ ಬಗೆಯಾಗಿದೆ. ಎಲ್ಲ ಜೀವಿಗಳೂ 20 ಅಡಿ ಅಗಲವಿದ್ದು ಎಡಬಲದ ಗಟಾರುಗಳು ಯಾವಾಗಲೂ ಸ್ವಚ್ಛವಿರುವಂತೆ ನೋಡಿಕೊಳ್ಳಲಾಗುತ್ತದೆ. ಮನೆಗಳು ಸಹ ಸಾಲುಸಾಲಾಗಿದ್ದು ಒಂದೇ ಆಕಾರದ ಮೂರು ಮಹಡಿಗಳುಳ್ಳವಾಗಿವೆ. ಪ್ರತಿಯೊಂದು ಮನೆಗೆ ಕೇವಲ ಎರಡೇ ಎರಡು ಬಾಗಿಲುಗಳು, ಮುಂಬಾಗಿಲು ಬೀದಿಗೆ ಮುಖವಾಗಿದ್ದು, ಹಿಂಬಾಗಿಲುಗಳಿಗೆ ಚಿಲಕ ಕೊಂಡಿಗಳಿಲ್ಲ. ಯಾರು ಬೇಕಾದರೂ ಒಳಗೆ ಪ್ರವೇಶಿಸಬಹುದು. ಒಳಗೆ ಒಬ್ಬ ವ್ಯಕ್ತಿಗಂ ಸಂಬಂಧಿಸಿದ ವಸ್ತುವಿರುವುದಿಲ್ಲ. ಎಲ್ಲವೂ ಸಮಷ್ಟಿಗೆ ಸಂಬಂಧಿಸಿದ ಆಸ್ತಿಯೇ.

ಸುಂದರವಾದ ತೋಟ, ಫಲವತ್ತಾದ ಹೊಲಗಳು ಆ ದೇಶದಲ್ಲಿದ್ದು ತಮ್ಮ ಸಾಮರ್ಥ್ಯಕ್ಕನುಸಾರವಾಗಿ ಪಾಳಿಯ ಪ್ರಕಾರ ಜನ ಅಲ್ಲಿ ದುಡಿಯುತ್ತಾರೆ.

ಎಲ್ಲ ಪ್ರಜೆಗಳು ಒಂದೇ ಬಗೆಯ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ಆದರೆ ಗಂಡು ಹೆಣ್ಣು ವಿವಾಹಿತ-ಬ್ರಹ್ಮಚಾರಿಗಳ ಉಡುಪಿನ ನಡುವೆ ಸ್ವಲ್ಪ ವ್ಯತ್ಯಾಸವಿರುತ್ತದೆ. ಎಲ್ಲವೂ ತಮ್ಮ ತಮ್ಮ ಬಟ್ಟೆಗಳನ್ನು ತಾವೇ ಹೊಲಿದುಕೊಳ್ಳುವರು. ಎಲ್ಲ ಬಟ್ಟೆಗಳ ಬಣ್ಣವೂ ಒಂದೇ.

ಈ ಆದರ್ಶ ರಾಜ್ಯದಲ್ಲಿ ಹೆಣ್ಣು-ಗಂಡೆಂಬ ವ್ಯತ್ಯಾಸವಿಲ್ಲದೆ ಹೊಲದಲ್ಲಿ ದುಡಿಯುವರು, ಕೈಗಾರಿಕೆ ಕೆಲಸ ಮಾಡುವರು. ದಿನದಲ್ಲಿ ಆರು ತಾಸು ಕೆಲಸ ಪ್ರತಿ ಮೂರು ತಾಸಿನ ಅವಧಿಯನಂತರ ಎರಡು ತಾಸುಗಳ ಊಟ-ವಿಶ್ರಾಂತಿ, ಪುನಃ ಸಾಯಂಕಾಲ ಮೂರು ತಾಸು ಕಾಯಕ ಮಾಡುವರು. ರಾತ್ರಿ ಎಂಟು ಗಂಟೆಗೆ ಎಲ್ಲರೂ ಮಲಗುವರು; ದುಡಿಮೆ-ವಿಶ್ರಾಂತಿಯ ಅವಧಿಯನ್ನು ಹೊರತುಪಡಿಸಿ ಉಳಿದ ಅವಧಿಯಲ್ಲಿ ಅವರು ತಮತಮಗೆ ಒಗ್ಗುವ ಕಾಯಕದಲ್ಲಿ ನಿರತರಾಗುವರು. ಸಂಗೀತ, ಸಾಹಿತ್ಯಿಕ ಚರ್ಚೆ ನಡೆಸುವರು. ಆಟ ಮನರಂಜನೆಗಳಲ್ಲಿ ವೇಳೆ ಕಳೆಯುವರು, ವ್ಯಸನಕ್ಕೀಡುಮಾಡುವ ಆಟಗಳನ್ನು ಆಡುವಂತಿಲ್ಲ. ಬೇಟೆಯಾಡುವುದು, ಮೀನು ಹಿಡಿಯುವುದು, ಪ್ರಾಣಿ ವಧೆ ಅಲ್ಲಿ ನಿಷಿದ್ಧ.

ಬಡವರ ದುಡಿಮೆಯ ಮೇಲೆ ಬದುಕುವ ಸಿರಿವಂತರು ಅಲ್ಲಿಲ್ಲ. ಆಲಸಿಗಳಿಗೆ, ಉಡಾಳರಿಗೆ, ದುಂದುವೆಚ್ಚಗಾರರಿಗೆ, ದುರ್ಬೋಧನ ಮಾಡುವ ಆಲಸಿ ಧರ್ಮೋಪದೇಶಕರಿಗೆ, ಸ್ವಾಮಿಗಳಿಗೆ, ಪುರೋಹಿತರಿಗೆ, ಪೂಜಾರಿಗಳಿಗೆ, ಭಿಕ್ಷುಕರಿಗೆ ಆ ರಾಜ್ಯದಲ್ಲಿ ಸ್ಥಾನವಿಲ್ಲ. ಇಡಿಯ ಸಮಾಜದ ಅರ್ಧ ಭಾಗವಾದ ಸ್ತ್ರೀಯರಿಗೆಲ್ಲ ಒಂದಿಲ್ಲೊಂದು ಕೆಲಸ (ನೌಕರಿ) ಉಂಟು. ಒಟ್ಟಿನ ಮೇಲೆ ಸಮಾಜದ ಮೇಲೆ ದುಷ್ಪರಿಣಾಮ ಬೀರುವ ಯಾವ ಕಾರ್ಯವನ್ನೂ ಜರುಗಿಸುವುದಿಲ್ಲ.



ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಕಲ ಸರಕುಗಳನ್ನೊಳಗೊಂಡ ಅಂಗಡಿಗಳಿವೆ. ಪ್ರತಿಯೊಬ್ಬನೂ ತನತನಗೆ ಬೇಕಾದ ವಸ್ತ್ರಗಳನ್ನು ಅಲ್ಲೇ ಕೇಳಿ ಪಡೆದುಕೊಳ್ಳುವನು. ಉಪಭೋಗಿಸುವನು. ಆದರೆ ಸಂಗ್ರಹಿಸಿಕೊಳ್ಳುವುದು. ಕಾಯಿದೆ ಬಾಹಿರ, ಅಲ್ಲಿಯ ಎಲ್ಲ ವಸ್ತುಗಳೂ ಎಲ್ಲರ ಸೊತ್ತು. ಎಲ್ಲರ ಉಪಭೋಗಕ್ಕೆ ಇದ್ದವುಗಳು. ಆದರೆ ಯುವಕರು, ವಯಸ್ಸಾದವರಿಗೆ, ಮಕ್ಕಳಿಗೆ, ಮೊದಲು ಊಟ ಮಾಡಲು ಅನುವು ಮಾಡಿಕೊಡುವರು. ಹೆಣ್ಣು ಮಕ್ಕಳೇ ಅಡಿಗೆ ಮಾಡುವರು.

## ವಿವಾಹ ವಿಚ್ಛೇದನ

ಅಲ್ಲಿಯ ಮದುವೆಯ ಪದ್ಧತಿ ವಿಚಿತ್ರವಾಗಿದೆ. ಪ್ರಾಮಾಣಿಕಳಾದ ಮುದುಕಿಯೊಬ್ಬಳು ವರನಿಗೆ ಕನ್ಯೆಯರನ್ನು, ವಿಧವೆಯರನ್ನು ತೋರಿಸುವಳು. ಅದೇ ರೀತಿ ಕನ್ಯೆಯರಿಗೆ, ವಿಧವೆಯರಿಗೆ ಮದುವೆಯಾಗ ಬಯಸಿದ ಗಂಡುಗಳನ್ನು ವಿಧುರರನ್ನು ತೋರಿಸುವಳು. ಒಬ್ಬರಿಗೊಬ್ಬರು ಒಪ್ಪಿದರೆ ಮದುವೆ ನೆರವೇರುವುದು.

ವಿಚ್ಛೇದನಕ್ಕೆ ಅನುವುಂಟು. ವ್ಯಭಿಚಾರಿಯೆಂದು ಸಿದ್ಧವಾದರೆ ಬಿಡುಗಡೆಗೆ ಒಪ್ಪಿಗೆ ಸಿಗುವುದು. ವಿಚ್ಛೇದನ ಪಡೆದ ಸ್ತ್ರೀ ತಾನು ಮತ್ತೊಬ್ಬನೊಂದಿಗೆ ಪ್ರೀತಿ ವಿಶ್ವಾಸದಿಂದ ಜೀವಿಸುವುದಾದರೆ ಅದೇ ರೀತಿ ಪುರುಷನು ಮತ್ತೊಬ್ಬ ಸ್ತ್ರೀಯೊಂದಿಗೆ ಶಾಂತಿ ಸಮಾಧಾನದಿಂದ ಬಾಳುವುದಾದರೆ ನ್ಯಾಯಾಲಯ ಒಪ್ಪಿಗೆ ಕೊಡುವುದು.

## ಸಾಮಾಜಿಕ ಜೀವನ

ಆದರ್ಶ ರಾಜ್ಯದಲ್ಲಿ ಕೆಲವು ಕಾನೂನುಗಳುಂಟು. ಆದರೆ ಅಲ್ಲಿ ವಕೀಲರಿಲ್ಲ. ವಿದ್ವಾಂಸರಿಗೆ ಅಲ್ಲಿ ಅತ್ಯಂತ ಗೌರವ ಉಂಟು; ವೈದ್ಯರಿಗೆ ಹೆಚ್ಚು ಮರ್ಯಾದೆಯಿಲ್ಲ. ಆ ರಾಜ್ಯದಲ್ಲಿ ನಾಲ್ಕು ಹಾಸ್ಪಿಟಲುಗಳಿವೆ. ಅವು ಸಕಲ ಸೌಲಭ್ಯಗಳಿಂದ ಕೂಡಿವೆ. ಒಂದೊಂದೂ ಒಂದು ಪಟ್ಟಣದಷ್ಟು ವಿಸ್ತಾರವಾಗಿದೆ. ಅಲ್ಲಿ ಸಿಗುವ ಔಷಧೋಪಚಾರವು ಅತ್ಯಂತ ಉತ್ಕೃಷ್ಟವಾಗಿರುತ್ತದೆ. ರೋಗಿಗಳಿಗೆ ಸಂತೋಷ ಸಮಾಧಾನವಾಗುತ್ತದೆ. ಗುಣವಾಗದ ಸಹಿಸಲಸಾಧ್ಯವಾದ ನೋವಿನಿಂದ ಕೂಡಿದ ರೋಗವಿದ್ದರೆ ಅಂತಹ ರೋಗಿಯು ಆತ್ಮಹತ್ಯೆ ಮಾಡಿಕೊಳ್ಳಬಹುದು. ಇದಕ್ಕೆ ವ್ಯತಿರಿಕ್ತವಾದ ಆತ್ಮಹತ್ಯೆಗೆ ಪ್ರತಿಬಂಧ ಉಂಟು.

ಈ ರಾಜ್ಯದ ಪ್ರಜೆಗಳು ಯುದ್ಧಪ್ರಿಯರಲ್ಲ. ಯುದ್ಧಗಳು ಸಂಭವಿಸದಂತೆ ನೋಡಿಕೊಳ್ಳುವರು. ಒಂದುವೇಳೆ ಯುದ್ಧ ಮಾಡುವ ಪ್ರಸಂಗ ಬಂದರೆ ಹೋರಾಡಿ ಗೆಲ್ಲುವರು.

ಅವರು ಕಬ್ಬಿಣವನ್ನು ಅತ್ಯಂತ ಬೆಲೆಯುಳ್ಳ ಧಾತುವೆಂದು ಪರಿಗಣಿಸುವರು. ಯಾಕೆಂದರೆ ಅದು ಬಹುಪಯೋಗಿ ಧಾತು. ಅವರು ಮಣ್ಣಿನ - ಕಂಚಿನ ಪಾತ್ರೆಯಲ್ಲಿ

ಉಣ್ಣುವರು. ಆದರೆ ಬಂಗಾರ ಬೆಳ್ಳಿಯ ಪಾತ್ರೆಗಳನ್ನು ಅಲಂಕಾರದ ವಸ್ತುಗಳಂತೆ ಮನೆಯಲ್ಲಿ ಉಪಯೋಗಿಸುವರು. ಆದರೆ ಚಿನ್ನ ಬೆಳ್ಳಿಗಳಿಂದ ಮಾಡಿದ ಬೇಡಿಗಳನ್ನು ಕಾರಾಗೃಹದಲ್ಲಿಯ ಸೆರೆಯಾಳುಗಳ ಕೈ ಕಾಲುಗಳಿಗೆ ತೊಡಿಸುವರು. ಪರದೇಶದವರು ಬೆಳ್ಳಿ-ಬಂಗಾರಗಳಿಗೆ ಹೆಚ್ಚು ಬೆಲೆ ಕೊಡುವುದನ್ನು ಇವರು ಮೂದಲಿಸುವರು.

**ದೇವರು**

ಇಲ್ಲಿಯ ಜನರು ಆಚರಿಸುವ ಧರ್ಮವು ವಿಚಿತ್ರವಾಗಿದೆ. ಸರ್ವಸಾಮಾನ್ಯವಾಗಿ ಅಗೋಚರವೂ ಅನಿರ್ವಚನೀಯವೂ ಶಾಶ್ವತವೂ ಸರ್ವಾಂತರ್ಯಾಮಿಯೂ ಆದ ಶಕ್ತಿಯೇ ದೇವರೆಂದು ಅವರು ತಿಳಿದಿದ್ದಾರೆ. ಸರ್ವಶಕ್ತನಾದ ಈ ದೇವನೇ ಸಕಲರ ತಂದೆಯಾಗಿರುವನೆಂದು ಭಾವಿಸಿದ್ದಾರೆ.

**ಧರ್ಮ**

ಚರ್ಚುಗಳು ಶ್ರೇಷ್ಠ ಶಿಲ್ಪಕಲೆಯಿಂದ ಭೂಷಿತವಾಗಿವೆ ವಿಶಾಲವಾಗಿವೆ. ಅಗಣಿತ ಜನರು ಒಂದೇ ಒಂದು ಸಮಯಕ್ಕೆ ಬಂದು ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸಬಹುದಾಗಿದೆ. ತಿಂಗಳ ಮೊದಲ ಹಾಗೂ ಕೊನೆ ದಿನಗಳಲ್ಲಿ ಪ್ರಾರ್ಥನಾ ಸಭೆ ಜರುಗುತ್ತವೆ. ಪ್ರಾಣಿಗಳನ್ನು ಕೊಲ್ಲುವುದು ಧರ್ಮಬಾಹಿರ. ಪ್ರೀತಿ ದಯಾಮೂರ್ತಿಯಾದ ದೇವರು ಪ್ರಾಣಿಹಿಂಸೆಯಿಂದ ಸುಪ್ರೀತನಾಗುವುದಿಲ್ಲ. ಸಕಲ ಪ್ರಾಣಿಗಳು ಬದುಕಬೇಕೆಂದೇ ದೇವರು ಅವುಗಳನ್ನು ಹುಟ್ಟಿಸಿದ್ದಾನೆ. ಪರಮಾತ್ಮನನ್ನು ಹಾಡಿ ಸಂತೋಷಪಡಿಸಬಹುದು. ಆದರೂ ಪ್ರತಿಯೊಬ್ಬ ಪ್ರಜೆಯೂ ತನಗೆ ಸರಿಕಂಡ ಧರ್ಮವನ್ನು ಆಚರಿಸಲು ಹಕ್ಕುಳ್ಳವನಾಗಿದ್ದಾನೆ. ಯಾರೂ ಅವನನ್ನು ದ್ವೇಷಿಸುವಂತಿಲ್ಲ.

**ಅನುಭವ ಮಂಟಪ ಯುಟೋಪಿಯಾಕ್ಕೆ ಮಾದರಿ**

ಬಸವಣ್ಣನವರ ನೇತೃತ್ವದಲ್ಲಿ 12 ನೆಯ ಶತಮಾನದಲ್ಲಿ ಸ್ಥಾಪಿಸಲ್ಪಟ್ಟ "ಅನುಭವ ಮಂಟಪ"ದಲ್ಲಿ ಮೂಡಿ ಬಂದ "ಕಲ್ಯಾಣರಾಜ್ಯ"ದ ಸಿದ್ಧಾಂತಗಳಿಗೂ "ಯುಟೋಪಿಯಾ" ರಾಜ್ಯದ ಸಿದ್ಧಾಂತಗಳಿಗೂ ಹೆಚ್ಚು ಸಾಮ್ಯವನ್ನು ಕಾಣಬಹುದಾಗಿದೆ. ಏಕದೇವೋಪಾಸನೆ, ಸ್ತ್ರೀ-ಪುರುಷರಲ್ಲಿ, ಸಮಾನತೆ, ವರ್ಗರಹಿತ ಸಮಾಜ ರಚನೆ, ದಾಸೋಹ, ಕಾಯಕ, ಸಕಲ ಜೀವಾತ್ಮರಿಗೆ ಲೇಸ ಬಯಸುವದು, ಗಣಾಚಾರ ಇತ್ಯಾದಿ ಅನುಭವ ಮಂಟಪದ ತತ್ವಗಳು ಕರ್ನಾಟಕದ ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ, ಕ್ರಾಂತಿಯನ್ನುಂಟು ಮಾಡಿದ್ದನ್ನು ನೋಡುತ್ತೇವೆ.

ಅದನ್ನು ಜಾಗತಿಕ ಮಟ್ಟದಲ್ಲಿ ರೂಪುಗೊಂಡ ಇಸ್ಲಾಂ ರಾಷ್ಟ್ರಗಳ ಒಕ್ಕೂಟ, ಸಂಯುಕ್ತ ರಾಷ್ಟ್ರಗಳ ಸಂಘ, ಕಾಮನ್‌ವೆಲ್ತ್ ರಾಜ್ಯಗಳ ಒಕ್ಕೂಟ ಮುಂತಾದ ಸಂಘ-



ಒಕ್ಕೂಟಗಳಿಗೆ ಹೋಲಿಸಿದರೆ ತಪ್ಪಾಗಲಾರದು. ಮೂರ್‌ನದು ಜ್ಞಾನ. ಬಸವಣ್ಣನದು ಕ್ರಿಯೆ. ಆದರೆ ಮೂರ್‌ನಂತೆ ಬಸವಣ್ಣನ ವಿಚಾರಗಳಿಗೆ ಜಾಗತಿಕ ಮಟ್ಟದಲ್ಲಿ ಪ್ರಚಾರ ಸಿಗುವಲ್ಲಿ ಕನ್ನಡಿಗರು ಅದರಲ್ಲೂ ಲಿಂಗಾಯತರು ಅದೆಷ್ಟು ಶ್ರಮವಹಿಸಬೇಕೆಂಬುದನ್ನು ಅರಿಯಬಹುದು.

ಈ ನಿಟ್ಟಿನಲ್ಲಿ ರೆ.ಚೆನ್ನಪ್ಪ ಉತ್ತಂಗಿಯವರ **'ಅನುಭವ ಮಂಟಪದ ಐತಿಹಾಸಿಕತೆ'** ಎಂಬ ಗ್ರಂಥದ ಕೊನೆಯ ಭಾಗದ ಕೆಲವು ವ್ಯಾಖ್ಯೆಗಳನ್ನು ಉದ್ಧರಿಸಿ (ಪುಟ. ೧೦೮-೧೧೦) ನನ್ನೀ ಅಭಿಪ್ರಾಯವನ್ನು ಸಮಾಪ್ತಿಗೊಳಿಸುತ್ತೇನೆ.

ಅನುಭವ ಮಂಟಪವು ಯಾರ ಸೊತ್ತಲ್ಲ. ಯಾರ ಅಭಿಮಾನವೂ ಅದನ್ನು ಉಳಿಸದು, ದುರಭಿಮಾನವೂ ಅದನ್ನು ಅಳಿಸದು. ಅದು ಐತಿಹಾಸಿಕವಾಗಿದ್ದರೆ ನಿಲ್ಲುವುದು. ಇಲ್ಲವಾದರೆ ಬಿದ್ದು ಹೋಗುವುದು. ಅದಕ್ಕಾಗಿ ಯಾರೂ ವ್ಯಥೆಪಡಬೇಕಾಗಿಲ್ಲ. **ಅನುಭವ ಮಂಟಪದ ಹಿಂದೆ ಒಂದು ದಿವ್ಯವ್ಯಕ್ತಿ ಇದೆ. ಆ ವ್ಯಕ್ತಿಯಲ್ಲಿ ದಿವ್ಯವಾದ ಶಕ್ತಿ ಇದೆ.** ಆ ಶಕ್ತಿಯು ಇಂದಿಗೂ ಅದರಲ್ಲಿದೆ. ಅದನ್ನು ಹೊಂದತಕ್ಕ ಪಾತ್ರಗಳು ಅದಕ್ಕಾಗಿ ಸಿದ್ಧವಾಗಿರಬೇಕಾಗಿದೆ. ಆಗ ಮಾತ್ರ ಅದು ತನ್ನ ಪ್ರಭಾವವನ್ನು ಹೊರಹೊಮ್ಮುವುದು, ಅನುಭವ ಮಂಟಪದ ಇತಿಹಾಸವು ಸತ್ಯವಾಗಬಹುದು. ಇಲ್ಲವೆ ಸುಳ್ಳಾಗಬಹುದು. ಆದರೆ **ಅನುಭಾವವು** ಮಾತ್ರ ಎಂದಿಗೂ ಸುಳ್ಳಾಗಲಾರದು. ಆದುದರಿಂದ ಅನುಭಾವವು ಇದ್ದಲ್ಲಿ ಅನುಭವ ಮಂಟಪವು ಹುಟ್ಟಿ ಬರುವುದು ಸಹಜ. ಈ ಬಗೆಗೆ ಇತಿಹಾಸ ಸಂಶೋಧಕರ ಹೃದಯವು ಯಥಾರ್ಥ ಹಾಗೂ ವಿಶಾಲವಾಗಿರಬೇಕಲ್ಲದೆ ಅವರ ದೃಷ್ಟಿಯು ಸೂಕ್ಷ್ಮ ಹಾಗೂ ನಿಷ್ಕಲಂಕವಾಗಿರಬೇಕೆಂದು ತೋರಿಸುವುದಕ್ಕೆ ಈ ಲೇಖನಗಳನ್ನು ಬರೆದದ್ದಾಯಿತು. **ಆದರೆ ಅನುಭವ ಮಂಟಪದ ಬಗೆಗೆ ಇನ್ನೂ ಹೆಚ್ಚು ಸಂಶೋಧನೆ ನಡೆಯಿಸಿ ಅದು ಜಗತ್ತಿನ ಅನುಭಾವಿಗಳ ಮಧ್ಯದಲ್ಲಿ ಕಂಗೊಳಿಸುವುದೊಂದು ಹೂದೋಟವೆನಿಸುವಂತೆ ಸರ್ವಾಂಗ ಸುಂದರವಾದ ಒಂದು ಗ್ರಂಥವನ್ನು ಬರೆಯಬೇಕೆಂಬ ಹೆಬ್ಬಯಕೆಯೂ ನನ್ನಲ್ಲಿ ಬಹುಕಾಲದಿಂದ ಮನೆ ಮಾಡಿಕೊಂಡಿದೆ. ಆದರೆ ಈ ಇಳಿವಯಸ್ಸಿನಲ್ಲಿ ಭಾರವಾದ ಇಂತಹ ಕಾರ್ಯವು ನನ್ನಿಂದಾಗುವದು ಬಹು ಸಂದೇಹದ ಮಾತು. ಈಶ್ವರ ಸಂಕಲ್ಪವಿದ್ದರೆ ಮಾತ್ರ ಅದು ಹೊರ ಬೀಳುವುದು.**

ಜಗತ್ತಿನ ಇತಿಹಾಸದಲ್ಲಿಯೇ ಅನುಪಮವಾದ ಈ ಅನುಭವ ಮಂಟಪವನ್ನು ಸ್ಥಾಪಿಸಿದ ಬಸವಣ್ಣನವರು ಎಣ್ಣೆ ಬಂದಾಗ ಗಾಣ ಮುರಿಯಿತೆಂಬ ಗಾದೆಯಂತೆ ಮಧ್ಯ ಕಾಲದಲ್ಲಿಯೇ ಅದಕ್ಕೆ ವಿಮುಖರಾಗಿ ಲಿಂಗೈಕ್ಯರಾಗುವ ಪ್ರಸಂಗ ಬಂತು. ಇದು ಅತ್ಯಂತ ಶೋಚನೀಯವಾದ ಸಂಗತಿ. 'ಮಹಾಮನೆ'ಯ ಕೊನೆಯ ದಿನಗಳ ಇತಿಹಾಸವನ್ನು

ನಿಟ್ಟುಸಿರಿಟ್ಟು ಕಣ್ಣೀರು ಕೋಡಿವರಿದು ಹೇಳುವ ಗ್ರಂಥಗಳೆಂದರೆ ಕಾಲಜ್ಞಾನ ವಚನಗಳು. ಇವುಗಳಲ್ಲಿ ಬಸವಣ್ಣನವರು ಕಲ್ಯಾಣವನ್ನು ಬಿಡುವ ಕಾಲಕ್ಕೆ ಚೆನ್ನಬಸವಣ್ಣನವರನ್ನು ಕರೆದು ಹೇಳಿದ ವಚನವು ಹೃದ್ವೇಧಕವಾಗಿದೆ.

ನಾನು ಬಂದ ಕಾರ್ಯಕ್ಕೆ ನೀವು ಬಂದಿರಿ
ನೀವು ಬಂದ ಕಾರ್ಯಕ್ಕೆ ನಾನು ಬಂದೆ
ನಾನು ನೀವು ಬಂದ ಕಾರ್ಯಕ್ಕೆ ಬಂದಾತ ಅಲ್ಲಮ ಪ್ರಭುದೇವರು
ಮುಂದೆ ಕೆಲವು ದಿವಸಕ್ಕೆ ಕಲ್ಯಾಣವೆಂಬುದು ಪ್ರಣತೆಯಾಯಿತ್ತು
ನಾನು ತೈಲವಾದೆನು; ನೀವು ಬತ್ತಿಯಾದಿರಿ
ಪ್ರಭುದೇವರು ಜ್ಯೋತಿಯಾದರು
ಪ್ರಣತಿ ಒಡೆಯಿತ್ತು !
ತೈಲವರತಿತ್ತು! ಜ್ಯೋತಿ ಬಯಲಾಗಿತ್ತು!!!

12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ, ಅನುಭವ ಮಂಟಪವನ್ನು ಸಂಸ್ಥಾಪಿಸುವ ಅತ್ಯಂತ ಗಂಭೀರವಾದ ಕಾರ್ಯದಲ್ಲಿ ಜ್ಯೋತಿಯಾಗಿ ಮೆರೆದವರು ಪ್ರಭುದೇವರು. ಬತ್ತಿಯಂತೆ ಸ್ವಲ್ಪ ಸುಟ್ಟವರು ಚೆನ್ನಬಸವಣ್ಣನವರು. **ಎಣ್ಣೆಯಾಗಿ ಸಂಪೂರ್ಣ ಸುಟ್ಟವರು ಬಸವಣ್ಣನವರು. ಇದೇ ಅವರು ಜಗತ್ತಿಗೆ ಬಿಟ್ಟು ಹೋದ ಆದರ್ಶ.**

□

ಭಕ್ತಿಯಿಲ್ಲದ ಬಡವ ನಾನಯ್ಯಾ –
ಕಕ್ಕಯ್ಯನ ಮನೆಯಲು ಬೇಡಿದೆ.
ಚನ್ನಯ್ಯನ ಮನೆಯಲು ಬೇಡಿದೆ.
ದಾಸಯ್ಯನ ಮನೆಯಲೂ ಬೇಡಿಜ.
ಎಲ್ಲಾ ಪುರಾತನರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ.
**- ಬಸವಣ್ಣ**

# ಕಾಲ

**ಎಂ.ಎಸ್. ಚಂದ್ರಶೇಖರ ಅಯ್ಯರ್**

**ಕಾ**ಲ ಎಂದರೇನು ಎಂದು ನಿಖರವಾಗಿ ಹೇಳುವುದು ಕಷ್ಟ. ಯಾವ ರೀತಿ ಹೇಳಿದರೂ, ಅದಕ್ಕೆ ಆಕ್ಷೇಪವಿದೆ. ಕಾಲವನ್ನು ಅಳೆಯಲು ಕಾಲಗಮನ ಪರಿಜ್ಞಾನವನ್ನು ಪಡೆಯಲು ಒಂದು ಘಟನೆಯ ಪಕ್ಕದಲ್ಲಿ ಇನ್ನೊಂದು ಘಟನೆ ಇರಬೇಕು. ಎರಡು ಘಟನೆಗಳ ಮಧ್ಯದ ಅವಧಿಯಿಂದ ಕಾಲನಿರ್ಣಯ ಮಾಡಬಹುದು.

ಪ್ರಾಕೃತಿಕ ಗಡಿಯಾರದಲ್ಲಿ ಸೂರ್ಯಚಂದ್ರರು ಹನ್ನೆರಡು ರಾಶಿಗಳ ಮೂಲಕ ಹಾದುಹೋಗುತ್ತಾ ಕಾಲವನ್ನು ಅಳೆಯಲು ನಮಗೆ ನೆರವಾಗುತ್ತಾರೆ. ಹಾಗೆಯೇ ಕೃತಕ ಗಡಿಯಾರದಲ್ಲಿ ಸಣ್ಣ ಹಾಗೂ ದೊಡ್ಡ ಮುಳ್ಳುಗಳು ಹನ್ನೆರಡು ಅಂಕಗಳನ್ನು ದಾಟುತ್ತಾ ಸಮಯವನ್ನು ತಿಳಿಸುತ್ತದೆ. ಚಿಕ್ಕ ಯಂತ್ರವಾದ ಕೃತಕ ಗಡಿಯಾರದಿಂದ ನಿಮಿಷ, ಗಂಟೆ ಹಾಗೂ ತಾರೀಖು ಮತ್ತು ದಿನಗಳನ್ನು ತಿಳಿಯಬಹುದಾದರೆ ಪ್ರಕೃತಿಕ ಖಗೋಳ ಗಡಿಯಾರದಿಂದ ದಿನ, ಮಾಸ ಮತ್ತು ವರ್ಷಗಳನ್ನು ತಿಳಿಯಬಹುದು.

### ಕಾಲದ ಪುರಾತನ ಪ್ರತಿನಿಧಿ ಸೌರ ಗಡಿಯಾರ

ಸೌರ ಗಡಿಯಾರಕ್ಕೂ ಆಧುನಿಕ ಹಲ್ಲಿನ ಗಡಿಯಾರಕ್ಕೂ ಸಮಯದ ವ್ಯತ್ಯಾಸ ಕೆಲವು ನಿಮಿಷಗಳು. ವ್ಯತ್ಯಾಸವನ್ನು ಪಟ್ಟಿಯಲ್ಲಿ ನಿರೂಪಿಸಲಾಗಿದೆ.

| ತಿಂಗಳು | ತಾರೀಖು | ವ್ಯತ್ಯಾಸ ನಿಮಿಷಗಳಲ್ಲಿ | | |
|---|---|---|---|---|
| ಜನವರಿ.... | 1.10.20... | 3 ನಿ. | 8 ನಿ. | 11 ನಿ. |
| ಫೆಬ್ರವರಿ.... | 1.10.20.... | 14 ನಿ. | 14 ನಿ. | 14 ನಿ |
| ಮಾರ್ಚ್.... | 1.10.20..... | 12 ನಿ. | 1 ನಿ. | 8 ನಿ |
| ಏಪ್ರಿಲ್.... | 1.10.20.... | 4 ನಿ | 1 ನಿ | -1 ನಿ |
| ಮೇ.... | 1.10.20... | -3 ನಿ | -4 ನಿ | -3 ನಿ |
| ಜೂನ್.... | 1.10.20.... | -2 ನಿ | -1 ನಿ | -1ನಿ |
| ಜುಲೈ.... | 1.10.20.... | -4 ನಿ | -5 ನಿ | - 6 ನಿ |

| | | | | |
|---|---|---|---|---|
| ಆಗಸ್ಟ್.... | 1.10.20.... | 5 ನಿ- | 5 ನಿ | -3 ನಿ |
| ಸೆಪ್ಟೆಂಬರ್.... | 1.10.20.... | 0- | 3 ನಿ- | -6 ನಿ |
| ಅಕ್ಟೋಬರ್.... | 1.10.20.... | -0 | -3 ನಿ | - 6 ನಿ |
| ನವೆಂಬರ್.... | 1.10.20.... | -16 | -16 ನಿ | -14 ನಿ |
| ಡಿಸೆಂಬರ್.... | 1.10.20... | -11 | -7 ನಿ | -10 ನಿ |

+ ಎಂದಿದ್ದರೆ.... ಕೂಡಿಸಬೇಕು

– ಎಂದಿದ್ದರೆ.... ಕಳೆದುಹಾಕಬೇಕು

ಗ್ರೀಕರು ತಮ್ಮ ರೇಖಾಗಣಿತ ಉಪಯೋಗಿಸಿ ಸೌರ ಗಡಿಯಾರದಲ್ಲಿ ಪ್ರಗತಿಯನ್ನು ಸಾಧಿಸಿದರು. ಕ್ರಿ.ಪೂ. 250ರಲ್ಲಿ ಪರ್ಗದ "ಅವಲೋನಿಯಸ್" ಅರ್ಧ ಗೋಳಾಕಾರದ ಮುಖ ಘಟಕದ ಮೇಲೆ ಗಂಟೆ ರೇಖೆಗಳನ್ನು ಕೊರೆದರು. ಇದರಿಂದ ಬಹಳ ನಿಖರ ಕಾಲಗಣನೆ ಸಾಧ್ಯವಾಯಿತು. "ಟೋಲೇಮಿ" ಎಂಬುವರು ಕ್ಷಿತಿಜೀಯ, ಭಾಗಕ್ಕೆ ಅನುಸರಿಸಿ ವಿವಿಧ ಕೋನಗಳಲ್ಲಿ ರೇಖಾ ಗಣಿತಕ್ಕೆ ಅನುಗುಣವಾಗಿ ನೆರಳನ್ನು ವೀಕ್ಷಿಸಿ ಕಾಲಗಣನೆ ಮಾಡುವ ವಿಧಾನವನ್ನು ಗೊತ್ತುಮಾಡಿದರು. ಇದಲ್ಲದೆ ಗ್ರೀಕರು ಲಂಬ, ಕ್ಷಿತಿಜ ಮತ್ತು ವಾರೆಯ, ಮುಖ ಫಲಕಗಳಲ್ಲಿ ಗಂಟೆಗಳ ಗುರುತು ಉಪಯೋಗಿಸುತ್ತಿದ್ದರು. ಇದು ಅಥೆನ್ಸ್‌ನಲ್ಲಿರುವ ಕ್ರಿ.ಪೂ. 100 ರಲ್ಲಿ ನಿರ್ಮಿಸಿದ "ಗಾಳಿಗೋಪುರ"ದಲ್ಲಿರುವ ಎಂಟು ಸೌರ ಗಡಿಯಾರಗಳಿಂದ ವಿಧಿತವಾಗುತ್ತದೆ.

ರೋಮೆನ್ ಶಿಲ್ಪಿ "ಮಾರ್ಕಸ್‌ವಿಟ್ರುವಿಯಸ್" ಬರೆದಿರುವ ಶಿಲ್ಪಕಲೆಗಳ ಪ್ರಕಾರ ಸಾಮ್ರಾಟರು ಕ್ರಿ.ಪೂ. 250ರಲ್ಲಿಯೇ ಸೌರ ಪದ್ಧತಿಯನ್ನು ಕರಗತಪಡಿಸಿಕೊಂಡಿದ್ದರು.

ಗ್ರೀಕರ ತತ್ವ ಮತ್ತು ಆಕಾರ ನೀತಿಯನ್ನು ಅನುಸರಿಸಿ ಅರಬ್ಬರೂ ಸಹ ಸೌರ ಗಡಿಯಾರದ ತಯಾರಿಕೆಗೆ ಮಹತ್ವ ನೀಡಿದರು. "ತ್ರಿಕೋನಮಿತಿ" ತತ್ವಗಳ ಆಧಾರದಿಂದ ಸೌರ ಗಡಿಯಾರಗಳಲ್ಲಿ ವಿಧಾನ ಮತ್ತು ಅಕಾರಗಳಿಗೆ ಸಂಬಂಧಿಸಿದ ಅನೇಕ ಮಾರ್ಪಾಡುಗಳನ್ನು ಮಾಡಿದರು.

**ಕಾಲವಿಭಜನೆ**

ಒಂದು ರಾತ್ರಿ, ಒಂದು ಹಗಲು ಸೇರಿ ಒಂದು ದಿನ. ಇದೇ ಎಲ್ಲದಕ್ಕೂ ಮೊದಲು ಕಂಡುಹಿಡಿದ ಕಾಲವಿಭಜನೆ. ಇದನ್ನು ಗುರುತಿಸುವುದು ಬಹಳ ಸುಲಭ. ದಿನ, ಅನಂತರ ತಿಂಗಳು, ಅನಂತರ ವರ್ಷ ಎನ್ನುವ ಕಾಲವಿಭಜನೆ. ಕ್ರಮೇಣ 30 ದಿನಗಳಿಗೆ ಒಂದು ತಿಂಗಳು ಇಂತಹ 12 ತಿಂಗಳುಗಳಿಗೆ ಒಂದು ವರ್ಷ ಅನ್ನುವುದು ಬಳಕೆಗೆ ಬಂತು. ಆ ಕಾಲಕ್ಕೆ ಇದು ಅತಿ ಮುಖ್ಯವಾದ ಪರಿಶೋಧನೆ. ವರ್ಷಕ್ಕೆ 12 ತಿಂಗಳುಗಳೆಂದು,



ಒಂದು ತಿಂಗಳಿಗೆ 30 ದಿನಗಳೆಂದು ಆದಿಮಾನವ ಏಳೆಂಟು ಸಾವಿರ ವರ್ಷಗಳ ಹಿಂದೆಯೇ ಅನುಸರಿಸುತ್ತಿದ್ದರು.

ಅಂದಿನಿಂದ 12 ಅನ್ನುವ ಸಂಖ್ಯೆ ಅತ್ಯಂತ ಬಳಕೆಯಲ್ಲಿದೆ. 12ನ್ನು 2, 3, 4, 6 ರಿಂದ ನಿಶ್ಶೇಷವಾಗಿ ಭಾಗಿಸಬಹುದು. 12ನ್ನು ನಾವು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಹಣ್ಣುಗಳನ್ನು ಡಜನ್ ಲೆಕ್ಕದಲ್ಲಿ ಕೊಳ್ಳುತ್ತೇವೆಯೇ ಹೊರತು 10ರ ಲೆಕ್ಕದಲ್ಲಿ ಅಲ್ಲ. ಹಾಗೆಯೇ 1ಅಡಿಗೆ 12 ಅಂಗುಲ, 1 ಪೌಂಡ್‌ಗೆ-12 ಷಿಲಿಂಗ್ (Shilling) 12 ಡಜನ್‌ಗೆ ಒಂದು ಗ್ರೋಸ್, ದ್ವಾದಶಾ ರಾಶಿ ಹೀಗೆ ಎಲ್ಲವೂ ದ್ವಾದಶದಲ್ಲಿ ಹೇಳುವ ಅಭ್ಯಾಸವಾಗಿದೆ.

**ಅಹೋರಾತ್ರಿ**

ಅಹೋರಾತ್ರಿ ಅನ್ನುವ ಪದದ ಮಧ್ಯದಲ್ಲಿರುವ ಎರಡು ಅಕ್ಷರಗಳನ್ನು ತೆಗೆದುಕೊಂಡು ಹೋರಾ ಎನ್ನುವ ಪದವನ್ನು ರೂಪಿಸಿದ್ದಾರೆ. "ಹೋರಾಲಜಿ" ಎಂದರೆ ಕಾಲಮಾನಶಾಸ್ತ್ರ, ಹೊರಾಲಜಿ ಗ್ರೀಕ್ ಭಾಷೆಯಿಂದ ಬಂದದ್ದು ಎಂದು ಹೇಳುತ್ತಾರೆ. ಅದು ಗ್ರೀಕ್‌ನಿಂದ ಬಂದಿದ್ದಲ್ಲ. ಅದು ಸಂಸ್ಕೃತ ಶಬ್ದ. ಸಂಸ್ಕೃತದಿಂದ ಗ್ರೀಕ್‌ಗೆ ಹೋಗಿದೆಯೇ ಹೊರತು, ಗ್ರೀಕ್‌ನಿಂದ ಸಂಸ್ಕೃತಕ್ಕೆ ಬಂದಿಲ್ಲ. ಕಾಲಮಾನಶಾಸ್ತ್ರಕ್ಕೆ ಮತ್ತೊಂದು ಹೆಸರು ಹೋರಾಶಾಸ್ತ್ರ. ಇದು ಅತ್ಯಂತ ಪ್ರಾಚೀನ ವಿಜ್ಞಾನ. ಈ ಹೋರಾಶಾಸ್ತ್ರಕ್ಕೆ "ಅತ್ರಿಮಹಾಋಷಿಯೇ" ಮೂಲ ಪುರುಷ.

**ಆಸ್ಟ್ರೋಲ್ಯಾಬ್**

ಇದು ಹೋರಾ ಶಾಸ್ತ್ರಾಧ್ಯಯನದಲ್ಲಿ ಮುಖ್ಯವಾದ ಎರಡನೆಯ ಅಳತೆ. ನಕ್ಷತ್ರ ಸ್ಥಾನ ನಿರ್ಣಯ. ಖಗೋಳದ ಮೇಲೆ ಯಾವ ನಕ್ಷತ್ರ ಎಲ್ಲಿದೆ ಎರಡು ನಕ್ಷತ್ರಗಳ ಮಧ್ಯೆ ಎಷ್ಟು ಡಿಗ್ರಿ ಕೋನವಿದೆ ಎಂಬುದನ್ನು ತಿಳಿಸುತ್ತದೆ. ಇದು ತಿಳಿದರೆ ಸೂರ್ಯ, ಚಂದ್ರ, ಗ್ರಹಗಳು ಯಾವ ಸಮಯದಲ್ಲಿ ಖಗೋಳದ ಮೇಲೆ ಎಲ್ಲಿರುತ್ತವೆ ಎಂದು ನಿರ್ಣಯಿಸಬಹುದು. ಈ ಉಪಕರಣವನ್ನು ಕ್ರಿ.ಪೂ. 3ನೆಯ ಶತಮಾನದಲ್ಲಿ ಗ್ರೀಕರು ಕಂಡುಹಿಡಿದರು.

**ತುರೀಯ (ಕ್ವಾಡ್ರಂಟ್)**

ಅತ್ರಿ ಮಹರ್ಷಿಯು ತುರೀಯಾ ಎನ್ನುವ ಯಂತ್ರವನ್ನು ಸೂರ್ಯಗ್ರಹಣ ಸಮಯದಲ್ಲಿ ಬಳಸಿದರೆಂದು ಋಗ್ವೇದದಲ್ಲಿ ತಿಳಿಸುತ್ತದೆ. ಪಾಶ್ಚಾತ್ಯರು "ಕ್ವಾಡ್ರಂಟ್" ಎನ್ನುವ ಯಂತ್ರವನ್ನು ಉಪಯೋಗಿಸುತ್ತಾರೆ. ಇದರ ಸಹಾಯದಿಂದ ಯಾವ ನಕ್ಷತ್ರವಾದರೂ ಮಧ್ಯಾಹ್ನದ ರೇಖೆಯನ್ನು (ಮೆರಿಡಿಯನ್) ದಾಟಿದಾಗ ಅದರ ದೂರವನ್ನು ಆ ಸಮಯವನ್ನು ತಿಳಿದುಕೊಳ್ಳಬಹುದು. ಇದರ ಸಹಾಯದಿಂದ ಧ್ರುವ

ನಕ್ಷತ್ರದಿಂದ ಯಾವ ನಕ್ಷತ್ರ ಎಷ್ಟು ದೂರದಲ್ಲಿದೆ ಎಂದು ತಿಳಿದು ಕೊಳ್ಳಬಹುದು. ಸುಪ್ರಸಿದ್ಧ ಡೇನಿಷ್ ಖಗೋಳ ಶಾಸ್ತ್ರಜ್ಞ "ಟೈಕೋಬ್ರಾಹೆ" (1546-1601) ಉಪಯೋಗಿಸಿದ "ಕ್ವಾಡ್ರಂಟಿನ" ವ್ಯಾಸವು19 ಅಡಿಗಳು ಅಂದರೆ ಒಂದು ಡಿಗ್ರಿಗೆ 4 ಅಂಗುಲಗಳು. ಕೀಲುಗಳ ಸಹಾಯದಿಂದ ತಿರುಗುತ್ತಿದ್ದ ಈ ಕ್ವಾಡ್ರಂಟನ್ನು ಬಳಸಿ ಡಿಗ್ರಿಯ ಇನ್ನೂರನೇ ಒಂದು ಭಾಗದಷ್ಟು ನಿಖರತೆಯನ್ನು ಸಾಧಿಸಿದರು.

**ದ್ವಾದಶ ರಾಶಿಗಳು**

| | ಲ್ಯಾಟಿನ್ ಹೆಸರು | ಸಂಸ್ಕೃತ ಹೆಸರು | ಸೂರ್ಯಸಿದ್ಧಾಂತ ಪ್ರಕಾರ ಸೂರ್ಯನಿರುವ ಅವಧಿ |
|---|---|---|---|
| 1. | ಏರಿಸ್.... | ಮೇಷರಾಶಿ.... | 30.93528 |
| 2. | ತಾರಸ್.... | ವೃಷಭರಾಶಿ.... | 31.43028 |
| 3. | ಜೆಮಿನಿ.... | ಮಿಥುನರಾಶಿ.... | 31.64432 |
| 4. | ಕ್ಯಾನ್ಸರ್.... | ಕರ್ಕಾಟಕರಾಶಿ.... | 31.64194 |
| 5. | ಲಿಯೋ.... | ಸಿಂಹರಾಶಿ.... | 31.01861 |
| 6. | ವಿರ್ಗೋ.... | ಕನ್ಯಾರಾಶಿ.... | 30.44139 |
| 7. | ಲಿಬ್ರಾ.... | ತುಲಾರಾಶಿ.... | 29.89333 |
| 8. | ಸ್ಕಾರ್ಪಿಯಸ್.... | ವೃಶ್ಚಿಕರಾಶಿ.... | 29.49828 |
| 9. | ಸಾಗ್ಗಿಟೇರಿಯಸ್.... | ಧನುರಾಶಿ.... | 29.31999 |
| 10. | ಕೇಪ್ರಿಕಾರ್ನಸ್.... | ಮಕರರಾಶಿ.... | 29.44805 |
| 11. | ಅಕ್ವೇರಿಯಸ್.... | ಕುಂಭರಾಶಿ.... | 29.82028 |
| 12. | ಪಿಸೇಸ್.... | ಮೀನರಾಶಿ.... | 30.35347 |

**ಆ ಭಾಸ್ಕರ ಈ ಗಡಿಯಾರ**

ಸೂರ್ಯರಶ್ಮಿಯು ಅಪಾರಕ ವಸ್ತುಗಳ ಮೇಲೆ ಬಿದ್ದಾಗ ಛಾಯೆ ಅಥವ ನೆರಳು ಉಂಟಾಗುತ್ತದೆ. ಭೂಮಿಯ ತಿರುಗುವಿಕೆಯಿಂದಾಗಿ ಈ ನೆರಳಿನ ರೂಪು ರೇಖೆಗಳು ಬದಲಾಗುತ್ತದೆ. ಮನುಷ್ಯ ಇದನ್ನು ಅರಿತು ಗಡಿಯಾರವನ್ನು ತಯಾರಿಸಲು ಮೊದಲು ಮಾಡಿದನು. ಈಗಲೂ ಕೂಡ ಬಹಳ ಜನ ಹಿತ್ತಲ ಗೋಡೆಯ ನೆರಳು, ಮಲ್ಲಿಗೆ ಹಂದರದ ನೆರಳು ನೋಡಿ ಸಮಯ ತಿಳಿಸುತ್ತಾರೆ. ಪ್ರಾಚೀನ ಗ್ರೀಕರು ಒಂದು ಎತ್ತರದ ಕಂಭದ ನೆರಳನ್ನು ಹೆಜ್ಜೆಗಳಿಂದ ಅಳೆದು ವೇಳೆಯನ್ನು ಗುರುತಿಸುತ್ತಿದ್ದರು. ಇದು ಸುಮಾರು ಕ್ರಿ.ಪೂ. 3500ರಲ್ಲಿ ಪ್ರಾರಂಭವಾಯಿತು. ಕ್ರಿ.ಪೂ. 2000 ವರ್ಷಗಳ ಹಿಂದೆ ಈಜಿಪ್ಟ್ ಹಾಗೂ ಬ್ಯಾಬಿಲೋನಿಯಾದಲ್ಲಿ "ಉತ್ತರ ದಕ್ಷಿಣದ ಗೋಡೆಯ ನೆರಳು" ಎಲ್ಲಾ ಕಾಲಗಳಲ್ಲಿಯೂ ಬದಲಾಗುತ್ತದೆ ಎಂದು ತಿಳಿದುಕೊಂಡಿದ್ದರು. ಇದರಲ್ಲಿ ಗೋಡೆಯ ಮೇಲ್ಭಾಗ ನೆಲಕ್ಕೆ ಸಮಾನಾಂತರವಾಗಿರಬೇಕು ಮತ್ತು ಗೋಡೆಯ ಎತ್ತರ ದಕ್ಷಿಣದಿಂದ ಉತ್ತರಕ್ಕೆ ಜಾಸ್ತಿಯಾಗುತ್ತಾ ಹೋಗಬೇಕು. ನಾವು ನಿಂತಿರುವ ಜಾಗದ ಅಕ್ಷಾಂಶಕ್ಕೆ ಅನುಗುಣವಾಗಿ ಗೋಡೆಗಳನ್ನು ಎತ್ತರಿಸಬೇಕು. ಈಗಲೂ ಕೂಡ ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲವು ಶ್ರೀಮಂತರ ಮನೆಗಳ ಹುಲ್ಲುಹಾಸುಗಳಲ್ಲಿ ಈ ಸೌರ ಗಡಿಯಾರಗಳಿವೆ. ಕ್ರಿ.ಶ. 1200ರಲ್ಲಿ 'ಅಬುಲ್ ಹಾಸನ್' ಎಂಬ ವಿದ್ವಾಂಸರು ಬಿಸಿಲು ಗಡಿಯಾರಗಳಲ್ಲಿ ಗಂಟೆಗಳು ಸಮಾನ ವ್ಯವಧಿಯಲ್ಲಿ ಇರುವಂತೆ ಮಾಡಿದರು.



**ಭಾರತಿಯರ ಕರಾರುವಾಕ್ಕಾದ ಕಾಲಗಣನೆ**

ಕಾಲದ ಕುರಿತು ಭಾರತೀಯರ ಅಧ್ಯಯನ ಅತ್ಯಂತ ಆಳ ಮತ್ತು ನಿಖರವಾಗಿತ್ತು

(1) ಕ್ರಿ.ಶ. 678ರಲ್ಲಿ ಇದ್ದ ಖ್ಯಾತ ಬ್ರಹ್ಮಗುಪ್ತನು ನಕ್ಷತ್ರ ಸಂವತ್ಸರದ ಅವಧಿ 365.26875 ದಿನಗಳೆಂದು ನಿರ್ಣಯಿಸಿದನು. ಅವರು ಭೂಮಿಯ ಸುತ್ತಳತೆ 5 ಸಾವಿರ "ಯೋಜನೆ"ಗಳೆಂದು ನಿರ್ಣಯಿಸಿದರು. ಒಂದು ಯೋಜನೆಗೆ 7.2. ಕಿ.ಮೀ. ಸಮ. ಅದರ ಪ್ರಕಾರ ಭೂಮಿಯ ಸುತ್ತಳತೆ 36 ಸಾವಿರ ಕಿ.ಮೀ. ಇದಕ್ಕೆ ಹೋಲಿಸಿದಂತೆ ಇದು ಪರಿಷ್ಕರಿಸಿದ ರೀತಿಯಲ್ಲೂ ಹೆಚ್ಚು ವ್ಯತ್ಯಾಸ ಕಂಡುಬಂದಿಲ್ಲ.

(2) ಕ್ರಿ.ಶ. 499ರಲ್ಲಿ ಆರ್ಯಭಟನು ನಕ್ಷತ್ರ ಸಂವತ್ಸರದ ಅವಧಿ 365.25868 ದಿನಗಳೆಂದು ನಿರ್ಣಯಿಸಿದರು ಮತ್ತು ಸೂರ್ಯನ ಬೆಳಕು ತಕ್ಷಣ ನಿಂತಲ್ಲೆ ಅದು ನಿಂತಿದೆಯೆಂದು ಭೂಮಿಗೆ ತಿಳಿಯಬೇಕಾದರೆ 8 ನಿಮಿಷಗಳು ಬೇಕು ಎಂದು ರೂಪಿಸಿದರು. ಅವರ ಸೌರವ್ಯೂಹ ಸಂಶೋಧನೆಯು ಸೂರ್ಯನ ಚಲನವಲನಗಳ ಬಗ್ಗೆ ಎಷ್ಟು ನಿಖರತೆಯಿಂದ ಕೂಡಿತ್ತು ಎಂದರೆ, ಅವತ್ತಿನ ಅವರ ಸಂಶೋಧನೆಯ ನಿಖರತೆಗೂ ಇಂದಿನ ಸಂಶೋಧನೆಯ ನಿಖರತೆಗೂ ನಡುವೆ ಇರುವ ವ್ಯತ್ಯಾಸ ಕೇವಲ 0.01 ಸೆಕೆಂಡ್.

(3) ಕ್ರಿ.ಶ. ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಭೂಮಿ ಸೂರ್ಯನ ಸುತ್ತ ಅಥವಾ ತನ್ನ ಅಕ್ಷದ ಸುತ್ತ ಸುತ್ತುವ ವೇಗದಲ್ಲಿ 10 ಸೆಕೆಂಡ್ ಕಡಿಮೆಯಾಗಿದೆ. ಹೀಗೆ ಒಂದು ನೂರು ವರ್ಷಕ್ಕೊಮ್ಮೆ ಭೂಮಿಯ ಪರಿಭ್ರಮಣ ವೇಗ ½ ಸೆಕೆಂಡ್ ಕಡಿಮೆಯಾಗುತ್ತದೆ.

(4) ಕ್ರಿ.ಶ. 505ರಲ್ಲಿ ಪ್ರಸಿದ್ಧ ಖಗೋಳಶಾಸ್ತ್ರಜ್ಞ "ವರಾಹಮಿಹಿರನು" ಪಂಚ ಸಿದ್ಧಾಂತದಲ್ಲಿ "ವಿಷುವಚ್ಛಲೆಯನ್ನು" ಪ್ರಸ್ತಾಪಿಸಿದ್ದಾರೆ.

(5) ಕ್ರಿ.ಶ. 1150 ರಲ್ಲಿ ಭಾಸ್ಕರಾಚಾರ್ಯರು ತಮ್ಮ "ಸಿದ್ಧಾಂತ ಶಿರೋಮಣಿ"

ಎನ್ನುವ ಗ್ರಂಥದಲ್ಲಿ ಸಂವತ್ಸರದ ಅವಧಿ 365 ದಿನಗಳು 15 ಘಳಿಗೆಗಳು 30 ವಿಘಳಿಗೆಗೆಳು, 22 ಪರಘಳಿಗೆಗೆಳು, 30 ಸೂಕ್ಷ್ಮಗಳಿಗೆಗಳೆಂದು ಬರೆದಿದ್ದಾರೆ.

1 ದಿನ.......... 60 ಘಳಿಗೆಗಳು - (24 ಗಂಟೆಗಳು)

1 ಘಳಿಗೆ........ 60 ವಿಘಳಿಗೆಗಳು (24 ನಿಮಿಷಗಳು)

1 ವಿಘಳಿಗೆ....... 60 ಪರಘಳಿಗೆಗಳು (24 ಸೆಕೆಂಡ್)

1 ಪರಘಳಿಗೆ......60 ಸೂಕ್ಷ್ಮ ಘಳಿಗೆಗಳು (0.4 ಸೆಕೆಂಡ್)

1 ಸೂಕ್ಷ್ಮಘಳಿಗೆ = 0.0067 ಸೆಕೆಂಡ್

(365.258438 ದಿನಗಳು)

ಆದ್ದರಿಂದ ಭಾಸ್ಕರಾಚಾರ್ಯರ ಪ್ರಕಾರ ಸಂವತ್ಸರದ ಅವಧಿ 365.258438 ದಿನಗಳು.

ಈಗ ನಾವು ಎಣಿಸುತ್ತಿರುವ ಸಂವತ್ಸರದ ಅವಧಿ

365 ದಿನ, 6 ಗಂಟೆ, 12 ನಿಮಿಷ ಮತ್ತು 30 ಸೆಕೆಂಡ್

ಭಾಸ್ಕರಾಚಾರ್ಯರ ನಿಯಮದಂತೆ ಯಾವುದೇ ಸಂಖ್ಯೆಗೆ ಶೂನ್ಯವನ್ನು ಕೂಡಿಸುವುದರಿಂದ ಅಥವಾ ಕಳೆಯುವುದರಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ ಮತ್ತು ಯಾವುದೇ ಸಂಖ್ಯೆಯನ್ನು ಶೂನ್ಯದಿಂದ ಗುಣಿಸುವುದರಿಂದ ಆ ಸಂಖ್ಯೆ ಶೂನ್ಯಕ್ಕೆ ಸಮನಾಗುವುದು.

ಭಾಸ್ಕರಾಚಾರ್ಯರು ಕಹಿ ಆಗಬಹುದಾದ ಗಣಿತಕ್ಕೆ ಸಾಹಿತ್ಯದ ಸಕ್ಕರೆ ಸೇರಿಸಿ ಗಣಿತ ವಿಜ್ಞಾನಕ್ಕೆ ಮೆರಗನ್ನು ನೀಡಿದ್ದಾರೆ.

**ಯುಗಗಳು 1**

| | |
|---|---|
| 432,000 | ಸಂವತ್ಸರದ ವ್ಯಪ್ತಿಯ ಕಲಿಯುಗದಲ್ಲಿ |
| 5,184,000 | ಸೌರಮಾಸಗಳು |
| 5,343,330 | ಚಾಂದ್ರಮಾಸಗಳು |
| 159,330 | ಅಧಿಕಮಾಸಗಳು |
| 1,577,916,450 | ಸರಾಸರಿ ಸೌರ ದಿನಗಳು |
| 160,299,900 | ತಿಥಿಗಳು |

ಎಂದು ಭಾಸ್ಕರಾಚಾರ್ಯರು ಲೆಕ್ಕ ಮಾಡಿಟ್ಟಿದ್ದಾರೆ.

ಕಲಿಯುಗಕ್ಕೆ ಎರಡರಷ್ಟು ದ್ವಾಪರಯುಗ



ಮೂರರಷ್ಟು ತ್ರೇತಾಯುಗ ನಾಲ್ಕರಷ್ಟು ಕೃತಯುಗ

360 ಸೌರ ವರ್ಷಗಳಿಗೆ 1 ದಿವ್ಯ ವರ್ಷ

1200 ದಿವ್ಯ ವರ್ಷಗಳಿಗೆ - 1 ಚತುರ್ಯುಗ ಅಥವಾ ಮಹಾಯುಗ

ಕಲಿಯುಗದಲ್ಲಿ ನಾಲ್ಕು ಲಕ್ಷ ಮುವತ್ತೆರಡು ಸಾವಿರ ಸೌರ ವರ್ಷಗಳಿವೆ. ಅದರಲ್ಲಿ ಇದುವರೆವಿಗೆ 5200 ವರ್ಷಗಳು ಮಾತ್ರ ಆಗಿದೆ. ಈಗ ನಡೆಯುತ್ತಿರುವುದು ಕಲಿಯುಗದ ಪ್ರಥಮ ಪಾದ. ಇನ್ನು ಕಲಿಯುಗದ ಅಂತ್ಯಕ್ಕೆ ನಾಲ್ಕು ಲಕ್ಷ ಇಪತ್ತಾರು ಸಾವಿರದ ಎಂಟುನೂರು ವರ್ಷಗಳಿವೆ.

4,26,800/-

**ಭಾರತಿಯ ಕಾಲಮಾನದಲ್ಲಿ ಬರುವ ಮುಖ್ಯ ಅಂಶಗಳು**

1. ಕ್ರಿ.ಪೂ. 3102 ಫೆಬ್ರವರಿ 18ನೇ ತಾರೀಖಿನಿಂದ ಕಲಿಯುಗ ಶಕಾರಂಭ ಪ್ರಾರಂಭವಾಗಿದೆಯಂತೆ ಎಂಬ ಮಾಹಿತಿ ಇದೆ.
2. ಕ್ರಿ.ಪೂ. 1680ರಲ್ಲಿ ವಿಷುವತ್ತುಗಳನ್ನು, ಆಯನಾಂತ್ಯಗಳನ್ನು ನಿರ್ಣಯಿಸಲು ಉಪಯೋಗಿಸಿದ ಕಲ್ಲುಕಂಬಗಳು ದೊರೆತಿವೆ.
3. ಕ್ರಿ.ಪೂ. 543 ಬುದ್ಧನ ನಿರ್ವಾಣ, ಸಯಾಮಿನಲ್ಲಿ ಬೌದ್ಧ ಶಕಾರಂಭ
4. ಕ್ರಿ.ಪೂ. 57 ಭಾರತ ದೇಶದಲ್ಲಿ ವಿಕ್ರಮ ಶಕೆಯ ಆರಂಭ
5. ಕ್ರಿ.ಶ. 365 ರಲ್ಲಿ ವಸಂತ ವಿಷುವತ್ತನ್ನು ಮಾರ್ಚ್ 21ಕ್ಕೆ ಬದಲಾಯಿಸಲಾಯಿತು. ನಮ್ಮ ಚಾಂದ್ರಮಾನ ಯುಗಾದಿ ಸರಿಯಾಗಿ 21ಕ್ಕೆ ಬರುವುದಿಲ್ಲವಾದರೂ ಆ ಸುತ್ತುಮುತ್ತಿನಲ್ಲೇ ಬರುತ್ತದೆ.
6. ಕ್ರಿ.ಶ. 1 ಕ್ರಿಸ್ತಶಕಾರಂಭ, ಏಸುಕ್ರಿಸ್ತ ಹುಟ್ಟಿದ ವರ್ಷವೆಂದು ನಂಬಿಕೆ
7. ಕ್ರಿ.ಶ. 78 ಭಾರತದಲ್ಲಿ ಶಾಲಿವಾಹನ ಶಕೆಯ ಆರಂಭ
8. ಕ್ರಿ.ಶ. 638 ರಲ್ಲಿ ಬಂಗಾಳದಲ್ಲಿ ಮಾಘಿ ಶಕೆ ರೂಢಿಯಲ್ಲಿತ್ತು
9. ಹಿಂದೂ ಖಗೋಳ ಗ್ರಂಥಗಳಲ್ಲಿ ಕಲಿಯುಗ ಶಕೆಯನ್ನು ಬಳಸಲಾಗಿದೆ.
10. ಉತ್ತರ ಭಾರತದಲ್ಲಿ ಕೆಲವು ಕಾಲ "ಫಸ್ಲಿಸಾನ್" ಶಕೆ ರೂಢಿಯಲ್ಲಿತ್ತು.
11. ಸೌರ ಸಂವತ್ಸರ ಮತ್ತು ಚಂದ್ರ ಸಂವತ್ಸರದ ನಡುವಿನ ಭೇದವನ್ನು "ಅಧಿಕ ಮಾಸ" ಅಥವಾ "ಶುದ್ಧಿ" ಎನ್ನುತ್ತಾರೆ.
12. ಒಂದು ಚಾಂದ್ರ ಸಂವತ್ಸರಕ್ಕೆ 354-36 ದಿನಗಳು
13. ಒಂದು ಸೌರ ಸಂವತ್ಸರಕ್ಕೆ 365 ಇಲ್ಲವೆ 366 ದಿನಗಳು

14. ಚಾಂದ್ರ ಸಂವತ್ಸರಕ್ಕೆ 12 ತಿಂಗಳುಗಳು. ಒಂದೊಂದು ತಿಂಗಳಲ್ಲಿ 29 ಇಲ್ಲವೇ 30 ದಿನಗಳು

15. ಸೌರ ಸಂವತ್ಸರಕ್ಕೆ ಒಂದೊಂದು ತಿಂಗಳಲ್ಲಿ 29, 30, 31, 32 ದಿನಗಳಿರುತ್ತವೆ.

ಯುಗಗಳ ಕಾಲಾವಧಿಯ ಅಂಕಿಗಳನ್ನು ನೋಡಿದರೆ 432 ಕೋಟಿ ಸಂವತ್ಸರಗಳಿಂದ ನಮ್ಮ ಪಂಚಾಂಗಗಳು ಅವಿಚ್ಛಿನ್ನವಾಗಿ ನಡೆದುಕೊಂಡು ಬರುತ್ತಿದೆ.

ಈ ಕಾಲಬ್ರಹ್ಮರ ಬಗ್ಗೆ ನಾವು ಭಾರತೀಯರು ಅತ್ಯಂತ ಹೆಮ್ಮೆ ಪಡಬೇಕು.

□

ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಅಱಿಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದರಿದ್ರಂಗೆ?
ಕಱೆಯಬಹುದೆ ಕಾಮಧೇನು ಅಶುದ್ಧಂಗೆ?
ಹೊನ್ನಹುಳವ ಕಂಡು ನರಿ ತನ್ನ ಬಾಲವ
ಹುಣ್ಣು ಮಾಡಿಕೊಂಡಡೆ ಹೋಲಬಹುದೆ?
ಎನ್ನೊಡೆಯ ಕೂಡಲಸಂಗನ ಶರಣನು
ಪುಣ್ಯವಿಲ್ಲದೆ ಕಾಣಬಹುದೆ?

- ಬಸವಣ್ಣ

# ವಾರ್ತಾವಿಹಾರ

**ಟಿಬೆಟ್ ಧರ್ಮಗುರು ಶ್ರೀ ದಲೈಲಾಮಾ ಅವರಿಗೆ ಅಭಿನಂದನೆ**

ಧರ್ಮಗುರು ದಲೈಲಾಮಾ ಅವರು ಟಿಬೆಟ್ ಜನತೆಯ ಧಾರ್ಮಿಕಪ್ರಜ್ಞೆಯ ಸಂಕೇತವಾಗಿದ್ದಾರೆ. ಹಾಗೆಯೇ ಅವರು ಇಡೀ ಜನಸಮುದಾಯಕ್ಕೆ ನೈತಿಕ ಸ್ಥೈರ್ಯವನ್ನು ನಿರಂತರವಾಗಿ ತುಂಬುತ್ತಾ ಬಂದಿದ್ದಾರೆ. ಟಿಬೆಟ್ ಜನತೆ ತಮ್ಮ ಧರ್ಮ, ಸಾಮರಸ್ಯ, ಸಮನ್ವಯ ಗುಣ ಹಾಗೂ ದುಡಿಮೆಗೆ ತುಂಬ ಪ್ರಸಿದ್ಧರಾಗಿದ್ದಾರೆ. ಈ ಎಲ್ಲ ಶಕ್ತಿ ಅವರಿಗೆ ಬಂದದ್ದು ಧರ್ಮಗುರು ದಲೈಲಾಮಾ ಅವರಿಂದ ಎನ್ನುವುದು ಹೆಮ್ಮೆ ತರುವ ಸಂಗತಿ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ದಿನಾಂಕ 6.7.2013 ರಂದು ಕೊಡಗಿನ ಕುಶಾಲನಗರದ ಬಳಿಯ ಬೈಲುಕುಪ್ಪೆ ಸೆರಾ ಟಿಬೆಟಿಯನ್ ಧಾರ್ಮಿಕ ಕೇಂದ್ರದಲ್ಲಿ ಶ್ರೀ ದಲೈಲಾಮಾ ಅವರು ತಮ್ಮ 78ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ವಿವಿಧ ಗಣ್ಯರು, ಟಿಬೆಟಿಯನ್ ಸಮುದಾಯದ ಸಹಸ್ರಾರು ಮಂದಿಯ ಶುಭಾಶಯ ಸ್ವೀಕರಿಸಿ, ದ್ವೇಷ ಬಿಟ್ಟು ಪ್ರೀತಿಯಿಂದ ಕಾರ್ಯ ನಿರ್ವಹಿಸಿದರೆ ಯಶಸ್ಸು ಶತಸ್ಸಿದ್ಧ, ಜೊತೆಗೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ ಎಂದರು.

ಸಮಾಜದಲ್ಲಿ ಪ್ರತಿಯೊಬ್ಬರೂ ಸಮಾನ. ಪೂಜೆ, ಸಂಪ್ರದಾಯಗಳು ಮಾತ್ರ ವಿಭಿನ್ನವೇ ಹೊರತು ಮಾನಸಿಕವಾಗಿ ಎಲ್ಲವೂ ಒಂದೇ. ಪರಸ್ಪರ ಗೌರವ ಗುಣವನ್ನು ಬೆಳೆಸಿಕೊಳ್ಳಬೇಕು. ಶಾಂತಿ ಮತ್ತು ಸಹಬಾಳ್ವೆ ಎಂಬುದು ಪ್ರತಿಯೊಂದು ಧರ್ಮದ ಮೂಲಮಂತ್ರವಾಗಿರಲಿ ಎಂದರು.

ಸಮಾರಂಭದಲ್ಲಿ ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್, ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಶ್ರೀ ನಬಂತುಸ್ಕಿ, ಸಂಸದ ಶ್ರೀ ಎಚ್. ವಿಶ್ವನಾಥ್, ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್, ಪಿರಿಯಾಪಟ್ಟಣ ಶಾಸಕ ಶ್ರೀ ಕೆ. ವೆಂಕಟೇಶ್ ಮುಂತಾದವರು ಹಾಜರಿದ್ದರು.

**ವಾಲ್ಮೀಕಿ ರಾಮಾಯಣ ಸಾರ್ವಕಾಲಿಕ**

ವಾಲ್ಮೀಕಿ ಮಹರ್ಷಿ ಕೊಟ್ಟಿರುವ 'ರಾಮಾಯಣ' ಕೃತಿ ಕೇವಲ ಋಷಿಗಳ ಕಾಲಕ್ಕೆ ಮುಗಿಯುವಂತದ್ದಲ್ಲ. ಅದು ನಿತ್ಯ ನಿರಂತರ. ಸಾರ್ವಕಾಲಿಕ ಕೃತಿ ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಬಣ್ಣಿಸಿದರು.

ದಿನಾಂಕ 10.7.2013 ರಂದು ಅಖಿಲ ಕರ್ನಾಟಕ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ಜಗನ್ಮೋಹನ ಅರಮನೆಯಲ್ಲಿ ರಾಜ್ಯದಲ್ಲಿ ಆಯ್ಕೆಯಾಗಿರುವ ನಾಯಕ ಜನಾಂಗದ ಶಾಸಕರಿಗೆ ಸನ್ಮಾನ ಮತ್ತು ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್, ಬ್ಯಾಗ್ ಹಾಗೂ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಿ ಅವರು ಮಾತನಾಡಿದರು.

ರಾಮಾಯಣ ಮಹಾಕೃತಿ ಮುಂದಿನ ಶತಮಾನಕ್ಕೂ ಶಾಶ್ವತವಾಗಿರುವಂತಹ ಪ್ರಸ್ತುತ ಸಂದರ್ಭದಲ್ಲೂ ಚರ್ಚೆಗೆ ಒಳಪಡುವ ಮಹಾನ್ ಕೃತಿಯಾಗಿದೆ. ರಾಮಾಯಣ ಗ್ರಂಥದ ಆಧಾರವಾಗಿ ಸಾವಿರಾರು ಕೃತಿಗಳು ಉದಯಕ್ಕೆ ಕಾರಣವಾಗಿವೆ ಎಂದರು. ಈ ಹಿನ್ನೆಲೆಯಲ್ಲಿ ಬಂದಿರುವ ನಾಯಕ ಜನಾಂಗ ಸಮಾಜದಲ್ಲಿ ಶ್ರೇಷ್ಠ ಸಮುದಾಯ ವಾಗಿದೆ. ರಾಜರ ಕಾಲದಲ್ಲಿ ಅವರ ರಕ್ಷಣೆಯ ಬೆಂಗಾವಲಾಗಿ ಬಂದಿರುವ ಸಮುದಾಯದವರು ಶಕ್ತಿ, ಸಾಮರ್ಥ್ಯದ ಜತೆಗೆ ನಂಬಿಕೆಗೆ ಪಾತ್ರವಾಗಿದ್ದಾರೆ ಎಂದು ಹೇಳಿದರು. ಒಂದು ಸಮುದಾಯ ಹೆಚ್ಚು ಬೆಳೆಯಬೇಕೆಂದರೆ ಸಂಘಟನೆ ಬಹಳ ಮುಖ್ಯ. ಅಭಿವೃದ್ಧಿ ಹೊಂದಿ ಬೆಳೆಯಬೇಕಾದರೆ ಒಟ್ಟಾಗಿ ಎಲ್ಲರೂ ಶ್ರಮಿಸಬೇಕು, ಎಲ್ಲರೂ ಶಿಕ್ಷಣವಂತರಾಗಿ ಸುಸಂಸ್ಕೃತರಾಗಬೇಕು ಎಂದು ಹೇಳಿದರು.

ಭಾರತದಲ್ಲಿ ಸಾವಿರಾರು ವರ್ಷಗಳಿಂದ ಜಾತಿ ವ್ಯವಸ್ಥೆ ಎಂಬ ಅನಿಷ್ಟ ಪದ್ಧತಿ ಬೆಳೆದಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಜಾತಿಯ ನಿರ್ಮೂಲನೆಗಾಗಿ ಹೋರಾಡಿದ ಸರ್ವರು ಸಮಾನರು, ಪ್ರತಿಯೊಬ್ಬರೂ ಒಂದೇ ತಾಯಿಯ ಮಕ್ಕಳೆಂದು ಭಾವಿಸಬೇಕು ಎಂದು ಹೇಳಿದರು. ಅದಾದ 9 ಶತಮಾನದ ನಂತರವೂ ದೇಶ ಜಾತಿ ಸಂಕೋಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಅಂಬೇಡ್ಕರ್ ಅವರು ಜಾತಿ ಎಂಬ ವಿಷವರ್ತುಲವನ್ನು ತೊಲಗಿಸಲು ಸಂವಿಧಾನ ರೂಪಿಸಿ ಹೋರಾಡಿದರೂ ಸಹ ಜಾತಿ ನಾಶವಾಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮನುಷ್ಯ ಮಾನವೀಯತೆಯಿಂದ ಬದುಕಬೇಕು. ಸಮಾಜದಲ್ಲಿರುವ ಎಲ್ಲಾ ಸಮುದಾಯಗಳು ಒಂದೇ ಎಂದು ಭಾವಿಸಬೇಕು ಎಂದು ಸಲಹೆ ನೀಡಿದರು.

ಇಂದು ಎಲ್ಲಾ ಜನಾಂಗದ ಬಹುಪಾಲು ಮಂದಿ ದುಶ್ಚಟಗಳನ್ನು ಅಂಟಿಸಿಕೊಳ್ಳು ವುದು ಎಷ್ಟು ಸುಲಭವೋ ಬಿಡುವುದೂ ಸಹ ಅಷ್ಟೇ ಸುಲಭ, ಆದರೆ ಅದಕ್ಕೆ ಮನಸ್ಸು ಮಾಡಬೇಕು, ತಮ್ಮ ದೌರ್ಬಲ್ಯವನ್ನು ಮೆಟ್ಟಿ ನಿಲ್ಲಬೇಕು ಎಂದು ಸಲಹೆಯನ್ನಿತ್ತರು.

ಕಾರ್ಯಕ್ರಮದಲ್ಲಿ ಸಾಧನೆಗೈದ ನಾಯಕ ಜನಾಂಗದ ಸಾಧಕರಿಗೆ ಸನ್ಮಾನವನ್ನು ಮಾಡಲಾಯಿತು. ಸಮಾರಂಭದಲ್ಲಿ ಶ್ರೀ ವಾಲ್ಮೀಕಿ ಸಂಜಯಕುಮಾರ್ ಸ್ವಾಮಿಗಳು, ಶ್ರೀ ವಿಜಯಕುಮಾರ್, ಡಾ. ಸುತ್ತೂರು ಎಸ್. ಮಾಲಿನಿ, ಶ್ರೀ ಎಚ್.ಸಿ. ಬಸವರಾಜು, ಸಮುದಾಯದ ರಾಜ್ಯಾಧ್ಯಕ್ಷ ಶ್ರೀ ದ್ಯಾವಪ್ಪನಾಯಕ, ಶ್ರೀ ಶ್ರೀಧರ್‌ಬಟ್ಟ ಉಪಸ್ಥಿತರಿದ್ದರು.



### ಬಹುಮುಖ ಪ್ರತಿಭೆಯ ಸುಸಂಸ್ಕೃತ ರಾಜಕಾರಣಿ

ದಿನಾಂಕ 11.7.2013 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಎಂ.ಪಿ. ಪ್ರಕಾಶ್ ಪ್ರತಿಷ್ಠಾನ ಆಯೋಜಿಸಿದ್ದ ಪ್ರಕಾಶ್‌ರವರ 73ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯರು ಮಾತನಾಡುತ್ತಿದ್ದರು.

ಎಂ.ಪಿ. ಪ್ರಕಾಶ್‌ರವರು ಕರ್ನಾಟಕದ ರಾಜಕಾರಣ ಕಂಡಂತಹ ಅಪರೂಪದ ಪ್ರತಿಭೆ. ಅವರು ರಾಜಕೀಯಕ್ಕಿಂತ ಹೆಚ್ಚಾಗಿ ಸಾಹಿತ್ಯ, ಕಲೆ, ಚಲನಚಿತ್ರ ಮತ್ತು ಸಂಸ್ಕೃತಿ ಇವುಗಳ ಬಗ್ಗೆಯೇ ಚಿಂತನೆ ಮಾಡುತ್ತಿದ್ದರು. ಅವರು ಒಂದು ರೀತಿಯಲ್ಲಿ ಅಜಾತ ಶತ್ರು ಆಗಿದ್ದರು. ಅದಕ್ಕೆ ಕಾರಣ ಅವರ ನಿಷ್ಕಲ್ಮಶ ಹೃದಯ ಮತ್ತು ಸಂಸ್ಕೃತಿ ಪ್ರೇಮ ಎಂದು ಪರಮಪೂಜ್ಯರು ತಿಳಿಸಿದರು.

ಸಮಾರಂಭವನ್ನು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಉದ್ಘಾಟಿಸಿದರು. ಸಚಿವರಾದ ಶ್ರೀ ಶಾಮನೂರು ಶಿವಶಂಕರಪ್ಪ, ಶ್ರೀ ಸಂತೋಷ್ ಲಾಡ್, ಶ್ರೀ ಹೆಚ್.ಎಸ್. ಮಹದೇವಪ್ರಸಾದ್, ಶ್ರೀ ಪಿ.ಟಿ. ಪರಮೇಶ್ವರ ನಾಯಕ, ಶಾಸಕರಾದ ಶ್ರೀ ಮಧು ಬಂಗಾರಪ್ಪ, ಶ್ರೀ ಎಂ.ಪಿ. ರವೀಂದ್ರ, ರಾಜ್ಯಸಭಾ ಸದಸ್ಯೆ ಶ್ರೀಮತಿ ಬಿ. ಜಯಶ್ರೀ, ಕಾಂಗ್ರೆಸ್ ನಾಯಕಿ ಶ್ರೀಮತಿ ರಾಣಿ ಸತೀಶ್, ಸಾಹಿತಿ ಶ್ರೀ ಚಂದ್ರಶೇಖರ ಕಂಬಾರ, ನೃತ್ಯಪಟು ಡಾ. ಮಾಯಾರಾವ್, ಸಚಿವೆ ಶ್ರೀಮತಿ ಉಮಾಶ್ರೀ, ವಿಧಾನಪರಿಷತ್ ಸದಸ್ಯ ಶ್ರೀ ಎಂ.ವಿ. ರಾಜಶೇಖರನ್, ಚಿತ್ರ ನಿರ್ದೇಶಕ ಶ್ರೀ ನಾಗತಿಹಳ್ಳಿ ಚಂದ್ರಶೇಖರ್, ಅಂಕಣಕಾರ ಶ್ರೀ ಬಿ. ಚಂದ್ರೇಗೌಡ ಮುಂತಾದ ಗಣ್ಯರು ಭಾಗವಹಿಸಿದ್ದರು.

### ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ

ದಿನಾಂಕ 7.8.2013ರಂದು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮದ ಪ್ರಾರಂಭೋತ್ಸವ ನೆರವೇರಿತು.

ಪಾಲಿಸುವಿಕೆಯಿಂದ ಮಾತ್ರ ಆಲಿಸುವಿಕೆ ಸಾರ್ಥಕವಾಗುತ್ತದೆ ಎಂದು ನಂಜನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ. ಮೊರಬದ ಮಲ್ಲಿಕಾರ್ಜುನ ಅಭಿಪ್ರಾಯಪಟ್ಟರು.

ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮದಲ್ಲಿ 'ನಿಜಗುಣ ಶಿವಯೋಗಿಗಳವರ ಕೈವಲ್ಯ ಪದ್ಧತಿ' ಕುರಿತು ಪ್ರವಚನ ನೀಡುತ್ತಾ, ಬದುಕಿನ ಪರಮ ಆಯಾಮಗಳಿಗೂ ಸೂಕ್ತ ಮಾರ್ಗದರ್ಶನ ನೀಡುವ ಕೃತಿ ರಾಶಿಗಳನ್ನು ನೀಡಿರುವ ನಿಜಗುಣ ಶಿವಯೋಗಿ ಗಳವರು ಮತ, ಧರ್ಮ, ಪಂಥಗಳ ಎಲ್ಲೆಗಳನ್ನು ಮೀರಿದ ತಮ್ಮ ಆಲೋಚನೆಗಳಿಗೆ

ಸಂಗೀತದ ಲಾಲಿತ್ಯವನ್ನು ತಂದುಕೊಡುವ ಮೂಲಕ ಹೃದಯಸ್ಪರ್ಶಿಯಾಗಿದ್ದಾರೆ ಎಂದು ನುಡಿದರು.

**ಕೇಳುವುದರಿಂದ ಅರಿವು**

ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಉತ್ತಮ ವಿಚಾರ ಕೇಳುವುದರಿಂದ ಅರಿವು ಉಂಟಾಗುತ್ತದೆ. ಅರಿವಿನಿಂದ ಉತ್ತಮ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಮಾನವನು ಪ್ರಾಣಿಗಳಿಗಿಂತ ಭಿನ್ನವಾಗುವುದು ಇಂತಹ ಅರಿವು ಆಚರಣೆಗೆ ಬಂದಾಗ ಮಾತ್ರ ಎಂದು ನುಡಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್. ನಂಜುಂಡಯ್ಯ ಮಾತನಾಡಿ, ಬಹಳ ಪ್ರಧಾನವಾದ ಶ್ರಾವಣ ಮಾಸದಲ್ಲಿ ನಾಡಿನ ಜನತೆಗೆ ಒಳ್ಳೆಯ ವಿಚಾರಗಳನ್ನು ಮುಟ್ಟಿಸುವ ಉದ್ದೇಶದಿಂದ ಸುತ್ತೂರು ಶ್ರೀಮಠವು ಅನೂಚಾನವಾಗಿ ಪ್ರವಚನ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಗೋಪಾಲ್ ಮಾತನಾಡಿ, ಅಸಾಮಾನ್ಯ ಕೆಲಸಕಾರ್ಯಗಳು ಶ್ರೇಷ್ಠ ಚೇತನಗಳಿಂದ ಮಾತ್ರ ಸಾಧ್ಯವಾಗುತ್ತದೆ ಎಂದರು.

ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಆಯುಕ್ತ ಶ್ರೀ ಕೆ.ವಿ. ರಾಜಣ್ಣ ಮಾತನಾಡಿ, ಆಧ್ಯಾತ್ಮಿಕ ಸ್ಪರ್ಶದೊಂದಿಗೆ ಮಾಡುವ ಕೆಲಸಕ್ಕೆ ಮುನ್ನಡೆಯಿರುತ್ತದೆ ಎಂದು ಹೇಳಿದರು.

ಮೈಸೂರಿನ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ಧಮಲ್ಲ ಸ್ವಾಮೀಜಿ, ಶ್ರೀಮತಿ ಸಿ.ಜಿ. ಉಷಾದೇವಿ ಮತ್ತು ಶ್ರೀ ಎಚ್.ಬಿ. ದೇವಣ್ಣ ಹಾಜರಿದ್ದರು.

ಶ್ರೀ ಬಸವಲಿಂಗಯ್ಯ ಹಿರೇಮಠ ಗಾಯನ ನಡೆಸಿಕೊಟ್ಟರು. ಜೆಎಸ್‌ಎಸ್ ಶಾಲಾ ಮಕ್ಕಳು ಪ್ರಾರ್ಥಿಸಿದರು. ಉಪನ್ಯಾಸಕರಾದ ಶ್ರೀ ಕೆ.ವಿ. ಯೋಗೇಶ್ ಸ್ವಾಗತಿಸಿದರೆ, ಸಹ ಶಿಕ್ಷಕರಾದ ಶ್ರೀ ವೈ.ಪಿ. ವಿಶ್ವ ವಂದಿಸಿದರು.

**ನವೀಕೃತ ಸುತ್ತೂರು ಮಠದ ಪ್ರವೇಶೋತ್ಸವ**

ತುಮಕೂರು ಶ್ರೀ ಸಿದ್ಧಗಂಗಾ ಮಠದ ಪರಮಪೂಜ್ಯ ಡಾ. ಶ್ರೀ ಶಿವಕುಮಾರ ಮಹಾ ಸ್ವಾಮೀಜಿ, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಆದಿಚುಂಚನಗಿರಿ ಶ್ರೀ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ದಿನಾಂಕ 11.8.2013 ರಂದು ನವೀಕೃತ ಸುತ್ತೂರು ಮಠ ಲೋಕಾರ್ಪಣೆಯಾಯಿತು.

ಇತಿಹಾಸಪ್ರಸಿದ್ಧ ತಪಸ್ವಿಗಳ ನಾಡಾದ ಶ್ರೀಕ್ಷೇತ್ರ ಸುತ್ತೂರಿನಲ್ಲಿ ಸುಮಾರು ನಾಲ್ಕು



ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮಠದ ಪುನರ್ನಿರ್ಮಿತ ಕಟ್ಟಡದ ಪ್ರವೇಶೋತ್ಸವ ವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ನೆರವೇರಿಸಿದರು.

ಮಹಾಮಹಿಮರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ತಪಃ ಪ್ರಭಾವದಿಂದ ಆಕರ್ಷಿತರಾದ ಅಂದಿನ ತಮಿಳುನಾಡಿನ ಚಕ್ರವರ್ತಿ ರಾಜ ರಾಜ ಚೋಳನ ಕೋರಿಕೆಯಂತೆ ಸುತ್ತೂರಿನಲ್ಲಿ ಜಗದ್ಗುರು ಪೀಠ ಸ್ಥಾಪನೆಯಾಗಿದೆ.

ಮೂಲ ಮಠದ ಪಾರಂಪರಿಕ ವಿನ್ಯಾಸ ಉಳಿಸಿಕೊಂಡು ಹಿಂದಿನ ಅಡಿಪಾಯಕ್ಕೂ ಧಕ್ಕೆಯಾಗದಂತೆ 24 ಮರದ ಕಂಬಗಳನ್ನು ಹಾಗೆಯೇ ಉಳಿಸಿಕೊಂಡು ಎರಡು ಅಂತಸ್ತುಳ್ಳ ಸುಂದರ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ.

ಒಂದು ವಾರ ಕಾಲ ಒಂದು ಲಕ್ಷಕ್ಕೂ ಹೆಚ್ಚು ಭಕ್ತರು ಸುತ್ತೂರಿಗೆ ಆಗಮಿಸಿ ಹೊಸ ಕಟ್ಟಡದ ದರ್ಶನ ಮಾಡಿದರು.

ಪ್ರತಿದಿನ ಧಾರ್ಮಿಕ ಪೂಜಾವಿಧಿಗಳು, ಸಂಗೀತ ಕಾರ್ಯಕ್ರಮ ಮತ್ತಿತರ ಕಾರ್ಯಕ್ರಮಗಳು ನಡೆದವು. ಬೆಳಿಗ್ಗೆ 8 ಗಂಟೆಗೆ ಹಿಂದೂಸ್ತಾನಿ ಗಾಯಕರಾದ ಪಂಡಿತ್ ಜಯತೀರ್ಥ ಮೇವುಂಡಿ ಅವರು ವಚನ ಗಾಯನ ನಡೆಸಿಕೊಟ್ಟರು. ನಂತರ ಮೈಸೂರಿನ ಡಾ. ಎಂ. ಮಂಜುನಾಥ್, ಸೂರಮಣಿ ಪ್ರವೀಣ ಅವರ ಜುಗಲ್‌ಬಂದಿ ಕಾರ್ಯಕ್ರಮ ನಡೆಯಿತು. ಇದಲ್ಲದೆ ಇಡೀ ದಿನ ವಿಶೇಷ ಕಾರ್ಯಕ್ರಮಗಳು ನಡೆದವು.

500 ಕ್ಕೂ ಹೆಚ್ಚು ಮಠಾಧೀಶರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚಿವರು, ಶಾಸಕರು, ಸ್ಥಳೀಯ ಜನಪ್ರತಿನಿಧಿಗಳು, ಅನೇಕ ಕ್ಷೇತ್ರಗಳ ವಿವಿಧ ಮುಖಂಡರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಧರ್ಮದಿಂದ ಶಾಂತಿ ಮೂಡಿಸಲು ಸಾಧ್ಯ**

ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಧರ್ಮದ ಮೂಲಕ ಶಾಂತಿ, ಸಹನೆ, ಸೌಹಾರ್ದತೆ ಮೂಡಿಸುವ ಅವಶ್ಯಕತೆ ಇದೆ ಎಂದು ಪರಮಪೂಜ್ಯ ಶ್ರೀಗಳವರು ಅಭಿಪ್ರಾಯಪಟ್ಟರು.

ದಿನಾಂಕ 19.8.2013 ರಂದು ತಾಲ್ಲೂಕಿನ ಹೆಗ್ಗೊತಾರ ಗ್ರಾಮದಲ್ಲಿ ಪುನರ್ ನಿರ್ಮಾಣ ಮಾಡಿರುವ ಸಿದ್ಧರಾಮೇಶ್ವರ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆಯ ಅಂಗವಾಗಿ ಸೋಮವಾರ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಪರಮಪೂಜ್ಯರು ಮಾತನಾಡಿದರು.

ಕೃಷಿಪ್ರಧಾನವಾದ ಹೆಗ್ಗೊತಾರ ಹಿರಿತನವನ್ನು ಮೆರೆಯುತ್ತಾ ಬಂದಿದೆ. ದೊಡ್ಡ ಪ್ರಮಾಣದಲ್ಲಿ ಧಾನ್ಯ ಬೆಳೆಯುವ - ಸಂಗ್ರಹಿಸುವ ಕೇಂದ್ರವಾಗಿ ಹೆಸರು ಮಾಡಿದೆ.

ಬಸವಾದಿ ಶರಣರ ಸಮಕಾಲೀನರಾದ ಸಿದ್ಧರಾಮೇಶ್ವರರ ದೇವಸ್ಥಾನವನ್ನು ಪುನರ್ ನಿರ್ಮಾಣ ಮಾಡುವ ಮೂಲಕ ಇಲ್ಲಿನ ಜನರು ದೊಡ್ಡತನ ಮೆರೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವನೂರು ಗುರುಮಲ್ಲೇಶ್ವರ ದಾಸೋಹ ಮಹಾ ಸಂಸ್ಥಾನದ ಪೂಜ್ಯ ಶ್ರೀ ಮಹಾಂತ ಸ್ವಾಮೀಜಿ, ಪ್ರೊ. ಮೊರಬದ ಮಲ್ಲಿಕಾರ್ಜುನ ಮಾತನಾಡಿದರು.

ಸೋಮಹಳ್ಳಿ ಶಿಲಾಮಠದ ಶ್ರೀ ಸಿದ್ಧಮಲ್ಲ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಹರವೆ ಸರ್ಪಭೂಷಣ ಸ್ವಾಮೀಜಿ ಭಾವಚಿತ್ರ ಅನಾವರಣಗೊಳಿಸಿದರು.

ಕಬ್ಬಳ್ಳಿ ಚನ್ನಬಸವಸ್ವಾಮಿ, ಮರಿಯಾಲದ ಇಮ್ಮಡಿ ಮಹಾಂತ ಸ್ವಾಮೀಜಿ, ಬಸವರಾಜ ಸ್ವಾಮೀಜಿ, ಪಂಚಾಕ್ಷರಿಸ್ವಾಮಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮರುಳಸಿದ್ದಪ್ಪ, ನೊಣಂಬ ವೀರಶೈವ ಸಮಾಜದ ಅಧ್ಯಕ್ಷ ಚನ್ನಬಸಪ್ಪ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಆಸ್ಪತ್ರೆ ಲೋಕಾರ್ಪಣೆ

### ಜನರ ವಿಶ್ವಾಸಕ್ಕೆ ಗೌರವ ನೀಡಿ : ರಾಷ್ಟ್ರಪತಿ ಪ್ರಣವ್ ಮುಖರ್ಜಿ

ವೈದ್ಯಕೀಯ ವೃತ್ತಿಯಲ್ಲಿರುವವರು ಜನರ ವಿಶ್ವಾಸವನ್ನು ಸದಾ ಗೌರವಿಸಬೇಕು. ವೈದ್ಯಕೀಯ ಪದವಿ ಪಡೆದು ವೃತ್ತಿಗೆ ಪ್ರವೇಶಿಸುವಾಗ ಸ್ವೀಕರಿಸುವ ಪ್ರತಿಜ್ಞಾವಿಧಿಯ ಅರ್ಥವನ್ನು ನೆನಪಿನಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಬೇಕು ಎಂದು ಘನತೆವೆತ್ತ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಕರೆ ನೀಡಿದರು.

23.9.2013 ರಂದು ಸೋಮವಾರ ಮಧ್ಯಾಹ್ನ ಮೈಸೂರು ನಗರದಲ್ಲಿ ನಿರ್ಮಾಣಗೊಂಡಿರುವ ಅಗ್ರಹಾರದ ಜೆಎಸ್‌ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಇವತ್ತು ದೇಶದಲ್ಲಿರುವ ಆರೋಗ್ಯ ಸೇವೆ ವ್ಯವಸ್ಥೆಯ ಕುರಿತು ಗಂಭೀರವಾದ ಚಿಂತನೆಯ ಅಗತ್ಯವಿದೆ. ಲಾಭ ಮಾಡುವ ಮನಃಸ್ಥಿತಿಯಿಂದ ಆರೋಗ್ಯ ಸೇವೆಯು ವ್ಯಾಪಾರೀಕರಣಗೊಂಡಿದೆ. ನಮ್ಮಲ್ಲಿರುವ ವೈದ್ಯಕೀಯ ಸಂಸ್ಥೆಗಳು ಈ ಪರಿಸ್ಥಿತಿಯನ್ನು ಸುಧಾರಿಸಲು ಜವಾಬ್ದಾರಿಯುತ ಪಾತ್ರ ವಹಿಸಬೇಕು. ಆರೋಗ್ಯ ಕ್ಷೇತ್ರದ ಸುಧಾರಣೆಗೆ ಸೂಕ್ತ ಮಾರ್ಗದರ್ಶನವನ್ನು ಈ ಸಂಸ್ಥೆಗಳು ನೀಡಬೇಕು. ವೈದ್ಯಕೀಯ ವೃತ್ತಿನಿರತರು ಮತ್ತು ಯುವ ವೈದ್ಯರಲ್ಲಿ ಸೇವಾ ಮನೋಭಾವದ ಮೌಲ್ಯಗಳನ್ನು ಬಿತ್ತಬೇಕು. ಜವಾಬ್ದಾರಿ ಮತ್ತು ದೇಶಭಕ್ತಿಯ ಭಾವ ಬೇರೂರುವಂತೆ ಮಾಡಬೇಕು. ಈ ದಿಸೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವು ಉತ್ತಮ ಮಾದರಿಯಾಗಿದೆ. ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ತುಂಬುತ್ತಿದೆ" ಎಂದು ಹೇಳಿದರು.



"ಹಲವು ವೈದ್ಯರು ಉನ್ನತ ಶಿಕ್ಷಣ ಪಡೆಯಲು ವಿದೇಶಗಳಿಗೆ ಹೋಗುತ್ತಾರೆ. ಅವರ ಜ್ಞಾನ ಮತ್ತು ಅನುಭವದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಬೇರೆ ದೇಶಗಳಿಗೆ ಹೋಗಲು ಅವರನ್ನು ಪ್ರೋತ್ಸಾಹಿಸಬೇಕು. ಆದರೆ ಈ ಎಲ್ಲ ಸೌಲಭ್ಯಗಳನ್ನು ನೀಡಲು ದೇಶವು ಅವರ ಮೇಲೆ ಸಾಕಷ್ಟು ಸಂಪನ್ಮೂಲವನ್ನು ವೆಚ್ಚ ಮಾಡುತ್ತಿದೆ ಎಂಬುದನ್ನು ಅವರು ಮರೆಯಬಾರದು. ಎಲ್ಲಿಯೇ ಹೋಗಲಿ ತಮ್ಮ ಸೇವೆಯನ್ನು ದೇಶಕ್ಕೇ ನೀಡಬೇಕಾಗಿರುವುದು ಆದ್ಯ ಕರ್ತವ್ಯ ಎಂಬ ಅರಿವು ಇರಬೇಕು" ಎಂದರು.

ಮಹಾತ್ಮಾ ಗಾಂಧೀಜಿ ಹೇಳುವಂತೆ; 'ಆರೋಗ್ಯವು ನಿಜವಾದ ಸಂಪತ್ತು. ಚಿನ್ನ ಮತ್ತು ಬೆಳ್ಳಿಯಲ್ಲ. ಆರೋಗ್ಯವು ಪ್ರತಿಯೊಬ್ಬರ ವೈಯಕ್ತಿಕ ಹಕ್ಕು ಕೂಡ ಹೌದು. ಆರೋಗ್ಯವಂತ ವ್ಯಕ್ತಿಗಳಿಂದ ಕೂಡಿದ ಜನಸಮುದಾಯವು ದೇಶದ ಸಮೃದ್ಧಿಯ ಸಂಕೇತ. ಶಿಕ್ಷಣ, ಜ್ಞಾನ ಮತ್ತು ಉದ್ಯೋಗ ಕ್ಷೇತ್ರದಲ್ಲಿರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಆರೋಗ್ಯವಂತ ಜನಸಮುದಾಯಕ್ಕೆ ಮಾತ್ರ ಸಾಧ್ಯವಾಗುತ್ತದೆ. ಅದನ್ನು ಸಾಧಿಸುವುದು ವೈದ್ಯಕೀಯ ಕ್ಷೇತ್ರದ ಕೈಯಲ್ಲಿದೆ' ಎಂದು ಹೇಳಿದರು.

### ಶೇ. 4 ಕ್ಕೆ ಏರಬೇಕು

"ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ನಮ್ಮ ಒಟ್ಟು ರಾಷ್ಟ್ರೀಯ ಉತ್ಪನ್ನದ (ಜೆಡಿಪಿ) ಶೇಕಡ 1.2 ರಷ್ಟು ಮಾತ್ರ ವಿನಿಯೋಗವಾಗುತ್ತಿದೆ. ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ, ನಾರ್ವೆ ಮತ್ತು ಬ್ರೆಜಿಲ್ ದೇಶಗಳಲ್ಲಿ ಅಲ್ಲಿಯ ಜೆಡಿಪಿಯ ಶೇ. 4 ರಷ್ಟು ಆರೋಗ್ಯ ಕ್ಷೇತ್ರಕ್ಕೆ ಮೀಸಲಾಗಿಡಲಾಗಿದೆ. ಆದರೆ ನಮ್ಮ ದೇಶದಲ್ಲಿ ಆರೋಗ್ಯ ರಕ್ಷಣೆ, ಶಿಕ್ಷಣ, ಆಹಾರ ಭದ್ರತೆ ಮತ್ತು ಉದ್ಯೋಗ ಭರವಸೆಗಳಲ್ಲಿ ಅಪಾರ ಸಂಪತ್ತು ವಿನಿಯೋಗಿಸುವ ಶಕ್ತಿ ಇದೆಯೆ ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಹಾದಿಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ವಕೀಲ ಡೆರೆಕ್ ಬಾಕ್ ಅವರು ಹೇಳಿದ 'ಶಿಕ್ಷಣ ದುಬಾರಿ ಎಂದು ನೀವು ಯೋಚಿಸುವುದಾದರೆ ಅದು ನಿಮ್ಮ ಅಜ್ಞಾನ' ಎಂಬ ಮಾತು ಅನ್ವಯವಾಗುತ್ತದೆ. ನಮ್ಮ ಜನರ ಸಾಮರ್ಥ್ಯವನ್ನು ಹೆಚ್ಚಿಸಲು ಪೌಷ್ಟಿಕ ಆಹಾರ ಭದ್ರತೆ, ಉತ್ತಮ ಗುಣಮಟ್ಟದ ಶಿಕ್ಷಣ, ಉತ್ತಮ ಆರೋಗ್ಯ ನೀಡುವುದು ಅಗತ್ಯ" ಎಂದು ಹೇಳಿದರು.

'ಆರೋಗ್ಯ ಸೇವೆಗಳಿಗಾಗಿ ಬಹಳಷ್ಟು ಜನರು ಖಾಸಗಿ ಆಸ್ಪತ್ರೆಗಳ ಮೇಲೆ ಅವಲಂಬಿತರಾಗಿದ್ದಾರೆ. ಆದರೆ ಬಡತನದಿಂದಾಗಿ ದುಬಾರಿ ಚಿಕಿತ್ಸೆಗಳನ್ನು ಪಡೆಯುವಲ್ಲಿ ವಿಫಲರಾಗುತ್ತಾರೆ. ಇಂತಹ ಚಿಕಿತ್ಸೆಗಳಿಂದ ವಂಚಿತರಾದ ವರ್ಗದ ಜನರಿಗೆ ವಿಶೇಷ ಚಿಕಿತ್ಸೆ ಸಿಗುವಂತಾಗಬೇಕು'.

ಆಧುನಿಕ ಜೀವನಶೈಲಿಯಿಂದಾಗಿ ಹಲವು ಕಾಯಿಲೆಗಳು ಕಾಡುತ್ತಿವೆ. ಆದ್ದರಿಂದ ಇವತ್ತು ಕಾಯಿಲೆಯ ಚಿಕಿತ್ಸೆಗಿಂತ ತಡೆಗಟ್ಟುವ ಪೂರ್ವಯೋಜನೆಗೆ ಹೆಚ್ಚು ಆದ್ಯತೆ ಸಿಗುತ್ತಿದೆ ಎಂದರು.

"2005ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಮೂಲಕ ಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ ತೆಗೆದುಕೊಂಡು ಹೋಗುವ ಕಾರ್ಯ ಆರಂಭವಾಗಿದೆ. ರಾಷ್ಟ್ರೀಯ ಆರೋಗ್ಯ ಮಿಷನ್ ಈ ವರ್ಷದಿಂದ ಹೊಸದಾಗಿ ಆರಂಭವಾಗಿದೆ. ಈ ಮೂಲಕ ಗ್ರಾಮೀಣ ಮತ್ತು ನಗರಗಳಿಗೆ ಉತ್ತಮವಾದ ಆರೋಗ್ಯ ಸೇವೆಯನ್ನು ನೀಡುವ ಕಾರ್ಯ ನಡೆಯುತ್ತಿದೆ" ಎಂದು ಹೇಳಿದರು.

"ಉಪಗ್ರಹ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಟೆಲಿಮೆಡಿಸಿನ್ ಚಿಕಿತ್ಸಾ ವಿಧಾನದ ಮೂಲಕ ಕುಗ್ರಾಮಗಳಲ್ಲಿ ಇರುವ ಆರೋಗ್ಯ ಕೇಂದ್ರಗಳನ್ನು ನಗರದ ಅತ್ಯಾಧುನಿಕ ಆಸ್ಪತ್ರೆಗಳ ಸೇವೆಯೊಂದಿಗೆ ಬೆಸೆಯಲು ಸಾಧ್ಯವಾಗಿದೆ. ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಹಳ್ಳಿಗಾಡು ಮತ್ತು ಬಡಜನರ ಮನೆಬಾಗಿಲಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಯನ್ನು ತೆಗೆದುಕೊಂಡು ಹೋಗಲು ಸಾಧ್ಯವಿದೆ. ಈ ಸೌಲಭ್ಯವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು" ಎಂದು ಸಲಹೆ ನೀಡಿದರು.

ರಾಜ್ಯಪಾಲ ಹಂಸರಾಜ್ ಭಾರಧ್ವಾಜ್, ಮುಖ್ಯಮಂತ್ರಿ ಸಿದ್ಧರಾಮಯ್ಯ, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ, ಕಂದಾಯ ಸಚಿವ ವಿ. ಶ್ರೀನಿವಾಸ ಪ್ರಸಾದ್, ಆರೋಗ್ಯ ಸಚಿವ ಯು.ಟಿ. ಖಾದರ್, ಕೇಂದ್ರ ಭೂ ಸಾರಿಗೆ ಸಚಿವ ಆಸ್ಕರ್ ಫರ್ನಾಂಡಿಸ್, ಸಿದ್ಧಗಂಗಾ ಮಠದ ಡಾ. ಶಿವಕುಮಾರ ಸ್ವಾಮೀಜಿ, ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

**ರಾಜೇಂದ್ರ ಶ್ರೀಗಳ ಕನಸು ನನಸಾಗಿದೆ**

"ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನದ ಹಿರಿಯ ಸ್ವಾಮೀಜಿಗಳಾಗಿದ್ದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕನಸು ಇಂದು ನನಸಾಗಿದೆ" ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿಯವರು ನುಡಿದರು.

ಜೆಎಸ್‌ಎಸ್ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮೇಲಿನಂತೆ ಹೇಳುವ ಮೂಲಕ ಧನ್ಯತಾಭಾವವನ್ನು ವ್ಯಕ್ತಪಡಿಸಿರು.

ಸುತ್ತೂರು ಶ್ರೀಕ್ಷೇತ್ರದ 23ನೆಯ ಪೀಠಾಧ್ಯಕ್ಷರಾಗಿದ್ದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು 1974 ರಲ್ಲಿ ಸಾರ್ವಜನಿಕ ಆರೋಗ್ಯಪಾಲನೆಯನ್ನು ಉದ್ದೇಶ ವಾಗಿಟ್ಟುಕೊಂಡು ರಾಮಾನುಜ ರಸ್ತೆಯಲ್ಲಿ ಆರಂಭಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾಲಾನಂತರ ಬೃಹತ್ ಆಸ್ಪತ್ರೆಯಾಗಿ ರೂಪುಗೊಂಡಿತು. ಇದೀಗ ಅದರ



ಪಕ್ಕದಲ್ಲೇ ಸುಸಜ್ಜಿತವಾದ 1800 ಹಾಸಿಗೆಗಳ ಸಾಮರ್ಥ್ಯವುಳ್ಳ ಅತ್ಯಾಧುನಿಕ ಆಸ್ಪತ್ರೆಯನ್ನು ನಿರ್ಮಿಸಿದ್ದು, ಅದನ್ನು ಇಂದು ರಾಷ್ಟ್ರಪತಿಗಳಾದ ಪ್ರಣವ್ ಮುಖರ್ಜಿ ಅವರು ಉದ್ಘಾಟಿಸಿದ್ದಾರೆ. ಆ ಮೂಲಕ ಸಮಾಜದ ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಉತ್ತಮ ಹಾಗೂ ಅತ್ಯಾಧುನಿಕ ಆರೋಗ್ಯ ಸೇವೆಯನ್ನು ನೀಡಬೇಕೆಂಬ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳು ಕಂಡಿದ್ದ ಕನಸು ಇಂದು ನನಸಾಗಿದೆ ಎಂದು ಹೇಳಿದರು.

**ಬಡವರಿಗೆ ಚಿಕಿತ್ಸೆಯೇ ದೊಡ್ಡ ಸೇವೆ**

"ಆರೋಗ್ಯ ರಕ್ಷಣೆಗಾಗಿ ಹೆಣಗಾಡುತ್ತಿರುವ ಬಡವರಿಗೆ ಉಚಿತ ಚಿಕಿತ್ಸೆ ನೀಡಿದರೆ ಅದಕ್ಕಿಂತ ದೊಡ್ಡ ಸೇವೆ ಮತ್ತೊಂದಿಲ್ಲ" ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅಭಿಪ್ರಾಯಪಟ್ಟರು.

ನಗರದ ಅಗ್ರಹಾರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಏರ್ಪಡಿಸಿದ್ದ ಜೆಎಸ್‌ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ 'ಪ್ರಸಾದ' ವಿಶೇಷ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಮಾಜದಲ್ಲಿ ಆರೋಗ್ಯ ರಕ್ಷಣೆಯೇ ಪ್ರಮುಖ. ಕಿಡ್ನಿ, ಹೃದಯಸಂಬಂಧಿ ಕಾಯಿಲೆಗಳಿಂದ ನರಳುವ ಬಡವರಿಗೆ ಚಿಕಿತ್ಸೆ ಪಡೆಯಲು ಸಾಧ್ಯವಾಗುವುದಿಲ್ಲ. ಎರಡರಿಂದ ಮೂರು ಲಕ್ಷ ರೂಪಾಯಿ ಚಿಕಿತ್ಸಾ ವೆಚ್ಚವನ್ನು ಭರಿಸಲು ಅವರಿಗೆ ಶಕ್ತಿ ಇರುವುದಿಲ್ಲ, ಅಂಥವರಿಗೆ ಆಸ್ಪತ್ರೆಗಳಿಂದ ಉಚಿತ ಸೇವೆ ದೊರೆತರೆ ಉತ್ತಮ ಎಂದು ಸಲಹೆ ನೀಡಿದರು.

ಅಕ್ಷರ ಮತ್ತು ಅನ್ನ ದಾಸೋಹದಲ್ಲಿ ಸುತ್ತೂರು ಮಠದ ಸಾಧನೆ ಶ್ಲಾಘನೀಯ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಆರಂಭಿಸಿದ ಈ ಎರಡೂ ದಾಸೋಹಗಳು ಹಿಂದುಳಿದವರನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುತ್ತಿವೆ. ದೇಶದ ವಿವಿಧೆಡೆ ಜೆಎಸ್‌ಎಸ್‌ನ 350ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಶಿಕ್ಷಣ ನೀಡುತ್ತಿವೆ. ಪ್ರಾಥಮಿಕ ಶಾಲೆಯಿಂದ ಸಂಶೋಧನಾ ಕೇಂದ್ರದವರೆಗೆ ಜೆಎಸ್‌ಎಸ್ ಮಹಾವಿದ್ಯಾಪೀಠ ವಿಸ್ತಾರಗೊಂಡಿದೆ. ಸುತ್ತೂರು ಗ್ರಾಮವೊಂದರಲ್ಲೇ ನಾಲ್ಕು ಸಾವಿರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಮಕ್ಕಳಿಗೆ ಊಟ, ವಸತಿ ಮತ್ತು ಶಿಕ್ಷಣವನ್ನು ಉಚಿತವಾಗಿ ನೀಡುತ್ತಿರುವುದು ಶ್ಲಾಘನೀಯ. ವೈದ್ಯಕೀಯ ಕ್ಷೇತ್ರದಲ್ಲಿ ಮಠದ ಸೇವೆ ಗಮನಾರ್ಹ ಎಂದರು.

ನಡೆದಾಡುವ ದೇವರೆಂದೇ ಖ್ಯಾತರಾದ ಸಿದ್ಧಗಂಗೆಯ ಡಾ. ಶಿವಕುಮಾರ

ಸ್ವಾಮೀಜಿಯವರು ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶ್ರೀನಿವಾಸ ಪ್ರಸಾದ್, ಆರೋಗ್ಯ ಸಚಿವ ಶ್ರೀ ಯು.ಟಿ. ಖಾದರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ, ಸಹಕಾರಿ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್, ಲೋಕೋಪಯೋಗಿ ಸಚಿವ ಶ್ರೀ ಎಚ್.ಸಿ. ಮಹದೇವಪ್ಪ, ಲೋಕಸಭಾ ಸದಸ್ಯ ಶ್ರೀ ಅಭಿಜಿತ್ ಮುಖರ್ಜಿ, ಶಾಸಕರಾದ ಶ್ರೀ ತನ್ವೀರ್ ಸೇಠ್, ಶ್ರೀ ವಾಸು, ಶ್ರೀ ಎಂ.ಕೆ. ಸೋಮಶೇಖರ್ ಮುಂತಾದ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

□

ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು.
ಅಯ್ಯಾ ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು ಕಡಿಕಡಿದು
ಅರೆದರೆದು ಅನು ಮಾಡಿದ ಕಾರಣ ಎನ್ನ ಮನ ಶುದ್ಧವಾಯಿತ್ತು.
ಎನ್ನ ಸರ್ವಭೋಗಾದಿಭೋಗಂಗಳೆಲ್ಲ ನಿಮ್ಮ ಶರಣರಿಗರ್ಪಿತವಾಗಿ
ಎನ್ನ ಪ್ರಾಣ ಶುದ್ಧವಾಯಿತ್ತು.
ಎನ್ನ ಸರ್ವೇಂದ್ರಿಯಂಗಳೆಲ್ಲವು ನಿಮ್ಮ ಶರಣರ ಪ್ರಸಾದವ ಕೊಂಡ ಕಾರಣ
ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯಾ
ನಿಮ್ಮ ಶರಣರಿಂತು ಎನ್ನನಾಗುಮಾಡಿದ ಕಾರಣ
ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣರಿಗೆ ತೊಡಿಗೆಯಾದೆನಯ್ಯಾ ಪ್ರಭುವೆ !

**- ಅಕ್ಕಮಹಾದೇವಿ**



ಸುತ್ತೂರು ಶ್ರೀಮಠದ ಪುನರ್ನಿರ್ಮಿತ ಕಟ್ಟಡದ ಪ್ರವೇಶೋತ್ಸವ ಸಂದರ್ಭದಲ್ಲಿ ಶ್ರೀ ಸಿದ್ಧಗಂಗಾ ಮಠದ ಪೂಜ್ಯ ಡಾ. ಶ್ರೀ ಶಿವಕುಮಾರ ಮಹಾ ಸ್ವಾಮೀಜಿಯವರಿಗೆ ಶ್ರೀ ಎಚ್. ಗಂಗಾಧರನ್ ರವರು ಅಷ್ಟೋತ್ತರ ಶತನಾಮ ಪ್ರಾರ್ಥನೆಯನ್ನು ಸಮರ್ಪಿಸಿದರು. ಚಿತ್ರದಲ್ಲಿ  ಪರಮ ಪೂಜ್ಯ ಶ್ರೀಗಳವರುನ್ನು ಕಾಣಬಹುದು




ಪದ್ಮಶ್ರೀ ಡಾ. ಎಂ. ಮಹದೇವಪ್ಪ ಅವರ ಅಭಿನಂದನಾ ಸಮಾರಂಭದಲ್ಲಿ ಶ್ರೀ ಗೊ.ರು.ಚ., ಶ್ರೀ ಎಂ.ವಿ. ರಾಜಶೇಖರನ್, ಶ್ರೀಮತಿ ಸುಧಾ ಮಹದೇವಪ್ಪ, ಡಾ. ಎಂ. ಮಹದೇವಪ್ಪ, ಪರಮ ಪೂಜ್ಯ ಶ್ರೀಗಳವರು, ಸಚಿವರಾದ ಶ್ರೀ ಟಿ.ಬಿ. ಜಯಚಂದ್ರ



ಸುತ್ತೂರು ಶ್ರೀಮಠದ ಪುನರ್ನಿರ್ಮಿತ ಕಟ್ಟಡದ ಪ್ರವೇಶೋತ್ಸವ ಸಂದರ್ಭದಲ್ಲಿ ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡ ಅವರು ಪರಮಪೂಜ್ಯ ಶ್ರೀಗಳವರೊಡನೆ ಸಂವಾದ ನಡೆಸುತ್ತಿರುವುದು



ಪರಮಪೂಜ್ಯ ರಾಜೇಂದ್ರ ಶ್ರೀಗಳವರ 98ನೆಯ ಜಯಂತಿ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರು ಮಹಾಸ್ವಾಮಿಗಳವರು ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಉದ್ಯೋಗಿಗಳಿಗೆ ಆಶೀರ್ವದಿಸಿ ಸನ್ಮಾನಿಸಿದರು. ಚಿತ್ರದಲ್ಲಿ ವಾಟಾಳು ಶ್ರೀಗಳವರನ್ನೂ ಕಾಣಬಹುದು



ಸುತ್ತೂರಿನ ಶ್ರೀಮಠದ ಪುನರ್ನಿರ್ಮಿತ ಕಟ್ಟಡದ ಪ್ರವೇಶೋತ್ಸವ ಸಂದರ್ಭದಲ್ಲಿ ಪರಮಪೂಜ್ಯ ಶ್ರೀಗಳವರು ಮತ್ತು ಮಾಜಿ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್‌ರವರು



ಪರಮಪೂಜ್ಯ ರಾಜೇಂದ್ರ ಶ್ರೀಗಳವರ 98ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಮಠಾಧಿಪತಿಗಳ ಗೋಷ್ಠಿಯ ವತಿಯಿಂದ ಕೊಡ ಮಾಡುವ ಪುರಸ್ಕಾರವನ್ನು ಶ್ರೀ ನೀಲಕಂಠಸ್ವಾಮಿ ಮಠದ ಶ್ರೀಗಳವರು ನೀಡುತ್ತಿರುವುದು. ಚಿತ್ರದಲ್ಲಿ ಪರಮಪೂಜ್ಯ ಶ್ರೀಗಳು ಹಾಗೂ ವಾಟಾಳು ಶ್ರೀಗಳವರನ್ನು ಕಾಣಬಹುದು



ಸುತ್ತೂರಿನ ಶ್ರೀಮಠದ ಪುನರ್ನಿರ್ಮಿತ ಕಟ್ಟಡದ ಪ್ರವೇಶೋತ್ಸವ ಸಂದರ್ಭದಲ್ಲಿ ಪರಮಪೂಜ್ಯ ಶ್ರೀಗಳು, ಸಿದ್ಧಗಂಗಾ ಶ್ರೀಗಳು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಹಾಗೂ ಮತ್ತಿತರರು




ಮೈಸೂರು ಬಸವ ಬಳಗಗಳ ಒಕ್ಕೂಟದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನ: ಚಿತ್ರದಲ್ಲಿ ರಾಜಶೇಖರ ಕೋಟಿ, ಡಾ. ಸಿ. ಸೋಮಶೇಖರ, ಸಂಸದ ಶ್ರೀ ಹೆಚ್. ವಿಶ್ವನಾಥ್, ಪರಮಪೂಜ್ಯ ಶ್ರೀಗಳು, ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಶಾಸಕ ಶ್ರೀ ಗೋ. ಮಧುಸೂದನ್ ಹಾಗೂ ಅಭಿನಂದಿತರು.